JSS MAHAVIDYAPEETHA

**JSS COLLEGE OF ARTS, COMMERCE AND SCIENCE**
**(An autonomous collage of university of Mysore)**
**BN ROAD, MYSORE-570025 KARNATAKA**
**Reaccredited by NAAC with 'A' grade**

# UGC OF MINOR RESEARCH PROJECT

**TITLE OF THE PROJECT**

# *MISTYSISM IN THE VACHANAS OF GHANALINGA SHIVAYOGI*

## *(ಘನಲಿಂಗ ಶಿವಯೋಗಿಗಳ ವಚನಗಳಲ್ಲಿ ಅನುಭಾವ)*

**MRP(H) -0918/13-14/KAMY013/UGC-SWRO**

**SUBMITTED TO**

ज्ञान - विज्ञानं विमुक्तये

*DEPUTY SECRETORY*
*UNIVERSITY GRANTS COMMISSION*
*SOUTH WESTERN REGIONAL OFFICE (SWRO)*
*PRASANA KUMAR BLOCK, PALACE ROAD*
*BENGALURU- 560 009 (KARNATAKA)*

**SUBMITTED BY**

***DR.H.TSHYLAJA***
***Associate Professor***
***Undrer Graduate Department Of Kannada***

## JSS COLLEGE OF ARTS, COMMERCE AND SCIENCE
## BN ROAD, MYSORE-570025 KARNATAKA

**Ph: 0821-2548236 & 2548380 Fax : 0821-2548238 , Web site : www.jsscacs.edu.in E-mail: jssautonomous@gmail.com**

**Annexure -VII**

**UNIVERSITY GRANTS COMMISSION**
**BAHADUR SHAH ZAFAR MARG**
**NEW DELHI – 110 002.**

**Final Report of the work done on the Minor Research Project.**

| | | |
|---|---|---|
| 1. | Title of the project | **MYSTICISM IN THE VACHANAS OF GHANALINGA SHIVAYOGI** |
| 2. | Name of the Principal Investigator | Dr. H.T SHYLAJA |
| 3. | Name and address of the institution College where work has progressed | JSS College of Arts, Commerce & Science BN Road, Mysore-25 |
| 4. | UGC Approval letter and date | MRP (H) 0918/13-14/KAMY013/UGC-SWRO dated 15-Fed-2014 |
| 5. | Date of implementation | 15-Feb-2014 |
| 6. | Tenure of the Project | 2014-2017 |
| 7. | a. Total GrantAllocated | **Rs. 45000/-** |
| 8. | b. Total Grant Received | |
| 9. | Final expenditure | Rs.45100/- |
| 10. | Title of the project | Mysticism in the Vachanas of Ghanalinga Shivayogi |
| 11. | i. Brief objective of the project | To know about their sources of inspiration spiritual thinking environment and experience social and cultural aspects of that period. Based on his vachanas, we can note down the cultural sensibility on spiritual and social world during that period |
| 12. | Whether Objectives were achieved | Enclosed |
| 13. | Achievements from the project | Discussed their sources of inspiration spiritual thinking environment and experience social and cultural aspects of that period. Based on his vachanas, we noted down the cultural sensibility on spiritual and social world during that period |
| 14. | Summaries of the finding | Discussed Ghanalinga shivayogi's inspiration of spiritual thinking environment and experience social and cultural aspects of that period. Based on his vachanas, we noted down the cultural sensibility on spiritual and social world during that period |
| 15. | Contribution to the society | Based on that delivered many lectures on |

| | | |
|---|---|---|
| | | various social functions and gadrings |
| 16. | Whether any PH.D enrolled/produced out of the project | Not yet |
| 17. | Number of publications out of project | Not yet |

PRINCIPAL INVESTIGATOR PRINCIPAL

Annexure -VI

# UNIVERSITY GRANTS COMMISSION
# BAHADUR SHAH ZAFAR MARG
# NEW DELHI – 110 002.

## Final Report of the work done on the Minor Research Project.

| | | |
|---|---|---|
| 1. | Project report No. | **Final Report** |
| 2. | UGC Reference No. Ref. No. | MRP (H) 0918/13-14/KAMY013/UGC-SWRO |
| 3. | Period of report | from : 28th March 2014 to 31st March 2017 |
| 4. | Title of research project | **MYSTICISM IN THE VACHANAS OF GHANALINGA SHIVAYOGI** |
| 5. | (a) Name of the Principal Investigator | Dr. H.T SHYLAJA |
| | (b)Deptt. | Department of Kannada(UG) |
| | (c) College where work has progressed | JSS College of Arts, Commerce & Science BN Road, Mysore-25 |
| 6. | Effective date of starting of the project | 28-03-2014 |
| 7. | Grant approved and expenditure incurred during the period of the report | |
| | a. Total amount approved | **Rs. 45000/-** |
| | b. Total expenditure | **Rs. 45100/-** |
| | c. Report of the work done | **(Enclosed) final report** |
| | i. Brief objective of the project | To know about their sources of inspiration spiritual thinking environment and experience social and cultural aspects of that period. Based on his vachanas, we can note down the cultural sensibility on spiritual and social world during that period |
| | ii. Work done so far and results achieved and publications, if any, resulting from the work (give details of the papers and names of the journals in which it has been published or accepted for publication) | Discussed their sources of inspiration spiritual thinking environment and experience social and cultural aspects of that period. Based on his vachanas, we noted down the cultural sensibility on spiritual and social world during that period |
| | iii. Has the progress been according to original plan of work and towards achieving the objective. if | The progress of the project work is according to the original plan |

| | | |
|---|---|---|
| | not, state reasons | |
| | iv.Please enclose a summary of the findings of the study. One bound copy of the final report of work done may also be sent to the concerned Regional Office of the UGC. | Enclosed |
| | v. Any other information | Soft copies of the project have been enclosed |

Signature of the Principal Investigator PRINCIPAL (Seal)

**JSS Mahavidyapeetha, Mysuru**

**JSS COLLEGE OF ARTS, COMMERCE & SCIENCE**

**(Autonomous college of mysore)**

**Accredited by NAAC with A Grade**

**Ooty Road, Mysuru-570025, Karnataka**

**Ph:0821-2548236 & 2548380, FAX: 0821-2548238 E –mail: jssautonomous@gmail.com**

**Website:www.jsscacs.edu.in**

**Date : 19-06-2017**

# DECLARATION

I hereby declare that the Minor research project (MRP (H)-0918/13-14/KAMY013/UGC-SWRO) entitled ***"MYSTICISM IN THE VACHANAS OF GHANALINGA SHIVAYOGI"*** is the result of bonafide work carried out by me.

I further declare that the results are not submitted for the award of any other degree or fellowship.

**PRINCIPAL INVESTIGATOR**

JSS Mahavidyapeetha, Mysuru

**JSS COLLEGE OF ARTS, COMMERCE & SCIENCE**

**(Autonomous college of mysore)**

**Accredited by NAAC with A Grade**

**Ooty Road, Mysuru-570025, Karnataka**

---

**Ph:0821-2548236 & 2548380, FAX: 0821-2548238 E –mail: jssautonomous@gmail.com**
**Website:www.jsscacs.edu.in**

**Date : 19-06-2017**

# CERTIFICATE

This is to certify that the Final Report of work done in the Minor Research Project (MRP (H)-0918/13-14/KAMY013/UGC-SWRO) entitled ***"MYSTICISM IN THE VACHANAS OF GHANALINGA SHIVAYOGI"*** carried out by Dr. **H.T SHYLAJA,** Associate Professor, Department of Kannada (UG) JSS College BN Road Mysuru-25, has been kept in the library of the college and the executive summary of the study has been posted on the website of the college.

**Principal**

# ಶ್ರೀಘನಲಿಂಗಶಿವಯೋಗಿಗಳವರ ವಚನಗಳಲ್ಲಿ ಅನುಭಾವ

## ಪರಿವಿಡಿ

ಪುಟ ಸಂಖ್ಯೆ


೧. ಶ್ರೀಘನಲಿಂಗಶಿವಯೋಗಿಗಳರ ಇತಿವೃತ

೧.೧ ದೇಶ – ೧–೩

೧.೨ ಕಾಲ – ೪–೫

೧.೩ ವೈಯಕ್ತಿಕ ಚರಿತ್ರೆ – ೫–೮

೧.೪ ಕೃತಿ ಸ್ವರೂಪ – ೮–೧೦

೨. ಕನ್ನಡ ಸಾಹಿತ್ಯದಲ್ಲಿ ಅನುಭಾವ – ೧೧–೧೫

೩. ಶ್ರೀಘನಲಿಂಗಶಿವಯೋಗಿಗಳವರ ವಚನಗಳಲ್ಲಿ ಅನುಭಾವ

೩.೧ಸಾಧಕನ ನೆಲೆಯಲ್ಲಿ ಅನುಭಾವ – ೧೬–೨೦

೩.೨ ಆಧ್ಯಾತ್ಮದ ನೆಲೆಯಲ್ಲಿ ಅನುಭಾವ

೩.೨.೧ವೈಯಕ್ತಿಕ ನೆಲೆಯಲ್ಲಿ ಅನುಭಾವ – ೨೦–೨೩

೩.೨.೨ ಸಾರ್ವತ್ರಿಕ ನೆಲೆಯಲ್ಲಿ ಅನುಭಾವ – ೨೩–೨೬

೩.೨.೩ ವೈಯಕ್ತಿಯಸಾರ್ವತ್ರಿಕ, ಸಾರ್ವತ್ರಿಕವೈಯಕ್ತಿಕ ನೆಲೆಯಲ್ಲಿ ಅನುಭಾವ – ೨೬–೨೯

೩.೨.೪ ಆಧ್ಯಾತ್ಮಿಕ ನೆಲೆಯಲ್ಲಿ ಅನುಭಾವ – ೨೯–೩೫

೩.೩ ಆತ್ಮಾವಲೋಕನದ ನೆಲೆಯಲ್ಲಿ ಅನುಭಾವ – ೩೬–೪೧

೩.೪ ಸಾಹಿತ್ಯದ ನೆಲೆಯಲ್ಲಿ ಅನುಭಾವ – ೪೧–೪೫

೪. ಉಪಸಂಹಾರ – ೪೬–೪೯

ಅನುಬಂಧ

ಪರಾಮರ್ಶನ ಗ್ರಂಥಗಳು

ಛಾಯಾಚಿತ್ರಗಳು

# ೧. ಶ್ರೀಘನಲಿಂಗಶಿವಯೋಗಿಗಳವರ ಇತಿವೃತ್ತ

ಭಾರತೀಯ ಇತಿಹಾಸ ರಚನೆಯಲ್ಲಿ ಸಾಹಿತ್ಯಚರಿತ್ರೆಯ ನಿರ್ಮಾಣ ಕಷ್ಟಸಾಧ್ಯವಾದುದು. ಶಾಸನಗಳಿಂದ, ಜನಪದ ಹಾಗೂ ಶಿಷ್ಟಸಾಹಿತ್ಯರಚನೆಗಳಿಂದ, ಕೈಫಿಯತ್ತು, ಬಖೈರು, ಶಿಲ್ಪ, ವಾಸ್ತುಶಿಲ್ಪ, ಸಂಗೀತ, ನೃತ್ಯ, ಚಿತ್ರಕಲೆ ಇತ್ಯಾದಿ ಮೂಲಗಳಿಂದ ನಮ್ಮ ದೇಶದ ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಕ ಇತಿಹಾಸವನ್ನು ರೂಪಿಸಬಹುದಾಗಿದೆ. ಆದರೆ ಸಾಹಿತ್ಯಚರಿತ್ರೆಯನ್ನು ಕಟ್ಟುವಲ್ಲಿ ರಾಜಾಶ್ರಿತಕವಿಗಳ ವಿಚಾರ ಸ್ವಲ್ಪಮಟ್ಟಿಗೆ ಖಚಿತನೆಲೆಯಲ್ಲಿ ರೂಪಿಸಬಹುದಾದರೂ ಸಾಮಾನ್ಯಕವಿಗಳ ವಿಚಾರವಂತೂ ಅಸ್ಪಷ್ಟವಾಗಿವೆ. ಅದರಲ್ಲಿ ಶ್ರೀಘನಲಿಂಗಶಿವಯೋಗಿಗಳಂತಹ ಧಾರ್ಮಿಕ ಗುರುಕವಿಗಳ ವಿಚಾರ ಸ್ವಲ್ಪಮಟ್ಟಿಗೆ ಉತ್ತಮವಾಗಿದೆ.ಏಕೆಂದರೆ ಅವರು ಮೈಸೂರುಜಿಲ್ಲೆಯ ನಂಜನಗೂಡುತಾಲ್ಲೂಕಿನ ಕಪಿಲಾತೀರದ ಶ್ರೀಮತ್ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನದ ಅಧಿಪತಿಗಳು ಹಾಗೂ ಶ್ರೀತೋಂಟದ ಸಿದ್ಧಲಿಂಗೇಶ್ವರಯತಿಗಳ ಶಿಷ್ಯರೂ ಆಗಿದ್ದುದು ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಅವರ ಕಾಲ,ದೇಶ, ಕೃತಿಗಳ ಬಗ್ಗೆ ಹೆಚ್ಚಿನ ಗೊಂದಲವಿಲ್ಲ.

## ೧.೧ದೇಶ:

ನಂಜನಗೂಡುತಾಲ್ಲೂಕಿನ ಕ್ರಿ.ಶ. ೧೫೧೪ರ ೩೯೫, ೩೯೬ ಮತ್ತು ೪೦೧ ನೆಯ ಒಟ್ಟು ಮೂರು ಶಾಸನಗಳಲ್ಲಿ ಆ ಕಾಲದಲ್ಲಿ ಸುತ್ತೂರಿನ ಪೀಠಾಧಿಪತಿಗಳಾಗಿದ್ದ ಶ್ರೀ ಭಂಡಾರಿಬಸವಪ್ಪಒಡೆಯರ ಬಗೆಗೆ ವಿವರಗಳನ್ನು ತಿಳಿಸುತ್ತದೆ.[೧] ಅದರ ಜೊತೆಗೆ ಶ್ರೀ ಘನಲಿಂಗಶಿವಯೋಗಿಗಳು ತಮ್ಮ ಪೂರ್ವಾಪರಗಳನ್ನು ವಿವರಿಸಿರುವಂತಹ ವಚನವೊಂದರಲ್ಲಿ ಹೀಗೆ ಹೇಳಿದ್ದಾರೆ:

**.......ಸುತ್ತೂರು ಸಿಂಹಾಸನದ**
**ಪರ್ವತದೇವರ ಶಿಷ್ಯರು**
**ಭಂಡಾರಿ ಬಸವಪ್ಪೊಡೆಯರು**
**ಆ ಭಂಡಾರಿ ಬಸವಪ್ಪೊಡೆಯದೇವರ ಶಿಷ್ಯರು**
**ಕೂಗಲೂರು ನಂಜಯ್ಯದೇವರು**
**ಆ ನಂಜಯ್ಯದೇವರ**
**ಕರಕಮಲದಲ್ಲಿ ಉದಯವಾದ ಶರಣವೆಣ್ಣಯ್ಯ ನಾನು**
**ಎನ್ನ ಗುರುವಿನ ಗುರು**
**ಪರಮಗುರು**
**ಪರಮಾರಾಧ್ಯ ತೋಂಟದಾರ್ಯನಿಗೆ**
**ಗುರುಭಕ್ತಿಯಿಂದೆನ್ನ ಶರಣುಮಾಡಿದರು**
**ಆ ತೋಂಟದಾರ್ಯನು**
**ತನ್ನ ಕೃಪೆಯೆಂಬ ತೊಟ್ಟಿಲೊಳಗೆನ್ನಂ ಮಲಗಿಸಿ**
**ಪ್ರಮಥಗಣಂಗಳ**
**ವಚನ ಸ್ವರೂಪ ತತ್ವಾರ್ಥವೆಂಬ**
**ಹಾಲುತುಪ್ಪವಂ ಸದಾ ದಣಿಯಲೆರೆದು**
**ಅಕ್ಕರಿಂದ ರಕ್ಷಣೆಯಂ ಮಾಡಿ**
**ಘನಲಿಂಗಿಯೆಂಬ ನಾಮಕರಣಮಂ ಕೊಟ್ಟು**
**ಪ್ರಾಯ ಸಮರ್ಥೆಯಂ ಮಾಡಿ**
**ಸತ್ಯ ಸದಾಚಾರ–ಜ್ಞಾನ–ಕ್ರೀಗಳೆಂಬ**
**ದಿವ್ಯಾಭರಣಂಗಳಂ ತೊಡಿಸಿ**
**ಅರಿವೆಂಬ ಬಣ್ಣವ ನಿರಿವಿಡಿದುಡಿಸಿ**
**ಅರ್ತಿಯ ಮಾಡುತ್ತಿಪ್ಪ ಸಮಯದಲ್ಲಿ**
**ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಂ**
**ತನಗೆ ನಾನಾಗಬೇಕೆಂದು**
**ಬೇಡಿ ಕಳುಹಲು**
**ಎಮ್ಮವರು ಅವರಿಂಗೆ ಮಾತನಿಕ್ಕಿದರಮ್ಮಾ ! (೩)**

ಈ ಸುದೀರ್ಘ ವಚನದಿಂದ ಶ್ರೀಘನಲಿಂಗಶಿವಯೋಗಿಗಳ ಇತಿವೃತ್ತದ ಕೆಲವು ವಿಚಾರಗಳು ತುಂಬಾ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.ಅವರು ಶ್ರೀಮತ್ ಸುತ್ತೂರು ವೀರಸಿಂಹಾಸನದ ತಮ್ಮ ಹಿಂದಿನ ಮೂರು ತಲೆಮಾರಿನ ಗುರುಪರಂಪರೆಯನ್ನು ಇಲ್ಲಿ ಹೇಳಿದ್ದಾರೆ. ಆ ಮಠದ ಪೂರ್ಣಗುರುಪರಂಪರೆ ಹೀಗಿದೆ:

**ಶ್ರೀ ಶಿವರಾತ್ರೀಶ್ವರ ಭಗವತ್ಪಾದರರು**

**ಶ್ರೀ ಈಶಾನ ಈಶ್ವರ ಒಡೆಯರು**
**ಶ್ರೀ ನಿಜಲಿಂಗ ಶಿವಾಚಾರ್ಯರು**
**ಶ್ರೀ ಸಿದ್ಧನಂಜದೇಶಿಕೇಂದ್ರರು.**
**ಶ್ರೀ ಕಪಿನೀ ನಂಜುಂಡ ದೇಶಿಕೇಂದ್ರರು**
**ಶ್ರೀ ಚನ್ನವೀರದೇಶಿಕೇಂದ್ರರು**
**ಶ್ರೀ ಸಿದ್ದಮಲ್ಲ ಶಿವಾಚಾರ್ಯರು**
**ಶ್ರೀ ಪರ್ವತೇಂದ್ರ ಶಿವಾಚಾರ್ಯರು**
**ಶ್ರೀ ಭಂಡಾರಿ ಬಸವಪ್ಪ ಒಡೆಯರು**
**ಶ್ರೀ ಕೂಗಲೂರು ನಂಜುಂಡದೇಶಿಕೇಂದ್ರರು**
**ಶ್ರೀ ಘನಲಿಂಗಶಿವಯೋಗಿಗಳು**
**ಶ್ರೀ ಇಮ್ಮಡಿ ಶಿವರಾತ್ರೀಶ್ವರರು**

ಈ ಗುರುಪರಂಪರೆಯ ಹಿನ್ನೆಲೆಯಲ್ಲಿ ಶ್ರೀಘನಲಿಂಗಶಿವಯೋಗಿಗಳ ಊರು ಸುತ್ತೂರೋ ಅಥವಾ ಅವರ ಗುರುವಿನ ಊರಾದ ಕೂಗಲೂರೋ ಎಂಬುದು ಸ್ಪಷ್ಟವಿಲ್ಲ ಎನ್ನುತ್ತಾರೆ ವಿದ್ವಾಂಸರು.[೨] ಸುತ್ತೂರು ಹಿಂದಿನಿಂದಲೂ ಸಾಹಿತ್ಯ, ಧರ್ಮ, ಆಧ್ಯಾತ್ಮಗಳ ತವರೂರಾಗಿತ್ತು.ಶ್ರೀಮಠದ ಆದಿಗುರು ಶ್ರೀ ಶಿವರಾತ್ರೀಶ್ವರರ ಹೆಸರು ಪಂಡಿತಾರಾಧ್ಯರ 'ಗಣಸಹಸ್ರನಾಮ'ದಲ್ಲಿ ಉಲ್ಲೇಖವಾಗಿದೆ.ಶ್ರೀಸಿದ್ಧನಂಜದೇಶಿಕೇಂದ್ರರು 'ಪರಮಶಿವಾಧಿಕ್ಯಶಿಖಾಮಣಿ'ಯನ್ನು ರಚಿಸಿದ್ದಾರೆ.ಶ್ರೀಘನಲಿಂಗಶಿವಯೋಗಿಗಳ ಅನಂತರದ ಶ್ರೀಇಮ್ಮಡಿಶಿವರಾತ್ರೀಶ್ವರರು 'ವೃಷಭೇಂದ್ರವಿಜಯಪುರಾಣ'ವನ್ನು, ಚೆನ್ನಬಸವಶಿವಾಚಾರ್ಯರು 'ಚೋಳರೇಣುಕ ಸಂವಾದ'ವನ್ನು ರಚಿಸಿ ಪ್ರಾಚೀನಧಾರ್ಮಿಕ, ಸಾಹಿತ್ಯಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ.[೩] ಅಂತೆಯೇ ಶ್ರೀಘನಲಿಂಗಶಿವಯೋಗಿಗಳೂ ವಚನಗಳನ್ನು ರಚಿಸಿ ಕನ್ನಡಸಾಹಿತ್ಯಚರಿತ್ರೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದ್ದಾರೆ.

## ೧.೨ ಕಾಲ :

ತೋಂಟದಸಿದ್ಧಲಿಂಗಯತಿಗಳ ಕಾಲವನ್ನು ಶ್ರೀಘನಲಿಂಗಶಿವಯೋಗಿಗಳ ಕಾಲದ ಹಿನ್ನೆಲೆಯಲ್ಲಿ ಸು.ಕ್ರಿ.ಶ. ೧೫೦೦ ರಿಂದ ೧೫೮೦ ಎಂದು ವಿದ್ವಾಂಸರು ಗುರುತಿಸಿದ್ದಾರೆ.[೪] ಇದಕ್ಕೆ ಆಧಾರವಾಗಿ ಸು.೧೫೬೦ರಲ್ಲಿ ರಚಿತವಾದ ವಿರಕ್ತತೋಂಟದಾರ್ಯನ 'ಶ್ರೀಸಿದ್ಧೇಶ್ವರಪುರಾಣ'ದ ೧೫ನೆಸಂಧಿಯ ೪೬ನೆಯ ಪದ್ಯದಲ್ಲಿ ಬರುವ ತುಮಕೂರಿನಲ್ಲಿ ನಡೆದ ಸಿದ್ಧಲಿಂಗರ ಪಲ್ಲಕ್ಕಿಉತ್ಸವದ ಸಂದರ್ಭದಲ್ಲಿ ಶ್ರೀಘನಲಿಂಗಶಿವಯೋಗಿಗಳು ಭಾಗವಹಿಸಿದ್ದರು ಎಂಬ ವಿಚಾರ ಅವರ ಕಾಲನಿರ್ಣಯಕ್ಕೆ ಮುಖ್ಯ ಆಕರವಾಗುತ್ತದೆ. ಜೊತೆಗೆ ಅಲ್ಲಿಯೇ ಶ್ರೀಘನಲಿಂಗಶಿವಯೋಗಿಗಳವರೊಡನೆ ಸುತ್ತೂರು ವೀರಸಿಂಹಾಸನದ ಏಳನೆಯ ಜಗದ್ಗುರುಗಳಾದ ಶ್ರೀಸಿದ್ಧಮಲ್ಲಶಿವಾಚಾರ್ಯರನ್ನೂ ಉಲ್ಲೇಖಿಸಿದ್ದಾನೆ. ಆದರೆ ಘನಲಿಂಗಶಿವಯೋಗಿಗಳವರು ತಮ್ಮ ವಚನದಲ್ಲಿ ತಮಗಿಂತ ಹಿಂದಿನ ಮೂವರು ಗುರುಗಳನ್ನು ಮಾತ್ರ ಹೆಸರಿಸಿದ್ದಾರೆಯೇ ಹೊರತು ನಾಲ್ಕನೆಯ ಗುರುಗಳಾದ ಇವರ ಹೆಸರನ್ನು ಹೇಳಿಲ್ಲ. ಆದರೆ ಆತ ಹೇಳಿರುವ 'ಎನ್ನಗುರುವಿನ ಗುರು ಪರಮಗುರು ಪರಮಾರಾಧ್ಯ' ಎಂಬುದನ್ನು ಸಿದ್ಧಮಲ್ಲಶಿವಾಚಾರ್ಯರೆಂದು ಶೀಲಾಕುಮಾರಿಯವರು ಹೇಳುತ್ತಾರೆ.[೫] ಆದರೆ ಅದಕ್ಕೆ ಸ್ಪಷ್ಟತೆಯಿಲ್ಲ.

ಗುಬ್ಬಿಯ ಶಾಂತೇಶನ ಸು.೧೫೬೧ರ 'ಸಿದ್ಧೇಶ್ವರಪುರಾಣ'ದಲ್ಲಿನ ೧-೧೧ರ ಪದ್ಯದಲ್ಲಿ ಸಿದ್ಧಲಿಂಗರ ಉಲ್ಲೇಖ ಬರುತ್ತದೆ. ಅಲ್ಲದೆ ವಿರೂಪಾಕ್ಷಪಂಡಿತನು(ಕ್ರಿ.ಶ.೧೫೮೪)ತನ್ನ 'ಚೆನ್ನಬಸವಪುರಾಣ'ದಲ್ಲಿನ ೬೩-೪೭ರಲ್ಲಿ ಶ್ರೀಘನಲಿಂಗಶಿವಯೋಗಿಗಳು

ಸಿದ್ಧಲಿಂಗಯತಿಗಳ ಶಿಷ್ಯವರ್ಗಕ್ಕೆ ಸೇರಿದವರೆಂದು ಉಲ್ಲೇಖಿಸಿದ್ದಾನೆ. ಫ.ಗು. ಹಳಕಟ್ಟಿಯವರ 'ನಿರಂಜನವಂಶರತ್ನಾಕರ' ಸಂಪಾದಿತಕೃತಿಯಲ್ಲಿಯೂ ಇವರ ಉಲ್ಲೇಖ ಬರುತ್ತದೆ.[೬] ಶ್ರೀಘನಲಿಂಗಶಿವಯೋಗಿಗಳವರ ವಚನವು ಎಳಮಲೆಗುರುಶಾಂತದೇವರ (೧೬೨೫) ಮತ್ತು ಸಂಪಾದನೆಬೋಳಬಸವರ(೧೬೨೦) ವಚನಸಂಕಲನಗಳಲ್ಲಿ ಹಾಗೂ ಅಜ್ಞಾತ ವಚನಸಂಕಲನಗಳಾದ 'ನಿಷ್ಕಲಲಿಂಗಚಿದಾನಂದಲೀಲೆ' ಮತ್ತು 'ಭಕ್ತ್ಯಾನಂದಸುಧಾರ್ಣವ'ಗಳಲ್ಲಿ ಸಂಕಲನಗೊಂಡಿರುವುದನ್ನು ಕಾಣಬಹುದು.[೭] ಆರ್.ನರಸಿಂಹಾಚಾರ್ಯರು 'ಕವಿಚರಿತೆ'ಯಲ್ಲಿಹೇಳಿದ ಶ್ರೀಘನಲಿಂಗಶಿವಯೋಗಿಗಳವರ ಕಾಲವನ್ನು (ಕ್ರಿ.ಶ.೧೪೮೦) ಎಸ್. ಶಿವಣ್ಣನವರು ತಮ್ಮ ಲೇಖನದಲ್ಲಿ ವಿವರವಾಗಿ ಪರಿಶೀಲಿಸಿ, ಪರಿಷ್ಕರಿಸಿ ತೋಂಟದಸಿದ್ಧಲಿಂಗೇಶ್ವರರ ಕಾಲವನ್ನು ಸುಮಾರು ಕ್ರಿ.ಶ ೧೫೮೦ ಎಂದಿದ್ದಾರೆ.ಇವುಗಳ ಆಧಾರದಿಂದ ತೋಂಟಾದಸಿದ್ಧಲಿಂಗೇಶ್ವರರ ಕಿರಿಯ ಸಮಕಾಲೀನರಾದ ಶ್ರೀಘನಲಿಂಗಶಿವಯೋಗಿಗಳವರ ಕಾಲವನ್ನು ಸುಮಾರು ಕ್ರಿ.ಶ.೧೫೬೦ ಎಂದಿದ್ದಾರೆ ಬಿ.ನಂಜುಂಡಸ್ವಾಮಿಯವರು.[೮] ಇವೆಲ್ಲವುಗಳ ಆಧಾರದಿಂದ ಪ್ರೊ.ಚಂದ್ರಶೇಖರಯ್ಯನವರು ಕ್ರಿ. ಶ. ೧೫೫೫ರ ವೇಳೆಗೆ ಶ್ರೀಘನಲಿಂಗಶಿವಯೋಗಿಗಳು ೨೫–೩೦ ವರ್ಷದವರಾಗಿದ್ದು ಸು. ೧೫೨೫ ರ ಆಸುಪಾಸಿನಲ್ಲಿ ಜನಿಸಿರಬೇಕು ಎನ್ನುತ್ತಾರೆ.[೯] ಸುತ್ತೂರು ಗುರುಪರಂಪರೆಯ ಕಾಲವನ್ನು ಸಮೀಕ್ಷಿಸಿದ ಡಿ. ಶೀಲಾಕುಮಾರಿಯವರು ಅವರ ಕಾಲವನ್ನು ೧೫ನೇ ಶ.ದ ಉತ್ತರಾರ್ಧದಿಂದ ೧೬ನೆಯ ಶ.ದ ಪೂರ್ವೋತ್ತರಕಾಲ ಎಂದು ನಿರ್ಣಯಿಸುತ್ತಾರೆ.[೧೦]

ಇನ್ನು ಶ್ರೀಘನಲಿಂಗಶಿವಯೋಗಿಗಳವರು ಎಷ್ಟು ವರ್ಷಗಳವರೆಗೆ ಜೀವಿಸಿದ್ದರೆಂಬುದಕ್ಕೆ ಖಚಿತ ಮಾಹಿತಿಗಳು ಲಭ್ಯವಿಲ್ಲ.ಆದರೆ ತೋಂಟದಾರ್ಯರು ಶ್ರೀಘನಲಿಂಗಶಿವಯೋಗಿಗಳು ಈರ್ವರೂ ಒಬ್ಬರನ್ನೊಬ್ಬರು ಅಗಲದೆ ಆತ್ಮಬಂಧುಗಳಾಗಿ ಜೊತೆಯಾಗಿಯೇ ಪರಮಗುರಿ ಸಾಧಿಸಿರುವುದು ಕಂಡುಬರುತ್ತದೆ.ಅದಕ್ಕೆ ಜ್ವಲಂತ ನಿದರ್ಶನವೆಂದರೆ ತೋಂಟದಸಿದ್ಧಲಿಂಗೇಶ್ವರರು ಐಕ್ಯವಾಗುವವರೆಗೂ ಶ್ರೀಘನಲಿಂಗಶಿವಯೋಗಿಗಳವರು ಅವರ ಜೊತೆಗೆ ಒಟ್ಟಾಗಿ ಇದ್ದುದು ಕಂಡುಬರುತ್ತದೆ.ಅದಕ್ಕೆ ಸಾಕ್ಷಿಯಾಗಿ ಶ್ರೀಘನಲಿಂಗಶಿವಯೋಗಿಗಳವರ ಸಮಾಧಿಯು ಶ್ರೀತೋಂಟದಾರ್ಯರ ಸಮಾಧಿ ಇರುವ ಎಡೆಯೂರಿಗೆ ಸಮೀಪದಲ್ಲಿರುವ ಶ್ರೀ ತೋಂಟದಾರ್ಯರ ತಪೋಭೂಮಿಯಾದ ಕಗ್ಗೆರೆಯಲ್ಲಿಯೇ ಇದೆ ಎಂಬುದು ವಿಶೇಷವಾಗಿದೆ.ಇವರಲ್ಲಿ ಯಾರು ಮೊದಲು ಐಕ್ಯರಾದರೆಂದು ಹೇಳುವುದು ಕಷ್ಟಸಾಧ್ಯವಾದರೂ ವಯೋಮಾನದ ಹಿನ್ನೆಲೆಯಲ್ಲಿ ಬಹುಶಃ ಶ್ರೀಸಿದ್ಧಲಿಂಗೇಶ್ವರರು ಮೊದಲು ಸು ೧೫೮೦–೮೫ರಲ್ಲಿ ಐಕ್ಯರಾಗಿರಬೇಕು.ಅನಂತರ ಅವರ ತಪೋಭೂಮಿಯ ಭಾವನಾತ್ಮಕ ಸಂಬಂಧ ಉಳಿಸಿಕೊಂಡೇ ಬಂದಿದ್ದ ಶ್ರೀಘನಲಿಂಗಶಿವಯೋಗಿಗಳು ಅವರ ಧರ್ಮಪ್ರಸಾರ ಕಾರ್ಯವನ್ನು ಮುಂದುವರಿಸುತ್ತಾ ಕೊನೆಗಾಲಕ್ಕೆ ತೋಂಟದ ಸಿದ್ಧಲಿಂಗರ ತಪೋಭೂಮಿ ಕಗ್ಗೆರೆಯಲ್ಲೇ ಐಕ್ಯವಾಗಲು ನಿರ್ಧರಿಸಿರಬೇಕು.ತಮ್ಮ ಅಂತಿಮ ದಿನಗಳನ್ನು ಕಗ್ಗೆರೆಯಲ್ಲಿ ಕಳೆದು ಅಲ್ಲಿಯೇ ಬಯಲಾಗಿರಬಹುದು.ಅಲ್ಲಿಯೇ ಅವರ ಸಮಾಧಿ ಇರುವುದು ಇದಕ್ಕೆ ಸಾಕ್ಷಿಯಾಗಿದೆ.ಅವರು ಸು.ಕ್ರಿ.ಶ. ೧೬೦೦ ರಲ್ಲಿ ಐಕ್ಯರಾಗಿರಬೇಕು ಎಂದು ಪ್ರೊ.ಚಂದ್ರಶೇಖರಯ್ಯನವರು ಊಹಿಸಿರುವುದು[೧೧] ಸಾಧುವಾಗಿಯೇ ಇದೆ.

### ೧.೩ ವೈಯಕ್ತಿಕ ಚರಿತ್ರೆ :

ಶ್ರೀಘನಲಿಂಗಶಿವಯೋಗಿಗಳವರ ಹಿಂದೆ ಉಲ್ಲೇಖಿಸಿದ ಬಹುಮುಖ್ಯವಾದ ವಚನವು ಅವರು ಶ್ರೀಸುತ್ತೂರುಮಠದ ಗುರುಪರಂಪರೆಯಲ್ಲಿ ಪರ್ವತದೇವರ ಶಿಷ್ಯರಾದ ಭಂಡಾರಿ ಬಸವಪ್ಪೊಡೆಯರ, ಶಿಷ್ಯರಾದ ಕೂಗಲೂರು ನಂಜಯ್ಯದೇವರ ಕರಕಮಲಸಂಜಾತರೆಂಬುದನ್ನು ತಿಳಿಸುತ್ತದೆ.ಅಷ್ಟೇಅಲ್ಲದೆ ತಮ್ಮ ಗುರುವಿನಗುರು ಪರಮಗುರು ಎಂದರೆ ಪರ್ವತೇಂದ್ರ ಶಿವಾಚಾರ್ಯರು ಅವರ ಪರಮಾರಾಧ್ಯರಾದ ತೋಂಟದಾರ್ಯನಿಗೆ ಗುರುಭಕ್ತಿಯಿಂದ ತನ್ನನ್ನು ಶರಣು ಮಾಡಿದರು ಎಂದು ಹೇಳಿದ್ದಾರೆ. ಆಗ ಆ ತೋಂಟದಾರ್ಯ ಗುರುಗಳು ತಮ್ಮನ್ನು ಅವರ ಕೃಪೆಯೆಂಬ ತೊಟ್ಟಿಲಿನಲ್ಲಿ ಮಲಗಿಸಿ ಪ್ರಮಥರ ವಚನ ತತ್ತ್ವಾರ್ಥಗಳೆಂಬ ಹಾಲುತುಪ್ಪವನ್ನು ಎರೆದು ರಕ್ಷಿಸಿ ಘನಲಿಂಗಿಯೆಂದು ಹೆಸರಿಟ್ಟು ಪೋಷಿಸಿ, ಸತ್ಯಸದಾಚಾರ ಜ್ಞಾನ ಕ್ರೀಗಳೆಂಬ ದಿವ್ಯಾಭರಣಗಳನ್ನು ತೊಡಿಸಿ, ಅರಿವು ಎಂಬ ಬಣ್ಣವನ್ನುಡಿಸಿ ಬೆಳೆಸಿದರು ಎನ್ನುತ್ತಾರೆ. ಆ ವೇಳೆಗೆ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನನೇ ತನ್ನನ್ನು ಆತನಿಗಾಗಿ ಬೇಡಿ ಕಳುಹಿಸಿದಾಗ ಎಮ್ಮವರು ಅವರಿಗೆ ಮಾತನ್ನು ಕೊಟ್ಟರು ಎನ್ನುತ್ತಾರೆ.ಇದರಿಂದ ಆಧ್ಯಾತ್ಮ ಪರಿಸರದಲ್ಲೇ ಹುಟ್ಟಿದ ಶ್ರೀ ಘನಲಿಂಗಶಿವಯೋಗಿಗಳವರ ಶೈಶವ, ಬಾಲ್ಯ, ಯೌವನವು ತೋಂಟದಾರ್ಯರ ರಕ್ಷಣೆಯಲ್ಲೇ ಆಧ್ಯಾತ್ಮದ

ವಾತಾವರಣದಲ್ಲೇ ಕಳೆದು ಆಧ್ಯಾತ್ಮವನ್ನೇ ಕೈಹಿಡಿದರೆಂಬುದು ತಿಳಿದುಬರುತ್ತದೆ.ಹೀಗೆ ಹುಟ್ಟಿದಂದಿನಿಂದಲೇ ಅವರಲ್ಲಿ ಮೊಳಕೆದೋರಿದ್ದ ವಿರಕ್ತಭಾವ ತೋಂಟದಾರ್ಯರಿಂದ ಗಾಢವಾಗಿ ಗಟ್ಟಿಗೊಂಡು ಮಧುರಭಕ್ತಿಯಾಗಿ ರೂಪುಗೊಂಡುದನ್ನು ತಿಳಿಸುತ್ತದೆ.

ಹೀಗೆ ಗುರುವಿನಿಂದ ವಿರಕ್ತದೀಕ್ಷೆಯನ್ನು ಪಡೆದ ಶ್ರೀಘನಲಿಂಗಶಿವಯೋಗಿಗಳು ತಮ್ಮ ವೈಯಕ್ತಿಕ ಜೀವನಗಾಥೆಯನ್ನು ಹೇಳದಿರುವುದು ಸಹಜವೇ ಆಗಿದೆ.ಹಾಗಾಗಿ ಅವರ ಲೌಕಕಿ ಜೀವನದ ವಿವರಗಳು, ಪೂರ್ವಾಶ್ರಮದ ತಂದೆತಾಯಿಗಳ ವಿವರಗಳು ನಮಗೆ ಸಿಗುವುದಿಲ್ಲ. ಆ ಬಗ್ಗೆ ಬೇರೆ ಚಾರಿತ್ರಿಕ ದಾಖಲೆಗಳೂ ಲಭ್ಯವಿಲ್ಲ. ಆದರೆ ಕೆಲವೊಂದು ಆಧಾರದ ಮೇಲೆ[೧೨] ಅವರ ಹಿಂದಿನ ನಾಲ್ಕನೆಯಗುರು ಶ್ರೀಸಿದ್ಧಮಲ್ಲೇಶ್ವರರು ತಮ್ಮ ಬಳಿಗೆ ಬಂದ ಬಂಜೆ ದಂಪತಿಗಳಿಗೆ ಅನುಗ್ರಹಿಸಿದಾಗ ಹುಟ್ಟಿದ ಶಿಶುವೇ ಶ್ರೀ ಘನಲಿಂಗಶಿವಯೋಗಿಗಳೆಂಬ ವಿಚಾರ ಪವಾಡ ಸದೃಶವಾಗಿದೆ. ಈ ವಿಚಾರಗಳ ಸತ್ಯಾಸತ್ಯತೆಗೆ ಆಧಾರಗಳಿಲ್ಲ.

ಆ ಮಗುವನ್ನು ಸುತ್ತೂರು ಮಠಕ್ಕೆ ಒಪ್ಪಿಸಲು ಅದು ಗುರುಗಳ ಬಳಿಯೇ ವಿದ್ಯಾಭ್ಯಾಸ ಮಾಡುತ್ತಿರುವಾಗ ಅಲ್ಲಿಗೆ ಶ್ರೀತೋಂಟದಸಿದ್ದಲಿಂಗೇಶ್ವರರು ಬಂದರು.ಆಗ ಸಿದ್ಧಮಲ್ಲೇಶ್ವರರು ತಮ್ಮ ಶಿಷ್ಯ ಪರ್ವತೇಂದ್ರನಿಗೆ ಪಟ್ಟಕಟ್ಟಿ ತಾವು ಶ್ರೀತೋಂಟದಾರ್ಯರ ಅತ್ಯಂತ ಹಿರಿಯಶಿಷ್ಯನಾಗಿ ಹಾಗೂ ತಮ್ಮ ಶಿಷ್ಯ ಶ್ರೀಘನಲಿಂಗಶಿವಯೋಗಿಗಳು ಅತ್ಯಂತ ಕಿರಿಯಶಿಷ್ಯನಾಗಿ ಇಬ್ಬರೂ ಅವರೊಡನೆ ದೇಶಸಂಚಾರ ಮಾಡಿದರು.ಸುದೀರ್ಘಕಾಲ ಅವರೊಡನೆಯೇ ಇದ್ದು ಸುತ್ತೂರಿಗೆ ಶ್ರೀಘನಲಿಂಗಶಿವಯೋಗಿಗಳು ಹಿಂದಿರುಗಿ ಬಂದಾಗ ಅವರಿಗೆ ಸು.೫೦ರ ಪ್ರಾಯ.ಆಗಿನ ಪೀಠಾಧ್ಯಕ್ಷರಾಗಿದ್ದ ಶ್ರೀಕೂಗಲೂರು ನಂಜುಂಡದೇಶಿಕೇಂದ್ರರು ಅವರನ್ನೇ ಉತ್ತರಾಧಿಕಾರಿಯನ್ನಾಗಿ ನೇಮಿಸಿ[೧೩] ಸಿದ್ದಗಿರಿಗೆ ತೆರಳಿ ಶಿವೈಕ್ಯರಾದರು.ಕೆಲವು ವರ್ಷಗಳ ಕಾಲ ಅವರು ಮಠದಲ್ಲಿಯೇ ಪೀಠಾಧಿಕಾರಿಗಳಾಗಿದ್ದು ಶಿವಾನುಭವಗೋಷ್ಠಿಗಳನ್ನು ನಡೆಸಿ ತಮ್ಮ ನಿಜಶಿಷ್ಯ ಇಮ್ಮಡಿ ಶಿವರಾತ್ರೀಶ್ವರರಿಗೆ ಎಲ್ಲವನ್ನು ವಹಿಸಿಕೊಟ್ಟು ರೇಣುಕಗಿರಿಗೆ ತೆರಳಿದರು.ಅಲ್ಲಿ ಒಮ್ಮೆ ಶ್ರೀತೋಂಟದಾರ್ಯರು ಸ್ವಪ್ನದಲ್ಲಿ ಬಂದು ಕಗ್ಗೆರೆಗೆ ಬರಲು ಸೂಚಿಸಿದಾಗ ಗುರುವಿನಾಣತಿಯನ್ನು ಶಿರಸಾವಹಿಸಿ ಪಾಲಿಸಿದ ಶ್ರೀಘನಲಿಂಗಶಿವಯೋಗಿಗಳು ಕಗ್ಗೆರೆಗೆ ಬಂದು ಗುರುವಿನೊಡನೆ ಅಂತಿಮ ದಿನಗಳನ್ನು ಕಳೆದರು.[೧೪] ಗುರು ಶ್ರೀತೋಂಟದಾರ್ಯರು ಲಿಂಗೈಕ್ಯರಾದ ಮೇಲೆ ಉಳಿದ ದಿನಗಳನ್ನು ಧರ್ಮಪ್ರಚಾರದಲ್ಲಿಯೇ ಕಳೆಯುತ್ತಾ ಕೊನೆಗೆ ಶ್ರೀಘನಲಿಂಗಶಿವಯೋಗಿಗಳು ಕಗ್ಗೆರೆಯಲ್ಲಿ ಲಿಂಗೈಕ್ಯರಾದರು.

ಶ್ರೀಘನಲಿಂಗಶಿವಯೋಗಿಗಳವರು ಸುತ್ತೂರುಮಠದ ಪೀಠಾಧಿಪತಿಯಾದುದು ಹಾಗೂ ಶ್ರೀತೋಂಟದಾರ್ಯರ ಪರಮಾಪ್ತಶಿಷ್ಯರಾದುದು ಇವೆರಡೂ ವಿಚಾರಗಳು ಅವರ ಬದುಕಿನ ಮಹತ್ತರ ಘಟ್ಟಗಳಾಗಿವೆ. ಅವು ಅವರ ಉಲ್ಲೇಖಿತ ವಚನದಲ್ಲಿಯೇ ಬಂದಿವೆ. ಉಳಿದ ಯಾವ ವಿವರಗಳೂ ಅವರ ವಚನಗಳಲ್ಲಾಗಲೀ, ಇತರರ ಉಲ್ಲೇಖಗಳಲ್ಲಾಗಲೀ ಕಾಣಬರುವುದಿಲ್ಲ. ತಮ್ಮ ಸ್ವಭಾವಜನ್ಯ ಶಕ್ತಿ–ವಿರಕ್ತಿ ಸಾಧನೆಯಿಂದ, ೧೨ನೆಯ ಶತಮಾನದ ಶರಣರ ಬದುಕು–ಸಾಧನೆ–ಸಿದ್ಧಿ–ಬರಹಗಳಿಂದ, ಶ್ರೀತೋಂಟದಾರ್ಯರ ಒಡನಾಟಗಳಿಂದ ಇವರು ಶಿವಯೋಗಿಯ ಆಂತರಿಕ ಅನುಭೂತಿಯನ್ನು ಪಡೆದು ಸಿದ್ಧಪುರುಷರಾಗಿದ್ದಾರೆ. ಉಳಿದಂತೆ ಅವರ ಜೀವನದ ಇತರ ವಿವರಗಳ ಬಗ್ಗೆ ಹೆಚ್ಚಿನ ದಾಖಲೆಗಳು ಲಭ್ಯವಿಲ್ಲ. ಅವರ ಬಹಿರಂಗದ ರೂಪದ ವರ್ಣನೆಯು ವಿರಕ್ತ ತೋಂಟದಾರ್ಯನ 'ಸಿದ್ಧೇಶ್ವರಪುರಾಣ'ಕೃತಿಯಲ್ಲಿ ಹೀಗೆ ಬರುತ್ತದೆ.ಇದು ಅತ್ಯಂತ ಚಿತ್ರವತ್ತಾಗಿ ಅವರ ರೂಪವನ್ನು ಶಬ್ದಚಿತ್ರಗಳ ಮೂಲಕ ನಮ್ಮ ಕಣ್ಮುಂದೆ ಕಟ್ಟಿನಿಲ್ಲಿಸುತ್ತದೆ.

**ಉರೆಕೃಷ್ಣ ಕಂಬಳವ ಪೊದೆದು ಉತ್ತಮಾಂಗವಂ**
**ನೆರೆಮಂಡಿತಂಗೆಯ್ದು ಕರತಳದ ಲಿಂಗದೊಳ್**
**ಬೆರಗುವಡೆದು ಇತರೇತರವನರಿಯದಿರ್ಪ ನಿಶ್ಚಲವಿರತನೀತನಾರೆ**
**ದೇಹೋಪಾಧಿಯಂ ವರ್ಗವಾರಕ್ಕೆ**
**ಹೆರಸಾರ್ದು ಸುಜ್ಞಾನ ಮಾರ್ಗದೊಳು ನಿಂದು ಗುಣ**
**ಕರಿಗೊಂಡ ಘನಲಿಂಗದೇವನೇ ಕಾಣೆ ಶುಕವಾಣಿ ಕಾಳಾಹಿವೇಣಿ (೧೫–೪೬)**

ಶ್ರೀಘನಲಿಂಗಶಿವಯೋಗಿಗಳವರು ಸ್ವಾರ್ಥಭಾವದಿಂದ ಮುಕ್ತರಾಗಿ ಪರಮಾರ್ಥ ಚಿಂತನೆಯಲ್ಲೇ ಸಂಪೂರ್ಣವಾಗಿ ಮುಳುಗಿದ್ದವರು. ಹಾಗಾಗಿ ಶರಣ ಸಂದೋಹದಲ್ಲಿಯೇ ಅತ್ಯಂತ ವಿಶಿಷ್ಟವಾದ 'ಘನ'ಎಂಬ ಪದ 'ಲಿಂಗ' ಎಂಬ ಪದದೊಡನೆ ಕೂಡಿ ಅವರಿಗೆ ಅದು ಅನ್ವರ್ಥನಾಮವಾಗಿ ಬಳಕೆಯಾಯಿತು. ಘನಲಿಂಗಿದೇವರು, ಘನಲಿಂಗದೇವರು,

ಘನಲಿಂಗಿಶಿವಯೋಗಿಗಳು, ಘನಲಿಂಗಶಿವಯೋಗಿಗಳು ಎಂಬುದಾಗಿ ಅವರ ಹೆಸರು ರೂಢಿಯಲ್ಲಿದೆ, 'ಘನ' ಎಂದರೆ ಪರಾತ್ಪರವಸ್ತು ಅಥವಾ ನಿಷ್ಕಲಬ್ರಹ್ಮವೆಂದೂ,[೧೫] ಶೂನ್ಯ, ಬಯಲುಗಳೆಂದೂ ಅರ್ಥವಿದೆ.[೧೬] 'ಲಿಂಗ'ವೆಂದರೆ, ಅಂಗದಲ್ಲಿರುವ ಶಕ್ತಿ, ಪರಮಾತ್ಮನ ಅಂಶ ಎಂದೂ[೧೭] ಪರಶಿವ, ಪರಶಿವನ ಒಂದು ಸಂಕೇತವೆಂದೂ 'ಘನಲಿಂಗ'ವೆಂದರೆ ಪರಂಜ್ಯೋತಿ ಸ್ವರೂಪದ ಮಹಾಲಿಂಗವೆಂದೂ[೧೮] ಅರ್ಥಗಳಿವೆ. ಶ್ರೀಘನಲಿಂಗಶಿವಯೋಗಿಗಳು ತೋಂಟದಸಿದ್ಧಲಿಂಗೇಶ್ವರರು ತಮಗೆ 'ಘನಲಿಂಗಿ'ಯೆಂದು ನಾಮಕರಣಮಾಡಿದುದಾಗಿ (ವ–೩) ಹೇಳಿಕೊಂಡಿದ್ದಾರೆ. ಕನ್ನಡದಲ್ಲಿ ಗೌರವಸೂಚಕಗಳಾದ ಅಯ್ಯ, ಅಪ್ಪ, ದೇವರು ಮೊದಲಾದ ಪದಗಳು ಹೆಸರಿನೊಂದಿಗೆ ಜೋಡಣೆಗೊಂಡಾಗ 'ಇ'ಕಾರಾಂತಪದಗಳು 'ಅ'ಕಾರಾಂತವಾಗಿ ಬಳಕೆಗೆ ಬರುತ್ತದೆ.[೧೯] ಆದ್ದರಿಂದ ಘನಲಿಂಗಿದೇವರು, ಘನಲಿಂಗದೇವ ಎಂಬೆರಡೂ ಪದಗಳು ಬಳಕೆಯಲ್ಲಿವೆ. ಅವರು ಶಿವಯೋಗಿಗಳಾದ ಹಿನ್ನೆಲೆಯಲ್ಲಿ ಅವರನ್ನು ಘನಲಿಂಗಶಿವಯೋಗಿಗಳು, ಘನಲಿಂಗಿಶಿವಯೋಗಿಗಳು ಎಂದೂ ಉಲ್ಲೇಖಿಸಿದ್ದಾರೆ. ಪ್ರಸ್ತುತ ಕೃತಿಯಲ್ಲಿ ಶ್ರೀಘನಲಿಂಗಶಿವಯೋಗಿಗಳು ಎಂದು ಬಳಸಲಾಗಿದೆ.

ಬಹುಶಃ ಆರಂಭದ ಕೆಲವು ವರ್ಷಗಳಷ್ಟೇ ಶ್ರೀಘನಲಿಂಗಶಿವಯೋಗಿಗಳವರು ಸುತ್ತೂರಿನಲ್ಲಿದ್ದು, ಮುಂದಿನ ತಮ್ಮ ಬದುಕಿನ ಬಹುಭಾಗವನ್ನು ತೋಂಟದಾರ್ಯರ ರಕ್ಷಣೆಯಲ್ಲೇ ಕಳೆದಂತೆ ತೋರುತ್ತದೆ.ಅವರು ತೋಂಟದಸಿದ್ಧಲಿಂಗರ ಅಪಾರ ಶಿಷ್ಯವರ್ಗದಲ್ಲಿ ಪ್ರಮುಖರಾಗಿದ್ದು ಅವರ ಧರ್ಮಪ್ರಸಾರ ಸಂಚಾರದಲ್ಲಿಯೂಪಾಲ್ಗೊಂಡಿದ್ದರೆಂಬುದನ್ನು ವಿದ್ವಾಂಸರು ಒಪ್ಪಿಕೊಂಡಿದ್ದಾರೆ.ಸಿದ್ಧಲಿಂಗರು ಕರ್ನಾಟಕ, ತಮಿಳ್ನಾಡು, ಕೇರಳದ ಕೆಲವು ಸ್ಥಳಗಳಲ್ಲಿ ತಂಗಿದ್ದು ಧರ್ಮಪ್ರಸಾರ ಮಾಡಿದುದಕ್ಕೆ ಉಲ್ಲೇಖಗಳಿವೆ. ಆ ಸಂದರ್ಭದಲ್ಲಿ ಎಲ್ಲ ಶಿಷ್ಯರಲ್ಲದಿದ್ದರೂ ಪ್ರಮುಖರು ಅವರ ಜೊತೆಗೆ ಇರುತ್ತಿದ್ದಿರಬೇಕು. ಅದರಲ್ಲಿ ಶ್ರೀಘನಲಿಂಗಶಿವಯೋಗಿಗಳೂ ಒಬ್ಬರಾಗಿರಬೇಕೆನ್ನಲು ಹಿಂದಿನ ವಚನದಲ್ಲಿ ಉಲ್ಲೇಖವಾದ ಅವರೀರ್ವರ ನಡುವಿನ ಅತ್ಯಂತ ಆತ್ಮೀಯತೆ ಕಾರಣವಾಗುತ್ತದೆ.[೨೦]

ಶ್ರೀಘನಲಿಂಗಶಿವಯೋಗಿಗಳವರ ವಚನದಲ್ಲಿ ಅವರು ತೋಂಟದಾರ್ಯ ಎಂದು ಬಳಸಿರುವುದರಿಂದ ಸಿದ್ಧಲಿಂಗರು ತೋಂಟದಾರ್ಯರೆಂದು ಪ್ರಸಿದ್ಧರಾದ ಮೇಲೆ ಬರೆದ ವಚನ ಇದಾಗಿರಬೇಕು. ಇದರ ಮೂಲಕ ಎಳೆಯ ಮಗುವಾದ ಶ್ರೀ ಘನಲಿಂಗಶಿವಯೋಗಿಗಳು, ಅವರ ಗುರುಗಳಾದ ಕೂಗಲೂರು ನಂಜಯ್ಯದೇಶಿಕೇಂದ್ರರು, ಅವರ ಗುರುಗಳ ಗುರುಗಳಾದ ಭಂಡಾರಿಬಸವಪ್ಪೊಡೆಯರು, ಪರಮಗುರುಗಳಾದ ಪರ್ವತೇಂದ್ರ ಶಿವಾಚಾರ್ಯರು ಎಲ್ಲರೂ ತೋಂಟದಾರ್ಯರ ಸಮಕಾಲೀನರೆಂದು ಗ್ರಹಿಸುವುದಕ್ಕೆ ಅವಕಾಶವಿದೆ.[೨೧]

ಬಹುಶಃ ಅತಿ ಚಿಕ್ಕವಯಸ್ಸಿನಲ್ಲಿಯೇ ಅವರು ಗುರುತೋಂಟದಾರ್ಯರ ಶಿಷ್ಯತ್ವ ಪಡೆದು ಅವರ ಲಾಲನೆಪಾಲನೆಯಲ್ಲಿಯೇ ಬೆಳೆದು ತಮ್ಮ ಘನವ್ಯಕ್ತಿತ್ವದಿಂದ ಅವರ ಆಪ್ತಶಿಷ್ಯರಾಗಿ ಅವರೊಡನೆ ಇವರೂ ಲೋಕಸಂಚಾರವನ್ನು ಮಾಡುತ್ತಾ, ತಮ್ಮ ಗುರುವಿನಂತೆಯೇ ಇವರೂ ವಚನಗಳನ್ನು ರಚಿಸುತ್ತಾ, ಆ ಕಾಲದ ಜನಜಾಗೃತಿಗೆ, ಧರ್ಮದ ಪುನರುಜ್ಜೀವನಕ್ಕೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಅಜರಾಮರರಾಗಿದ್ದಾರೆ.

ಎಸ್.ಶಿವಣ್ಣನವರು ಕಾಡಸಿದ್ದೇಶ್ವರವಚನಗಳ ಟೀಕೆಯಲ್ಲಿ (ಬಳ್ಳಾರಿ ೧೯೩೮,ಪು.೪೫೦) ಇಂದಿನ ಗಣಂಗಳ ಪಟ್ಟಿಯಲ್ಲಿ ಘನಲಿಂಗಶಿವಯೋಗಿಗಳ ಹೆಸರಿರುವುದನ್ನು ಹಾಗೂ ರೆ.ಉತ್ತಂಗಿಚೆನ್ನಪ್ಪ ಮತ್ತು ಜಿ.ಎಂ.ಉಮಾಪತಿಶಾಸ್ತ್ರಿಗಳು ಕುಷ್ಟಗಿವಿರಕ್ತ ಕರಿಬಸವರಾಜದೇವನ (ಕ್ರಿ.ಶ.೧೭೦೦) ವಚನಗಳ ಮೇಲೆ ಘನಲಿಂಗಿಶಿವಯೋಗಿಗಳ ಪ್ರಭಾವವನ್ನು ಗುರುತಿಸಿದ್ದಾರೆ[೨೨]. ಇವರ ಪ್ರಭಾವವು ಉತ್ತರಕರ್ನಾಟಕದಲ್ಲೂ ಬೀರಿದುದಕ್ಕೆ ಕುರುಹುಗಳಿವೆ. ಅಲ್ಲಿನ ಮುದ್ದೇಬಿಹಾಳದಲ್ಲಿ ಘನಲಿಂಗದೇವರ ನಾಮಸ್ಮರಣೆಯಲ್ಲಿ ಧಾರ್ಮಿಕಜಾತ್ರೆ ನೆರವೇರುತ್ತದೆ.[೨೩]

## ೧.೪ ಕೃತಿ ಸ್ವರೂಪ :

ಶ್ರೀಘನಲಿಂಗಶಿವಯೋಗಿಗಳು ತಮ್ಮ ವಚನಗಳ ಸಂಖ್ಯೆ ಇಂತಿಷ್ಟೆಂದು ನಿಖರವಾಗಿ ತಿಳಿಸಿಲ್ಲ. ಮೊದಲಿಗೆ ಅವರ ೬೩ ವಚನವು ೧೯೦೪ ರಲ್ಲಿ ಎಂ.ಬಸವಲಿಂಗಶಾಸ್ತ್ರಿಯವರಿಂದ ಸಂಪಾದಿತವಾಗಿದೆ. ಅವರು ಆ ವಚನಗಳನ್ನು ಕನ್ನಡ ವೀರಶೈವ ಸಿದ್ಧಾಂತ ವಚನಗಳೆಂದು ಉಲ್ಲೇಖಿಸಿದ್ದಾರೆ. ಅನಂತರ ೧೯೨೭ರಲ್ಲಿ ಫ.ಗು.ಹಳಕಟ್ಟಿಯವರಿಂದ ಇವರ ೬೦ ವಚನಗಳ ಕೃತಿ ಕಠಿಣ ಶಬ್ದಗಳ ಅರ್ಥಗಳೊಂದಿಗೆ ಸಂಪಾದಿತವಾಗಿದೆ. ಮುಂದೆ ೧೯೫೦ರಲ್ಲಿ ಆಸ್ಥಾನ ವಿದ್ವಾನ್ ಪಂಡಿತರತ್ನಂ ಬಿ.ಶಿವಮೂರ್ತಿಶಾಸ್ತ್ರೀಯವರಿಂದ ಇವರ ೬೫ ವಚನಗಳು ಪೀಠಿಕೆ, ಜಾಣ್ಣುಡಿಗಳು ಶಬ್ದಕೋಶಗಳೊಂದಿಗೆ ಸಂಪಾದಿತವಾಗಿದೆ.೧೯೬೪ರಲ್ಲಿ ಸುತ್ತೂರು ಜಗದ್ಗುರು ಶ್ರೀಶಿವರಾತ್ರಿರಾಜೇಂದ್ರಮಹಾಸ್ವಾಮಿಗಳವರಿಂದ ಇವರ ೬೩ ವಚನಗಳು ವಿಷಯಾನುಕ್ರಮಣಿಕೆಯಲ್ಲಿ ಅತ್ಯುತ್ತಮವಾದ ಪೀಠಿಕೆ, ಅರ್ಥವಿವರಣೆ, ವಚನಗಳ ಅಕಾರಾದಿಗಳ ಸಹಿತ ಸಂಪಾದಿತವಾಗಿದೆ. ಮತ್ತೇ ಅದೇ ಕೃತಿಯು ಪರಿಷ್ಕೃತ ೨ನೆಯ ಮುದ್ರಣವಾಗಿ ಡಾ.ಎಲ್.ಬಸವರಾಜು ಅವರ ಸಹಸ್ಪಂದನ ವ್ಯಾಖ್ಯಾನದ ಜೊತೆಗೆ ಪೂಜ್ಯ ಸುತ್ತೂರು ಜಗದ್ಗುರು ಶ್ರೀಶಿವರಾತ್ರಿದೇಶಿಕೇಂದ್ರಮಹಾಸ್ವಾಮಿಗಳವರ ಶುಭಹಾರೈಕೆಯೊಡನೆ ೨೦೦೫ರಲ್ಲಿ ಪುನರ್ಮುದ್ರಣಗೊಂಡಿದೆ. ಇತ್ತೀಚಿನ ಸಂಕೀರ್ಣ ವಚನ ಸಂಪುಟ-೬ರಲ್ಲಿ ಅದರ ಸಂಪಾದಕರಾದ ಎಸ್.ಶಿವಣ್ಣನವರಿಂದ ಅವರ ಮತ್ತೂ ಮೂರು ವಚನಗಳನ್ನು ಇದರೊಂದಿಗೆ ಅಂತರ್ಗತಗೊಳಿಸಲಾಗಿದೆ.[೨೪] ಹಾಗಾಗಿ ಈವರೆಗೆ ಸಿಕ್ಕಿರುವ ಅವರ ವಚನಗಳ ಸಂಖ್ಯೆ ಒಟ್ಟು ೬೬ ಆಗಿದೆ.

ಶ್ರೀಘನಲಿಂಗಶಿವಯೋಗಿಗಳವರ ವಚನಗಳ ಅಂಕಿತ 'ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ'. ಅವರದು 'ಶರಣಸತಿಲಿಂಗಪತಿ' ಎಂಬ ಮಧುರಭಕ್ತಿಯಾಗಿದೆ(ವ-೩). ಇದು ನಮಗೆ ಅವರ ಅನೇಕ ವಚನಗಳಿಂದಲೂ ವ್ಯಕ್ತವಾಗುತ್ತದೆ.ಈ ಭಕ್ತಿಮಾರ್ಗ ಅವರ ವ್ಯಕ್ತಿತ್ವದ ಪರಿಚಯವನ್ನೂ ಮಾಡಿಸುತ್ತದೆ.ಅತ್ಯಂತ ವಿಶಿಷ್ಟವಾದ ಈ ಮನೋಧರ್ಮದ ಹಿನ್ನೆಲೆಯಲ್ಲಿ ಅವರ ವಚನಗಳು ಹೊರಹೊಮ್ಮಿರುವುದು ಅದಕ್ಕೆ ಅತ್ಯಂತ ಹೊಸಬಗೆಯ ಕಾಂತಿಯನ್ನು ನೀಡಿದೆ.ಶ್ರೀಘನಲಿಂಗಶಿವಯೋಗಿಗಳವರ ಈವರೆಗೆ ದೊರಕಿರುವ ಎಲ್ಲ ೬೬ ವಚನಗಳನ್ನೂ ಅವಲೋಕಿಸಿದಾಗ ಅವರಲ್ಲಿ ಆಧ್ಯಾತ್ಮದ ಹಸಿವು ಹುಟ್ಟಿದಂದಿನಿಂದಲೇ ಅವರ ಜೊತೆಗೂಡಿ ಬಂದಂತೆ ಕಾಣುತ್ತದೆ.ಜೊತೆಗೆ ಸುತ್ತೂರುಮಠದ ಹಾಗೂ ಶ್ರೀತೋಂಟದಾರ್ಯರ ಒಡನಾಟ ಆಧ್ಯಾತ್ಮವನ್ನು ಅವರಲ್ಲಿ ಗಟ್ಟಿಗೊಳಿಸಿದಂತೆ ಕಾಣುತ್ತದೆ.

ಶ್ರೀಘನಲಿಂಗಶಿವಯೋಗಿಗಳವರ ವಚನಗಳ ವಸ್ತು ವೈವಿಧ್ಯಮಯವಾದದು. ಅದನ್ನು ಅರ್ಥಮಾಡಿಕೊಳ್ಳಬೇಕಾದರೆ ಅದಕ್ಕೊಂದು ವೀರಶೈವಸಿದ್ಧಾಂತದ ಹಿನ್ನೆಲೆ ಬೇಕೆಂದು ಅನುಕೂಲಕ್ಕಾಗಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ಸ್ಥೂಲಪರಿಚಯವನ್ನು ಅದರ ಸಂಪಾದಕರಾದ ಪರಮಪೂಜ್ಯ ಜಗದ್ಗುರು ಡಾ.ಶ್ರೀಶಿವರಾತ್ರಿರಾಜೇಂದ್ರಮಹಾಸ್ವಾಮಿಗಳವರು ತಮ್ಮ ಸಂಪಾದನೆಯ ಪೀಠಿಕೆಯಲ್ಲಿ ವಿಸ್ತಾರವಾಗಿ ಮಾಡಿಕೊಟ್ಟಿದ್ದಾರೆ.[೨೫]

ಶ್ರೀಘನಲಿಂಗಶಿವಯೋಗಿಗಳವರ ವಚನಗಳನ್ನು ಅಧ್ಯಯನದ ಅನುಕೂಲಕ್ಕಾಗಿ , ಅಶೋಕ ಬಿ.ಕಲಘಟಗಿಯವರು ಲೋಕಾನುಭವ, ಶಿವಾನುಭವ ಮತ್ತು ಕಾವ್ಯಾನುಭವಗಳೆಂದು ವಿಭಾಗಿಸಿಕೊಂಡಿದ್ದಾರೆ.[೨೬] ಡಾ.ಡಿ.ಶೀಲಾಕುಮಾರಿಯವರು ಅವರ ವಚನಗಳನ್ನು ಗುರುನಮನ, ಶರಣಸ್ತುತಿ, ಅಜ್ಞಾನ-ಸುಜ್ಞಾನ ನಿರೂಪಣೆ, ಕಾಲಕಾಮಾದಿ ವಿವೇಚನೆ, ಕಪಟವಿರಕ್ತರ ಖಂಡನೆ, ಕರ್ಮವಿವೇಚನೆ, ಅಷ್ಟಾವರಣ ಗುರು, ಲಿಂಗ, ಪ್ರಸಾದ, ಪಂಚಾಚಾರ, ಷಟ್ಸ್ಥಲ, ಶರಣಸಿದ್ಧಾಂತ, ಶರಣಸತಿ ಲಿಂಗಪತಿಭಾವ, ಬೆಡಗಿನವಚನ, ರೂಪಕಾಲಂಕಾರ, ಪಾಂಡಿತ್ಯ, ಸ್ವರವಚನ, ಶರಣರಪ್ರಭಾವ ಎಂಬುದಾಗಿ ೧೯ ವಿಭಾಗಗಳನ್ನಾಗಿ ಮಾಡಿಕೊಂಡು ವಿಶ್ಲೇಷಿಸಿದ್ದಾರೆ.[೨೭] ಡಾ.ಎಚ್.ಎ.ಪಾರ್ಶ್ವನಾಥ್‌ರವರು ಭಕ್ತಿ-ವಿರಕ್ತಿ, ಲಿಂಗಾನುಸಂಧಾನ, ಸಮ್ಯಕಜ್ಞಾನ , ಶರಣಸತಿ - ಲಿಂಗಪತಿ, ಮುಕ್ತಿಪಥ ಎಂಬ ಐದು ಶೀರ್ಷಿಕೆಗಳ ಅಡಿಯಲ್ಲಿ ವಿಶ್ಲೇಷಿಸಿದ್ದಾರೆ.[೨೮]

ಪ್ರೊ. ಓ. ಎಲ್ ನಾಗಭೂಷಣಸ್ವಾಮಿಯವರು ವಚನಗಳಿಗೆ ಬಗೆಬಗೆಯ ಓದುಗಳಿವೆ. ಬಸವೋತ್ತರಯುಗದ ವಚನಕಾರರನ್ನೂ ಪ್ರಶ್ನೆಗಳೊಂದಿಗೆ ಓದುವುದು ಅವರನ್ನು ಜೀವಂತವಾಗಿರಿಸುತ್ತದೆ ಎನ್ನುತ್ತಾರೆ.[೨೯] ಘನಲಿಂಗದೇವರ ವಚನಗಳು ದೀರ್ಘವಾಗಿದ್ದು ಭಾಷೆ ಸುಂದರವಾಗಿದೆ. ಪ್ರೌಢರೀತಿಯಲ್ಲಿ ವಿಸ್ತರಿಸಿರುವ ವಚನಗಳಲ್ಲಿ ಷಟ್‌ಸ್ಥಲಶಾಸ್ತ್ರ ಮರ್ಮಗಳು

ವಿವರಿಸಲ್ಪಟ್ಟಿವೆ. ಘನಲಿಂಗದೇವರ ವ್ಯಕ್ತಿತ್ವವನ್ನು ಅವರ ವಚನಗಳಿಂದಲೇ ತಿಳಿಯಬಹುದು ಎನ್ನುತ್ತಾರೆ ಜಯದೇವಪ್ಪ ಜೈನಕೇರಿಯವರು.[೩೦] ಅವರ ವಚನಗಳೆಲ್ಲವನ್ನೂ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಆನುಭಾವಿಕ, ದಾರ್ಶನಿಕ, ಸಾಹಿತ್ಯಕ ಹೀಗೆ ಹತ್ತುಹಲವು ಆಯಾಮಗಳಿಂದ ಸಮೃದ್ಧವಾಗಿ ವಿಶ್ಲೇಷಿಸಬಹುದು. ಅವರ ವಚನಗಳು ಅಷ್ಟೊಂದು ಧ್ವನಿಪೂರ್ಣವಾಗಿ ಕಂಗೊಳಿಸುತ್ತಿವೆ ಅವುಗಳನ್ನು ಆಧ್ಯಾತ್ಮದ ಅನುಭಾವದ ನೆಲೆಯಲ್ಲಿ ವಿವೇಚಿಸುವುದು ವಿಶಿಷ್ಟ ಅನುಭವವನ್ನು ತರುತ್ತದೆ. ವಿದ್ವಾಂಸರು ಗುರುತಿಸಿರುವಂತೆ ೧೨ನೆಯ ಶತಮಾನದ ವಚನಗಳಿಗೂ ೧೬ನೆಯ ಶತಮಾನದ ವಚನಗಳಿಗೂ ಅಗಾಧ ವ್ಯತ್ಯಾಸಗಳಿವೆ. ಅದು ಕಾಲ, ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ವಚನಗಳ ವಸ್ತು, ರೂಪ, ಅಭಿವ್ಯಕ್ತಿಯ ಧಾಟಿಗಳಲ್ಲಿ ವ್ಯತ್ಯಾಸವಿದೆ. ಆದರೆ ಮೂಲಭಾವ, ಕಳಕಳಿ, ಉದ್ದೇಶಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲ. ಇಬ್ಬರದೂ ತಾವು ಉದಾತ್ತರಾಗುತ್ತಾ, ಸಮಾಜವನ್ನೂ ಉದಾತ್ತತೆಯ ಕಡೆಗೆ ಕೊಂಡೊಯ್ಯಬೇಕೆಂಬ ಮಹತ್ವಾಕಾಂಕ್ಷೆಯಾಗಿದೆ; ಸುಂದರ ಸಾರ್ಥಕ ಸಮಾಜ ನಿರ್ಮಾಣವೇ ಅವರೀರ್ವರ ಗುರಿಯಾಗಿದೆ; ಆದರೆ ಅದನ್ನು ಅಭಿವ್ಯಕ್ತಪಡಿಸುವಲ್ಲಿ ಕಾಲದ ಬಂಧನಕ್ಕೆ ಸಿಕ್ಕಿರುವಂತಿದೆ; ಒಟ್ಟಾರೆ ಮನುಷ್ಯ, ಸಮಾಜ ಉದ್ಧಾರವಾಗಬೇಕೆಂಬ ಕಳಕಳಿ ಇಬ್ಬರಲ್ಲೂ ಇದೆ.

**ಕೊನೆಟಿಪ್ಪಣಿ:**

೧.ಎಫಿಗ್ರಾಫಿಯಾ ಕರ್ನಾಟಕಾ, ಸಂಪುಟ ಮೂರು ನಂಜನಗೂಡು, ಕನ್ನಡ ಅಧ್ಯಯನ ಸಂಸ್ಥೆ ಮೈ.ವಿ.ವಿ, ಮೈಸೂರು, ೧೯೭೪, ಪು.೧೭

೨. ಕುವೆಂಪು ಕನ್ನಡಅಧ್ಯಯನಸಂಸ್ಥೆಯ ಕನ್ನಡಸಾಹಿತ್ಯಚರಿತ್ರೆ, ಸಂಪುಟ ೫ ಭಾಗ ೪, ಸಂ.ರಾಮೇಗೌಡ, ಘನಲಿಂಗಿದೇವ, ಅಶೋಕ ಬಿ.ಕಲಘಟಗಿ, ಕು.ಕ.ಅ.ಸಂ.ಮೈವಿವಿ, ಮೈಸೂರು, ೨೦೧೨, ಪು.೨೬೬

೩.ಘನಲಿಂಗಿಶಿವಯೋಗಿ; ಡಾ.ಡಿ. ಶೀಲಾಕುಮಾರಿ, ಜಗದ್ಗುರುಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೦೩, ಪು.೧೫

೪.ಘನಲಿಂಗಶಿವಯೋಗಿ, (ಸಂ) ಪ್ರೊ.ಚಂದ್ರಶೇಖರಯ್ಯ, ಜೀವನ ಮತ್ತು ಸಾಧನೆ, ಜಗದ್ಗುರುಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ೨೦೧೪ ಪು.೨೫

೫. ಘನಲಿಂಗಿಶಿವಯೋಗಿ, ಡಾ.ಡಿ ಶೀಲಾಕುಮಾರಿ, ಅದೇ, ಪು.೧೯

೬.ಸಂಕೀರ್ಣವಚನ ಸಂಪುಟ–೬, (ಸಂ) ಎಸ್,ಶಿವಣ್ಣ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೧, ಪ್ರಸ್ತಾವನೆ, ಪು. XXV

೭. ಘನಲಿಂಗಶಿವಯೋಗಿ, (ಸಂ) ಪ್ರೊ.ಚಂದ್ರಶೇಖರಯ್ಯ, ತೋಂಟದ ಸಿದ್ಧಲಿಂಗಯತಿಗಳು ಹಾಗೂ ಘನಲಿಂಗದೇವರು, ಡಾ.ಬಿ.ನಂಜುಂಡಸ್ವಾಮಿ, ಅದೇ, ಪು.೮೯–೯೦

೮. ಅದೇ., ಪು.೭೨

೯. ಅದೇ., ಪು.೨೭

೧೦. ಘನಲಿಂಗಿಶಿವಯೋಗಿ, ಡಾ.ಡಿ.ಶೀಲಾಕುಮಾರಿ, ಅದೇ., ಪು.೧೯

೧೧. ಘನಲಿಂಗಶಿವಯೋಗಿ, (ಸಂ) ಪ್ರೊ.ಚಂದ್ರಶೇಖರಯ್ಯ, ಅದೇ, ಪು ೨೭

೧೨. ಶಿವರಾತ್ರಿಶಿವಾಚಾರ್ಯ: ಪ್ರೊ.ಎಂ.ಜಿ. ನಂಜುಂಡಾರಾಧ್ಯ, ಜಗದ್ಗುರು ಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೦, ಪು.೧೦೧–೧೩೦

೧೩. ಶ್ರೀಸುತ್ತೂರುವೀರಸಿಂಹಾಸನ ಗುರುಪರಂಪರೆ, ಕುಂತೂರು ಸಂಗಪ್ಪಶಾಸ್ತ್ರಿ, ಜಗದ್ಗುರುಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು,೧೯೯೧, ಪದ್ಯ ೨೧,೨೩, ಪುಟ.೭

೧೪. ಕುವೆಂಪು ಕನ್ನಡಅಧ್ಯಯನಸಂಸ್ಥೆಯ ಕನ್ನಡಸಾಹಿತ್ಯಚರಿತ್ರೆ, ಸಂಪುಟ ೫ ಭಾಗ ೪, ಅದೇ, ಪು.೨೬೯–೭೦

೧೫. ಘನಲಿಂಗಿಶಿವಯೋಗಿ ಡಾ.ಡಿ.ಶೀಲಾಕುಮಾರಿ, ಅದೇ,ಪು ೨೨

೧೬. ಘನಲಿಂಗಿದೇವ, ಡಾ.ಎಚ್. ಪಾರ್ಶ್ವನಾಥ್, ಅಖಿಲಕರ್ನಾಟಕವಚನಸಾಹಿತ್ಯಪರಿಷತ್ತು, ಮೈಸೂರು, ೨೦೦೯, ಪು.೧೪

೧೭.ಶಿವಾನುಭವ ಶಬ್ದಕೋಶ, (ಸಂ) ಫ.ಗು.ಹಳಕಟ್ಟಿ, ಸಮಾಜಪುಸ್ತಕಾಲಯ, ಧಾರವಾಡ, ೧೯೭೨, ಪು.೯

೧೮. ವೀರಶೈವಪದಕೋಶ, ಶ್ರೀಮ.ನಿ.ಪ್ರ.ಜ.ಶ್ರೀ ಅನ್ನದಾನೀಶ್ವರ ಮಹಾಶಿವಯೋಗಿಗಳು, ಮುಂಡರಗಿ, ೨೦೦೫, ಪು.೨೩

೧೯. ಘನಲಿಂಗಿಶಿವಯೋಗಿ, ಡಾ.ಡಿ.ಶೀಲಾಕುಮಾರಿ, ಅದೇ,ಪು.೨೨

೨೦. ಘನಲಿಂಗಶಿವಯೋಗಿ,(ಸಂ) ಪ್ರೊ ಚಂದ್ರಶೇಖರಯ್ಯ, ಅದೇ, ಪು,೨೭

೨೧, ಅದೇ, ಪು.೨೫

೨೨. ಸಮಗ್ರವಚನ ಸಂಪುಟ,೬, ಸಂ.ಎಸ್.ಶಿವಣ್ಣ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೧, ಪ್ರಸ್ತಾವನೆ, ಪು.xxv-xxvi

೨೩. ಘನಲಿಂಗಿದೇವ, ಡಾ.ಎಚ್.ಎ.ಪಾರ್ಶ್ವನಾಥ್, ಅದೇ, ಪು.೧೯

೨೪. ಸಂಕೀರ್ಣವಚನ ಸಂಪುಟ–೬, ಸಂ.ಎಸ್.ಶಿವಣ್ಣ, ಅದೇ, ಪರಿಶಿಷ್ಟ, ಪು.೩೭೭–೩೭೮

೨೫. ಸುತ್ತೂರು ಜಗದ್ಗುರು ಶ್ರೀಘನಲಿಂಗದೇವರ ವಚನಗಳು, ಸಹಸ್ಪಂದನ ವ್ಯಾಖ್ಯಾನಸಹಿತ, (ಸಂ)ಪೂಜ್ಯ ಜಗದ್ಗುರು ಡಾ. ಶ್ರೀಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳು, ಜಗದ್ಗುರು ಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೦೫, ಪೀಠಿಕೆ, ಪು.xvii-xxxi

೨೬.ಕುವೆಂಪು ಕನ್ನಡಅಧ್ಯಯನಸಂಸ್ಥೆಯ ಕನ್ನಡಸಾಹಿತ್ಯಚರಿತ್ರೆ, ಸಂಪುಟ ೫ ಭಾಗ ೪, ಅದೇ, ಪು೨೭೪

೨೭.ಘನಲಿಂಗಿಶಿವಯೋಗಿ, ಡಾ.ಡಿ ಶೀಲಾಕುಮಾರಿ, ಅದೇ, ಪು.೨೫–೯೯

೨೮.ಘನಲಿಂಗಿದೇವ, ಡಾ.ಎಚ್. ಪಾರ್ಶ್ವನಾಥ್, ಅದೇ, ಪರಿವಿಡಿ.

೨೯. ಘನಲಿಂಗಶಿವಯೋಗಿ, (ಸಂ) ಪ್ರೊ.ಚಂದ್ರಶೇಖರಯ್ಯ, ಅದೇ, ಸಮಾರೋಪ ಭಾಷಣ, ಓ.ಎಲ್. ನಾಗಭೂಷಣಸ್ವಾಮಿ, ಪು.೯೯

೩೦. ಅದೇ, ಘನಲಿಂಗದೇವರ ವಚನಗಳ ಸಮೀಕ್ಷೆ–, ಪು.೬೦.

## ೨. ಕನ್ನಡ ಸಾಹಿತ್ಯದಲ್ಲಿ ಅನುಭಾವ

'ಅನುಭಾವ' ಎಂಬ ಪದ ಕನ್ನಡದಲ್ಲಿ ವಿಶೇಷವಾದ ಅರ್ಥವನ್ನು ಪಡೆದಿದೆ.ಸಂಸ್ಕೃತದ ಕಾವ್ಯಮೀಮಾಂಸೆಯಲ್ಲಿ ಈ ಪದ ಕಾವ್ಯದ ಓದಿನ ಪರಿಣಾಮದ ಹಿನ್ನೆಲೆಯಲ್ಲಿ ಬಳಕೆಯಾಗಿದೆ.ಆದರೆ ಕನ್ನಡದಲ್ಲಿ ಶರಣರು 'ಅನುಭಾವ' ಎಂಬ ಪದವನ್ನು 'ಆತ್ಮವಿದ್ಯೆ' ಎಂಬರ್ಥದಲ್ಲಿ ಬಳಸಿ ಅದಕ್ಕೆ ವಿಶಿಷ್ಟವಾದ ವ್ಯಾಪಕವಾದ ಅರ್ಥಸಂಪತ್ತನ್ನು ತುಂಬಿದ್ದಾರೆ.ಆಂಗ್ಲಭಾಷೆಯಲ್ಲಿ 'ಮಿಸ್ಟಿಸಿಸಮ್' ಎಂಬ ಮಾತನ್ನು ಗೂಢ, ರಹಸ್ಯ, ಅಸಾಧ್ಯ, ಭಾವನಾತ್ಮಕ ಇತ್ಯಾದಿ ಅರ್ಥದಲ್ಲಿ ಬಳಸಿರುವುದಲ್ಲದೆ ಈ ಪ್ರಪಂಚ ಮತ್ತು ದೇವರನ್ನು ಕುರಿತ ಅಸ್ಪಷ್ಟ ಭ್ರಾಂತಿಮೂಲ ಎಂಬರ್ಥದಲ್ಲಿಯೂ, ಐಂದ್ರಜಾಲಿಕ ವಿದ್ಯೆ, ಕನಸುಗಾರನ ವಿಚಿತ್ರಮನಸ್ಥಿತಿ ಎಂಬರ್ಥಗಳಲ್ಲಿಯೂ ಬಳಸಿರುವುದುಂಟು. ಈ ಅರ್ಥದಲ್ಲಿ ತೆಗೆದುಕೊಂಡಾಗ 'ಅನುಭಾವ'ಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಆದರೆ 'ಮಿಸ್ಟಿಸಿಸಮ್' ಎಂಬ ಪದವು ಕೆಲವುವೇಳೆ 'ಜೀವನವನ್ನು ಸಾರ್ಥಕಗೊಳಿಸುವ ಅಂತರಂಗದ ಅನುಭವ' ಎಂಬರ್ಥದಲ್ಲಿ ಬಳಕೆಯಾಗಿರುವುದನ್ನು ಕಂಡಾಗ, ಆ ಅರ್ಥದಲ್ಲಿ ಇದನ್ನು 'ಅನುಭಾವ' ಪದಕ್ಕೆ ಸಂವಾದಿಯಾಗಿ ಬಳಸಬಹುದು.

'ಅನುಭಾವ' ಪದದ ಅರ್ಥವನ್ನು ಸೂತ್ರದಲ್ಲಿ ಹೇಳುವುದು ಕಷ್ಟವಾದರೂ ಅದರ ಪ್ರಮುಖ ಅಂಶಗಳನ್ನು ಸೂತ್ರಪ್ರಾಯವಾಗಿ ಹೇಳಲು ಅನೇಕರು ಪ್ರಯತ್ನಿಸಿದ್ದಾರೆ.

'Mysticism is  religion in it's most concentrated and exclusive form. It is that attitude of the mind in which all other relations are swallowed up in the realation of the soul with the god. (Mysticism Religion-W.R.Inge)

'Mysticism denotes that attitude of mind which involves a direct, immediate, firsthand, intutive apprehension of God' (Mysticism in Maharastra- R.D. Ranade)

ಈ ಮೇಲಿನ ಸೂತ್ರಗಳಲ್ಲಿ 'God' 'Soul' 'Realion  of the soul to the God'ಅಂದರೆ 'ಪರಮಾತ್ಮ''ಜೀವಾತ್ಮ' ಮತ್ತು ಇವುಗಳ ಸಂಬಂಧದಿಂದ ಉಂಟಾಗುವ 'ಅಮೃತತ್ವ'ವನ್ನು ಪಡೆಯಬೇಕೆಂಬ ಜೀವದ ನಿರಂತರ ಹಂಬಲವನ್ನು ಸಾಕಾರಗೊಳಿಸಿಕೊಡುವ ಸಾಧನೆಯೇ ಅನುಭಾವದ ನೆಲೆಗಳೆಂಬುದನ್ನು ತಿಳಿಸಲಾಗಿದೆ.

ಆತ್ಮವು ಮೂಲತಃ ಆನಂದಸ್ವರೂಪಿಯಾದುದು.ಆದರೆ ಅದು ದೇಹಬಂಧನದಲ್ಲಿ ಅಜ್ಞಾನದ ಮರೆವಿನಿಂದ ಈ ಸ್ಥೂಲದೇಹವೇ, ಅಂದರೆ ಇಂದ್ರಿಯಗಳೇ ತಾನೆಂದು ಪಂಚಮಯಕೋಶಗಳಲ್ಲಿ ವಿವಿಧನೆಲೆಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ.ಆತ್ಮನ ಸಹಜಸ್ವರೂಪವಾದ ಆನಂದದನಿಲುವನ್ನು ಹೊಂದುವುದೇ ಅನುಭಾವದ ಕೊನೆಯ ಹಂತ.ಅಂದರೆ ಅಂತರಂಗದಲ್ಲಿರುವ ಆ ಶಕ್ತಿಗಳನ್ನು ಎಚ್ಚರಿಸಿ ತೆರೆದ ಒಳಗಣ್ಣಿನಿಂದ ಸತ್ಯದ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವುದನ್ನು 'ಅನುಭಾವ'ಎಂದು ಹೇಳಬಹುದು.ಇದು ಬುದ್ಧಿ ಮನಗಳನ್ನು ಮೀರಿದ ಅಂತಃಸ್ಫುರಣದಿಂದ ಅನುಭೂತವಾಗುತ್ತದೆ.ಆಂಗ್ಲಭಾಷೆಯಲ್ಲಿ ಇದನ್ನು Intution ಎನ್ನುತ್ತಾರೆ. ಡಾ.ರಾಧಾಕೃಷ್ಣನ್‌ರವರು ಹೇಳುವಂತೆ  'Intution is the extension of perception to religions beyond sense'(An ldealist view of life-Dr. S Radhakrishan) ಶ್ರೀ ಅರವಿಂದರು 'The Life Divine' ಕೃತಿಯಲ್ಲಿIntution'ಕುರಿತು ಸೃಷ್ಟಿಗೆ ಮೂಲಕಾರಣವಾದ ಸತ್ಯದ ಸ್ವರೂಪವನ್ನು ಪ್ರತ್ಯಕ್ಷವಾಗಿ ಕಾಣುವ, ಕೇಳುವ, ಸ್ಪರ್ಶಿಸುವ ಮತ್ತು ವಿವೇಚಿಸುವ ಶಕ್ತಿ ಎಂದಿದ್ದಾರೆ. ಈ ಸೃಷ್ಟಿಯೊಂದು ನಿರಂತರಪ್ರವಾಹ.ಅದರ ಪೂರ್ಣಸ್ವರೂಪವನ್ನು ತಿಳಿಯಬೇಕಾದರೆ ಅದರ ಚಲನೆಯಲ್ಲಿಯೇ ಭಾಗವಹಿಸಿ ಅದನ್ನು ಕಂಡುಕೊಳ್ಳುವ ಶಕ್ತಿ ಬೇಕು.ಈ ಅನುಭಾವ ಇನ್ನೂ ತೀವ್ರತರವಾದಾಗ ಪ್ರವಾಹರೂಪವಾದ ಈ ಪ್ರಪಂಚದ ಚಲನೆಯಲ್ಲಿಯೇ ಒಂದು ನಿಶ್ಚಲಸತ್ಯವನ್ನು ಸುಸ್ಪಷ್ಟವಾಗಿ ಕಂಡು ತಾನೇ ಅದು ಆಗಿ ಪರಿಣಮಿಸುವ ಮಹಾಪರಿವರ್ತನೆ 'ಅನುಭಾವ'.ಇದು ಅದರ ಕೊನೆಯ ನಿಲುವಿನಲ್ಲಿ ಅವರ್ಣನೀಯ.ಶ್ರೀರಾಮಕೃಷ್ಣಪರಮಹಂಸರು ಹೇಳುವಂತೆ ಉಪ್ಪಿನಬೊಂಬೆ ಸಮುದ್ರದ ಆಳವನ್ನು ನೋಡಲು ಹೊರಟಂತೆ ಆಗುತ್ತದೆ.ಮಾತು ಅಲ್ಲಿ ಮೌನವಾಗುತ್ತದೆ.ಆದರೂ ಸಾಧಕ ತನ್ನ ಸಾಕ್ಷಾತ್ಕಾರದ ಅನುಭಾವವನ್ನೂ ಮತ್ತು ಆ ಕಡೆಗೆ ನಡೆಯುವ ಮಾರ್ಗದರ್ಶನವನ್ನೂ ಇತರರಿಗೂ ಉಂಟುಮಾಡಿಕೊಡಲು ಹವಣಿಸುತ್ತಾನೆ.

'ಅನುಭಾವ' ಎಂಬುದಕ್ಕೆ ಕೇವಲ ಆನಂದಮಯಸ್ಥಿತಿ ಎಂಬರ್ಥಕ್ಕಷ್ಟೇ ಸೀಮಿತಗೊಳಿಸಿಕೊಳ್ಳದೆ ಬುದ್ಧಿ ತರ್ಕಗಳಿಗೆ ಅತೀತವಾದ ಒಂದು ಶಕ್ತಿಯಿಂದ ಮಾತ್ರ ಸತ್ಯಸಾಕ್ಷಾತ್ಕಾರವನ್ನು ಪಡೆಯುವುದು ಸಾಧ್ಯವೆಂಬ ತತ್ವವನ್ನು ತಳಹದಿಯಾಗಿಟ್ಟುಕೊಂಡು

ಹೊರಟಮಾರ್ಗ ಎಂಬರ್ಥಕ್ಕೆ ಹಿಗ್ಗಿಸಿಕೊಳ್ಳಬೇಕಾಗುತ್ತದೆ.ಹೀಗೆಂದಮಾತ್ರಕ್ಕೆ ಇದು ಯೋಗ್ಯಕಾರಣಗಳಿಂದ ಸಮರ್ಥನೀಯವಲ್ಲವೆಂದಾಗಲೀ, ಅಂಧಶ್ರದ್ಧೆಯೇ ಇದರ ಆಶ್ರಯವೆಂದಾಗಲೀ ಭಾವಿಸಬಾರದು.ಇಲ್ಲಿ ಬೇಕಾದುದು ಅಂಧಶ್ರದ್ಧೆಯಲ್ಲ; ಅದನ್ನು ಮೀರಿದ ಅಂತಃಕರಣದ ಅರಿವು.ಇದು ಭಾವನಾತ್ಮಕವಾದುದಾದರೂ ವಿಕಾರಮನಸ್ಸಿನ ಉದ್ರೇಕದ ಹುಚ್ಚುಹೊಳೆಯಲ್ಲ; ಪ್ರೇಮದ ಬೆಳಕಿನಿಂದ ಸ್ಫೂರ್ತಿಗೊಂಡ ದಿವ್ಯವಾಹಿನಿ.ಇದು ಬೌದ್ಧಿಕಜ್ಞಾನಕ್ಕೆ ವಿರೋಧವಾದದ್ದಲ್ಲ, ಅದನ್ನು ಒಳಗೊಂಡು ಅದಕ್ಕೆ ಅತೀತವಾದದ್ದು.ಇದು ನಮ್ಮ ಸಾಮಾನ್ಯ ಮರ್ತ್ಯಪ್ರಜ್ಞೆಯ ಪರಿಧಿಯನ್ನು ಹಿಗ್ಗಿಸುತ್ತದೆ.ಜೀವನದ ಅನಂತತೆಯನ್ನು ಕುರಿತು ಚರ್ಚಿಸುತ್ತದೆ.ಬಹುರೂಪ ವೈವಿಧ್ಯದ ಈ ಸೃಷ್ಟಿಯಲ್ಲಿ ಏಕರೂಪವಾದ ಸೃಷ್ಟಿಶಕ್ತಿಯ ಸ್ವರೂಪವನ್ನು ಕಂಡುಕೊಳ್ಳುತ್ತದೆ. ಮಾನವನ ಜೀವನದ ಗುರಿಯನ್ನು ನಿರ್ದೇಶಿಸುತ್ತದೆ ಮತ್ತು ಈ ಗುರಿಯ ಅನುಭವವನ್ನು ಸಾಕ್ಷಾತ್ತಾಗಿ ಜೀವನದಲ್ಲಿ ಕಂಡುಕೊಳ್ಳಲು ಸಹಾಯಕವಾಗುತ್ತದೆ ಎನ್ನುತ್ತಾರೆ ಚಿಂತಕರು.[೧]

ಈ ಅನುಭಾವದ ಹುಡುಕಾಟ ಜೀವನದ ಗುರಿಯ ಹುಡುಕಾಟದೊಂದಿಗೇ ಆರಂಭವಾಗಿರಬೇಕು.ನಿರಂತರ ಸಾಧನೆಯಿಂದ ಅದು ಪೂರ್ಣತೆಯನ್ನು ಪಡೆಯಿತು.ಅದು ಅನೇಕ ದೇಶಗಳಲ್ಲಿ ಬೇರೆಬೇರೆ ಕಾಲಘಟ್ಟಗಳಲ್ಲಿ ನಡೆದಿದ್ದರೂ ಅಂತಿಮಸತ್ಯ ಕಂಡವರೆಲ್ಲಾ ಸಮಾನ ಅನುಭವವನ್ನು ಪಡೆದಿದ್ದಾರೆ.ಆದ್ದರಿಂದಲೇ ಜಗತ್ತಿನ ಅನುಭಾವಿಗಳೆಲ್ಲರ ಮಾತಿನಲ್ಲಿಯೂ ಸತ್ಯದ ಏಕಸೂತ್ರತೆಯನ್ನು ಕಾಣುತ್ತೇವೆ. ಆದರೆ ಕೆಲವೊಮ್ಮೆ ಆರಂಭದಲ್ಲಿಯೇ ಮಾರ್ಗಗಳು ಭಿನ್ನವಾಗಿ, ಕೆಲವೊಮ್ಮೆ ಪ್ರಗತಿಕಾಣದೆ ನಿಂತಿರುವುದೂ ಉಂಟು.ಆತ್ಯಂತಿಕಸತ್ಯ ಕಾಣದ ಮುನ್ನವೇ ತಾನು ಕಂಡ ಆಂಶಿಕಸತ್ಯವೇ ಪೂರ್ಣವೆಂದು ಭಾವಿಸಿರುವುದೂ ಉಂಟು.

ಭಾರತದೇಶದಲ್ಲಿ ವೇದಗಳಿಂದ ಆರಂಭವಾದ ಆನುಭಾವಿಕ ಚಿಂತನೆ ಕ್ರಮೇಣ ವಿಸ್ತಾರವಾಗುತ್ತಾ ಉಪನಿಷತ್ತಿನಲ್ಲಿ ಸಾಗರೋಪಮವಾಗುತ್ತದೆ.ಅನಂತರ ಅದು ಭಗವದ್ಗೀತೆಯಲ್ಲಿ. ಆಗಮ, ಪುರಾಣ, ಇತಿಹಾಸ, ಮಹಾಕಾವ್ಯಗಳಲ್ಲಿ ಶಾಖೋಪಶಾಖೆಗಳಲ್ಲಿ ಬೆಳೆಯುತ್ತದೆ. ಮುಂದೆ ಭಾರತದೇಶದ ವಿವಿಧ ಭಾಗಗಳಲ್ಲಿ ಕಾಲಕಾಲಕ್ಕೆ ಆಗಿಹೋದ ಅನೇಕ ಸಾಧಕರಲ್ಲಿ ಇದರ ಪುನರವತಾರವನ್ನು ಕಾಣುತ್ತೇವೆ. ಪ್ರತಿಯೊಬ್ಬ ಸಾಧಕರಲ್ಲಿಯೂ ಈ ದೇಹದಲ್ಲಿ ಬಂಧಿತವಾದ ಜೀವಾತ್ಮವು ವಿಶ್ವವ್ಯಾಪಕವಾದ ವಿಶ್ವಾತ್ಮನಲ್ಲಿ ಸಮರಸಗೊಳ್ಳುವುದು ಹೇಗೆ?ದೈವಶಕ್ತಿಯೊಡನೆ ನೇರ ಸಂಬಂಧ ಪಡೆಯುವುದು ಹೇಗೆ?ಎಂಬ ಬಗೆಗೆ ಚಿಂತನ ಮಂಥನಗಳು ನಡೆದಿವೆ. ಇದೇ ಜಗತ್ತಿನ ಎಲ್ಲ ಧರ್ಮಗಳ ಮೂಲಭೂತವಾದ ತಳಹದಿಯಾಗಿದೆ.ಈ ಮಾರ್ಗದಲ್ಲಿ ನಡೆದು ಅದನ್ನು ಸಾಕ್ಷಾತ್ತಾಗಿ ಅರಿತು ಅನುಭವಿಸಿದಾಗಲೇ ಅದು ಅನುಭಾವವಾಗುತ್ತದೆ.ಅದನ್ನು ಸಾಧಿಸುವುದರಲ್ಲಿ ಒಬ್ಬೊಬ್ಬ ಸಾಧಕನ ಸಂಸ್ಕಾರ, ಶಕ್ತಿ, ಪೂರ್ವಸಿದ್ಧತೆ, ಮನೋಧರ್ಮಗಳಿಗನುಗುಣವಾಗಿ ಭಿನ್ನವಾಗುತ್ತದೆ.ಜೊತೆಗೆ ಆತನ ಕಾಲ ದೇಶಗಳೂ ಪ್ರಭಾವವನ್ನು ಬೀರುತ್ತದೆ. ಐರೋಪ್ಯದೇಶಗಳ ಅನುಭಾವಿಗಳಲ್ಲಿ ಸೇಯಿಂಟ್‌ಪಾಲ್, ಪ್ಲಾಟಿನಸ್ ಪ್ರಮುಖರು.ಭಾರತದೇಶದಲ್ಲಿ ದಕ್ಷಿಣದಲ್ಲಿ ಆಳ್ವಾರರು, ನಾಯನಾರರು, ಶರಣರು, ದಾಸರು, ಮಹಾರಾಷ್ಟ್ರದ ಸಂತರು, ಉತ್ತರದಲ್ಲಿ ಕಬೀರ, ಬಂಗಾಳದಲ್ಲಿ ಚೈತನ್ಯರು ಇವರುಗಳಿಂದ ಅನುಭಾವ ಶ್ರೀಮಂತವಾಗಿದೆ.ಇವರಲ್ಲಿ ಶಿವಶರಣರಾದ ಶ್ರೀ ಘನಲಿಂಗಶಿವಯೋಗಿಗಳ ಅನುಭಾವದ ನೆಲೆಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

ಶರಣರ ಅನುಭಾವದಲ್ಲಿ ಮುಖ್ಯವಾಗಿ ಎದ್ದುಕಾಣುವ ಅಂಶ ಸಮನ್ವಯ.ದ್ವೈತ–ಅದ್ವೈತ, ಭೇದ–ಅಭೇದ ಜ್ಞಾನ–ಕ್ರಿಯೆ, ಭಕ್ತಿ–ಧ್ಯಾನ, ಇಹ–ಪರ, ಆಚಾರ–ವಿಚಾರ ಇವೆಲ್ಲವುಗಳಲ್ಲಿ ಸಂಪೂರ್ಣವಾದ ಸಾಮರಸ್ಯ ಶರಣರ ಅನುಭಾವದ ವೈಶಿಷ್ಟ್ಯತೆ. ಇದಕ್ಕೆ ಅವರಿಗೆ ಹಿನ್ನೆಲೆಯಾಗಿದ್ದುದು ಸಿದ್ಧಾಂತದಲ್ಲಿಯೂ ಸಾಮರಸ್ಯವನ್ನು ಸಾಧಿಸಿದ ವೀರಶೈವತತ್ವ.ಕ್ರಿಶ್ಚಿಯನ್ ಸಾಧಕರು ತಮ್ಮ ಸಾಧನೆಯ ಮಾರ್ಗದಲ್ಲಿ ‘Purification or Purgation, Illumination or Enlightenment, Unitive Love’ ಎಂಬ ಮೂರು ಮಜಲುಗಳನ್ನು ಗುರುತಿಸುತ್ತಾರೆ.ವೀರಶೈವತತ್ವದಲ್ಲಿ ಷಟ್ಸ್ಥಲಗಳನ್ನು ಹೇಳುತ್ತಾರೆ. ಈ ಸೃಷ್ಟಿ, ಇದರ ವೈವಿಧ್ಯ, ಸುಖದುಃಖಗಳು ಇವುಗಳನ್ನು ಕುರಿತ ತಳಮಳ, ಹೋರಾಟ, ಅತೃಪ್ತಿಗಳನ್ನು ಭಕ್ತಸ್ಥಲದಲ್ಲಿ ಕಂಡರೆ, ಸತ್ಯದ ಹೊಸ ಆವಿಷ್ಕಾರದಲ್ಲಿ ಬದ್ಧತೆ, ನಿಷ್ಠೆಯನ್ನು ಮಹೇಶಸ್ಥಲದಲ್ಲಿ, ಸೃಷ್ಟಿಯನ್ನೆಲ್ಲಾ ದೈವಶಕ್ತಿಯ ಪ್ರಸಾದರೂಪವಾಗಿ ಕಾಣುವುದು ಪ್ರಸಾದಿಸ್ಥಲದಲ್ಲಿ, ಸೃಷ್ಟಿಶಕ್ತಿಯ ಅರಿವು ಯೌಗಿಕಧ್ಯಾನ ಅನುಸಂಧಾನಗಳಿಂದ ಅಂತರಂಗ ಬಹಿರಂಗವನ್ನೆಲ್ಲಾ ವ್ಯಾಪಿಸಿ ಅಂತಃಶಕ್ತಿಯನ್ನು ಜಾಗೃತಗೊಳಿಸುತ್ತದೆ ಪ್ರಾಣಲಿಂಗಿಸ್ಥಲದಲ್ಲಿ, ಆ ಜಾಗೃತಿಯಿಂದ ತಾನಿರುವ ಸನ್ನಿವೇಶವನ್ನೇ ದೈವಸ್ವರೂಪಕ್ಕೆ ಮಾರ್ಪಡಿಸುವನು ಶರಣಸ್ಥಲದಲ್ಲಿ, ಕೊನೆಗೆ ಎಲ್ಲವನ್ನೂ ದಾಟಿ ಏಕೀಭಾವದಿಂದ ಪರಮಾತ್ಮನೊಡನೆ ಸಮರಸದಿಂದ ಲೀನವಾಗುವನು ಐಕ್ಯಸ್ಥಲದಲ್ಲಿ. ಸಾಧಕನ ಆರಂಭದ ತಳಮಳವನ್ನು ‘dark night of thesoul’ ಎಂದೂ ಇದರಿಂದುಂಟಾಗುವ ಪರಿವರ್ತನೆಯನ್ನು

‘conversion’ ಎಂದೂ ಕರೆದಿದ್ದಾರೆ.ಇದರಲ್ಲಿ ‘volitional type, type by self surrender’ ಎಂದು, ಎರಡು ಬಗೆಗಳನ್ನು ಹೇಳಿದ್ದಾರೆ.ಎಂದರೆ ಸಾಧಕನ ಜೀವನದಲ್ಲಿನ ಪರಿವರ್ತನೆ ಕೆಲವರಲ್ಲಿ ಸಂಕಲ್ಪಪೂರ್ವಕ ಸತತ ಸಾಧನೆಯಫಲ; ಮತ್ತೆ ಕೆಲವರಲ್ಲಿ ಅನಿರೀಕ್ಷಿತ ಆತ್ಮಸಮರ್ಪಣಪೂರ್ವಕವಾದದ್ದು.ಎರಡೂ ಸಂದರ್ಭಗಳಲ್ಲಿಯೂ ಒಂದು ರೀತಿಯ ಪುನರ್ಜನ್ಮವಾಗುವುದು.ಅದೇ ‘Purification’, ಅದೇ ಷಟ್ಸ್ಥಲಗಳಲ್ಲಿಯೂ ಆಗುವುದು.

ಭಕ್ತಿಯೇ ಸಾಧಕನ ಮನಸ್ಸಿನ ವಿಕಾಸದ ಮೊದಲ ಹೆಜ್ಜೆ.ವೈವಿಧ್ಯಮಯವಾದ ಈ ಸೃಷ್ಟಿಯಲ್ಲಿ ಮನುಷ್ಯನ ಬದುಕಿನ ನಿರಂತರ ಹೋರಾಟ, ಇದರ ಗುರಿ.ಇದರ ಹಿಂದಿರುವ ಶಕ್ತಿಗಳನ್ನು ಕುರಿತ ಜಿಜ್ಞಾಸೆ, ನಶ್ವರಬದುಕನ್ನೇ ನಿತ್ಯವೆಂದು ಬದುಕಿದ್ದ ಅಜ್ಞಾನದ ತೆರೆಸರಿದು ನಿಜಸ್ವರೂಪ ತಿಳಿಯಲು ಗುರುಕರುಣೆ ಬೇಕು ಅದನ್ನು ಪಡೆದು ಸತ್ಯಕ್ಕೆ ತನ್ನನ್ನು ಸಮರ್ಪಿಕೊಳ್ಳುವುದು ಭಕ್ತಸ್ಥಲ, ಇದು ಆರಂಭದ ಹಂತ. ಆತನ ಚೈತನ್ಯಶಕ್ತಿಯನ್ನೇ ಗುರು ಇಷ್ಟಲಿಂಗದ ಸ್ವರೂಪದಲ್ಲಿ ಆತನಿಗೆ ದಯಪಾಲಿಸಿ ಅದರ ಉಪಾಸನೆಯ ಮೂಲಕ ಅವನ ಅಂಗಗುಣಗಳು ಲಿಂಗಗುಣಗಳಾಗಿ ಪರಿವರ್ತನೆಯಾಗುವಂತೆ ಅವನಲ್ಲಿ ಆಚಾರವಿಚಾರಗಳ ಮೂಲಕ ಅಂತರಂಗದ ಪರಿವರ್ತನೆಗೆ ಕಾರಣನಾಗುತ್ತಾನೆ. ಇದರಿಂದ ಬಹಿರಂಗದ ಆತನ ಲೌಕಿಕಜೀವನ ತಿರಸ್ಕೃತಗೊಳ್ಳಬೇಕಿಲ್ಲ. ಆದರೆ ಅದನ್ನು ಪರಿಭಾವಿಸುವ ನೋಟ ಮಾತ್ರಾ ಬದಲಾಗುತ್ತದೆ. ಹೀಗೆ ಎಚ್ಚರಗೊಂಡ ಮನಸ್ಸನ್ನು ಏಕೈಕನಿಷ್ಠೆ ದೃಢತೆಯಿಂದ ಮುನ್ನಡೆಸುತ್ತಾ ಆ ದಾರಿಯಲ್ಲಿ ಎದುರಾದ ಸಂಕಷ್ಟಗಳನ್ನು ಉನ್ನತ ನೈತಿಕಮೌಲ್ಯಗಳಿಂದ ಗೆದ್ದು ಸತ್ಯದ ರಹಸ್ಯ ಕಾಣುತ್ತಾನೆ. ಇದು ಮಹೇಶಸ್ಥಲದ ಸಾಧನೆ.

ಮುಂದೆ ಯಾವುದೇ ದ್ವಂದ್ವಗಳಿಲ್ಲದೆ ಬದುಕನ್ನು ಭಗವಂತನ ಪ್ರಸಾದವಾಗಿ ಸ್ವೀಕರಿಸುತ್ತಾನೆ ಪ್ರಸಾದಿಸ್ಥಲದಲ್ಲಿ.ಸೃಷ್ಟಿಯೇ ಶಿವನ ಪ್ರಸಾದ; ಅದರಲ್ಲಿ ಭಕ್ತನು ಭಗವಂತನ ಪ್ರಸಾದವಾಗಿ ಅವತರಣ–ಉತ್ತರಣಗಳು ರೂಪುಗೊಳ್ಳುವ ಪ್ರಕ್ರಿಯೆ ಇಲ್ಲಿದೆ.ಇದು ಸಾಂಕೇತಿಕವಾಗಿ ಗುರುಲಿಂಗಜಂಗಮಗಳಿಗೆ ತನುಮನಧನಗಳನ್ನು ಅರ್ಪಿಸುವಲ್ಲಿ ನಡೆಯುತ್ತದೆ. ಪ್ರಸಾದಿಗೆ ಲೋಕದ ಯಾವ ವಸ್ತುವೂ ತ್ಯಾಜ್ಯವಲ್ಲ; ಅವುಗಳನ್ನು ನೋಡುವ ದೃಷ್ಟಿಯಲ್ಲಿ ಗುಣಾವಗುಣಗಳು ನಿಂತಿವೆಯೇ ಹೊರತು ವಸ್ತುಗಳಲ್ಲಿಲ್ಲ. ಇದು ಪ್ರಸಾದಿಸ್ಥಲದಲ್ಲಿ ಕಂಡರೆ ಮುಂದೆ ಪ್ರಾಣಲಿಂಗಿಸ್ಥಲದಲ್ಲಿ ಆ ಮಹಾಪ್ರಸಾದವೇ ಶಿವಸ್ವರೂಪವಾಗಿ ಪರಿಣಮಿಸುವ ಅಭೇದ ದೃಷ್ಟಿಯನ್ನು ಕಾಣುತ್ತೇವೆ. ಇಲ್ಲಿಂದ ಮುಂದೆ ಸಾಧಕನ ದೃಷ್ಟಿ ಅಂತರ್ಮುಖವಾಗುತ್ತದೆ. ತನ್ನ ಪ್ರಾಣಶಕ್ತಿಯೇ ಪ್ರಾಣಲಿಂಗ, ಅದು ಇಷ್ಟಲಿಂಗವಾಗಿ ಮೂರ್ತೀಭವಿಸಿ ಕರಸ್ಥಲಕ್ಕೆ ಬಂದಿದೆ. ಆ ಇಷ್ಟಲಿಂಗದ ಅನುಸಂಧಾನದಿಂದ ಪ್ರಾಣಲಿಂಗಾನುಸಂಧಾನವನ್ನು ಶಿವಯೋಗದ ಮೂಲಕ ಮಾಡುತ್ತಾನೆ. ಆಗ ಅವನ ಅಂಗಗುಣಗಳು ಅಳಿದು ಅದು ಲಿಂಗದೇಹವಾಗುತ್ತದೆ.ಆತ ದೇಹ ಧರಿಸಿದ್ದರೂ ಭವಕ್ಕೆ ಅಂಟದೆ ಆತನ ಬದುಕೇ ಪೂಜೆಯಾಗುತ್ತದೆ.

ಮುಂದಿನ ಶರಣ, ಐಕ್ಯಸ್ಥಲಗಳು ಅನುಭಾವದ ಕೊನೆಯ ನೆಲೆಗಳು.ಇಲ್ಲಿ ಶರಣರು ತಮ್ಮ ಬದುಕೇ ಸಮಾಜಕ್ಕೆ ಜೀವಂತ ಆದರ್ಶವಾಗುವಂತೆ ಬಾಳಿ, ಉಳಿದವರನ್ನೂ ಆ ದಿಕ್ಕಿನೆಡೆಗೆ ಕರೆದೊಯ್ಯಲು ಮಾರ್ಗದರ್ಶಕರಾಗುವರು.ಶಿವನ ಸ್ವರೂಪವೇ ಆದ ಶರಣನ ಬದುಕೆಲ್ಲವೂ ಸಂಪೂರ್ಣ ಶಿವಪೂಜೆಯೇ ಆಗಿರುವುದು ಶರಣಸ್ಥಲದ ವಿಶೇಷವಾಗಿದೆ.ಇನ್ನು ಕೊನೆಯ ಐಕ್ಯಸ್ಥಲದಲ್ಲಿ ಭಗವಂತನ ಸತ್ಯಸಾಕ್ಷಾತ್ಕಾರ ಆತನಿಗೆ ಸಹಜಸ್ಥಿತಿಯಾಗಿ ತಾನೇ ಅದು ಆಗಿ ಲಿಂಗಾಂಗಸಾಮರಸ್ಯದ ಜೀವನ್ಮುಕ್ತ ಅನುಭವ ಹೊಂದುತ್ತಾನೆ. ಐಕ್ಯಸ್ಥಲದ ಈ ಸಿದ್ಧಿಯೇ ಗಂತವ್ಯ.

ಹೀಗೆ ಪೂರ್ಣದೃಷ್ಟಿಯ ಈ ಷಟ್ಸ್ಥಲ ಅನುಭಾವ ಸಾಧನೆಯು ವ್ಯಕ್ತಿ–ಸಮಾಜವನ್ನು ಒಟ್ಟೊಟ್ಟಿಗೇ ಉದ್ಧರಿಸುವ ವಿಶಿಷ್ಟಮಾರ್ಗವಾಗಿದೆ.ಶರಣರು ತಮ್ಮ ಪೂರ್ಣದೃಷ್ಟಿಯ ಪೂರ್ಣಜೀವನದಿಂದ ಆಧ್ಯಾತ್ಮ ಹಾಗೂ ಸಮಾಜದ ಅಂತರವನ್ನು ಇಲ್ಲವಾಗಿಸಿ ಇಹಪರಸಮನ್ವಯವನ್ನು, ಇದ್ದುಬದ್ಧನಲ್ಲದ, ಸುಳಿದುಸೂತಕಿಯಲ್ಲದ, ನಿಸ್ಸಂಗದ ನಿರ್ಲಿಪ್ತನಿಲುವನ್ನು ರೂಢಿಸಿದರು.

ಸಮಾಜ ಮತ್ತು ವ್ಯಕ್ತಿ ಪರಸ್ಪರ ಪೂರಕ. ಆದರೆ ಒಂದು ಕಾಲದಲ್ಲಿ ಆಧ್ಯಾತ್ಮ ಮತ್ತು ಸಮಾಜ ಪರಸ್ಪರ ತಿರಸ್ಕರಿಸುತ್ತಿದ್ದವು. ಇಂತಹ ಸಂದರ್ಭದಲ್ಲಿ ಶರಣರು ತಮ್ಮ ಪೂರ್ಣದೃಷ್ಟಿಯಿಂದ ಇಹಪರಗಳೆರಡರ ಸಮರಸ, ಆಚಾರ ವಿಚಾರಗಳ ಸಮನ್ವಯ, ಭಕ್ತಿಜ್ಞಾನಕರ್ಮಗಳ ಸಮನ್ವಯ, ಎಲ್ಲ ಯೋಗಗಳ ಸಾಮರಸ್ಯವನ್ನು ಸಾಧಿಸಿ ತೋರಿಸಿದುದು ಅವರ ಅನುಭಾವಮಾರ್ಗದ ವೈಶಿಷ್ಟ್ಯವಾಗಿದೆ.

ಲಿಂಗೈಕ್ಯದ ಜೀವನ್ಮುಕ್ತಸ್ಥಿತಿಯು‘ಬ್ರಹ್ಮಸಾಕ್ಷಾತ್ಕಾರ’ ‘ಬ್ರಹ್ಮಾನುಭೂತಿ’‘Mystic experience’ ಎಂಬರ್ಥಗಳನ್ನು ಒಳಗೊಂಡಿದ್ದರೂ, ಅದಕ್ಕಾಗಿ ಈ ಪ್ರಪಂಚವನ್ನೇ ಒಂದು ಸಾಧನವನ್ನಾಗಿ ಬಳಸಿಕೊಂಡು, ಇಲ್ಲಿನ ಪ್ರತಿಯೊಂದು ವಸ್ತುವಿನಲ್ಲಿಯೂ ಶಿವತ್ವವನ್ನು ಕಂಡು, ಅದೆಲ್ಲದರ ಮೂಲಸ್ವರೂಪವನ್ನು ತನ್ನಂತರಂಗದಲ್ಲಿಯೇ ಕಂಡುಕೊಳ್ಳುವ, ಕೊನೆಗೆ ತಾನೇ ಅದು ಆಗಿ ಪರಿಣಮಿಸುವ ವಿಶಿಷ್ಟಮಾರ್ಗವಾಗಿದೆ. ಶರಣರ ಅನುಭಾವಮಾರ್ಗ ಕೇವಲ ಭಕ್ತಿಯ ಭಾವೋದ್ರೇಕದಿಂದ ಹಾಡಿಕೊಂಡು ಕುಣಿಯುತ್ತಾ ಆನಂದ ಪಡೆಯುವುದಲ್ಲ ಅಥವಾ ಶುಷ್ಕ ಜಿಜ್ಞಾಸೆಗಳಲ್ಲಿಯೇ ಬುದ್ಧಿ ಚಮತ್ಕಾರಗಳ ಜ್ಞಾನ ತೋರಿಸುವುದಲ್ಲ; ಬದಲಿಗೆ ಅದು ಬುದ್ಧಿಭಾವಗಳ ಸಮನ್ವಯ; ವ್ಯಕ್ತಿತ್ವದ ಎಲ್ಲ ಶಕ್ತಿಗಳ ಪೂರ್ಣ ವಿಕಾಸ. ಆದ್ದರಿಂದಲೇ ಶರಣರಲ್ಲಿ ಮೂರ್ತಿಪೂಜೆಯ ಆವೇಶವಾಗಲೀ ಅಥವಾ ಏನೂ ಇಲ್ಲದ ಶುಷ್ಕ ನಿಷ್ಕ್ರಿಯೆಯಾಗಲೀ ಇಲ್ಲ. ಸಗುಣ ನಿರ್ಗುಣಗಳ ಸಾಮರಸ್ಯವಿದೆ. ಶರಣರ ಆಧ್ಯಾತ್ಮಸಾಧನೆಯಲ್ಲಿ ಸ್ತ್ರೀಪುರುಷರ ಸಮಾನತೆಯಿದೆ.

ಮುಂದಿನ ೧೫ನೆಯ ಶತಮಾನದ ದಾಸಸಾಹಿತ್ಯದಲ್ಲಿ ಶ್ರೀಮಧ್ವಾಚಾರ್ಯರ ದ್ವೈತಸಿದ್ಧಾಂತದ ವೈಷ್ಣವಭಕ್ತಿಯ ಸಗುಣೋಪಾಸನೆ, ಇದರಲ್ಲಿ ವಾತ್ಸಲ್ಯ, ದಾಸ್ಯ, ಸಖ್ಯ, ಮಧುರ, ಶಾಂತಭಕ್ತಿಯ ವಿವಿಧ ರೂಪಗಳನ್ನು ಕಾಣುತ್ತೇವೆ. ದ್ವೈತಸಿದ್ಧಾಂತಕ್ಕನುಗುಣವಾಗಿ ಸಾಯುಜ್ಯ, ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮುಕ್ತಿಯನ್ನು ಅವರು ಹೇಳುತ್ತಾರೆ. ಇವರ ತಾತ್ವಿಕ ಸ್ವರೂಪ ಇಂದಿನ ವೈಚಾರಿಕಯುಗಕ್ಕೆ ದೂರವೇ ಉಳಿದರೂ, ಇವರ ಕೀರ್ತನೆಗಳ ಹಿಂದಿರುವ ಮಾನವಜೀವನದ ಮಹೋದ್ದೇಶ, ಅದರಲ್ಲಿ ನೈತಿಕಜೀವನದ ಉದಾತ್ತವಾದ ಕಲ್ಪನೆ, ಆ ಮೂಲಕ ಆಧ್ಯಾತ್ಮಿಕ ಸಾಧನೆ, ಅದಕ್ಕೆ ಸಂಗೀತದ ಬಳಕೆ ಇವರಲ್ಲಿ ಪರಿಣಾಮಕಾರಿಯಾಯಿತು. ಇದೇ ಕಾಲಘಟ್ಟದಲ್ಲಿ ಬಂದ ನಿಜಗುಣಶಿವಯೋಗಿಗಳವರ ‘ಕೈವಲ್ಯಪದ್ಧತಿ’ಯೆಂಬ ಕೃತಿಯು ಆಧ್ಯಾತ್ಮಿಕತತ್ವಗಳನ್ನು ಕುರಿತ ರಾಗಸಮನ್ವಿತವಾದ ಹಾಡುಗಳಿಂದ ಕೂಡಿದ್ದು, ಕನ್ನಡದಲ್ಲಿ ತತ್ವಪದಗಳಿಗೆ ನಾಂದಿ ಹಾಡಿತು. ಈ ಮಾರ್ಗದಲ್ಲಿ ಮುಂದೆ ಮುಪ್ಪಿನಷಡಕ್ಷರಿಗಳು, ಸರ್ಪಭೂಷಣರು, ಬಾಲಲೀಲಾಮಹಾಂತ ಶಿವಯೋಗಿಗಳು, ಶಿಶುನಾಳಶರೀಫರು ಸಾಧನೆಯನ್ನು ಮಾಡಿದರು.

ಹೀಗೆ ಕನ್ನಡದಲ್ಲಿ ಶರಣಸಾಹಿತ್ಯ, ದಾಸಸಾಹಿತ್ಯ, ತತ್ವ ಸಾಹಿತ್ಯಗಳಲ್ಲಿ ಅಲ್ಲದೆ ಇನ್ನೂ ಅನೇಕ ರೂಪಗಳಲ್ಲಿ, ಅನೇಕ ರೀತಿಗಳಲ್ಲಿ ಆಧ್ಯಾತ್ಮದ ಅನುಭಾವದ ಹೊಳಹನ್ನು ಕಾಣಬಹುದಾಗಿದೆ.ಜೈನಪುರಾಣಗಳಲ್ಲಿ, ಹರಿಹರ, ರಾಘವಾಂಕರ ವಾಣಿಗಳಲ್ಲಿ, ಕುಮಾರವ್ಯಾಸನ ಭಕ್ತಿಯ ಆವೇಶದಲ್ಲಿ, ರತ್ನಾಕರನ ತ್ಯಾಗಭೋಗಸಮನ್ವಯದಲ್ಲಿ, ಮಹಾಲಿಂಗರಂಗನ ಅನುಭವಾಮೃತದ ಅದ್ವೈತಸಿದ್ಧಾಂತದಲ್ಲಿ ಆಧ್ಯಾತ್ಮದ ಅನುಭಾವದ ವಿವಿಧನೆಲೆಗಳನ್ನು ಗುರುತಿಸಬಹುದು. ಹೀಗೆ ಕನ್ನಡದಲ್ಲಿ ಅನುಭಾವಸಾಹಿತ್ಯ ಬಹುಮುಖವಾಗಿ ಬೆಳೆದು ಜೀವನಕ್ಕೆ ಬೆಳಕನ್ನೀಯುತ್ತಿವೆ. ಅದರಲ್ಲಿ ಪ್ರಸ್ತುತ ಶ್ರೀಘನಲಿಂಗಶಿವಯೋಗಿಗಳವರ ವಚನಗಳಲ್ಲಿನ ಅನುಭಾವದ ನೆಲೆಗಳನ್ನು ಗುರುತಿಸುವುದು ಈ ನಿಬಂಧದ ಮುಖ್ಯ ಉದ್ದೇಶವಾಗಿದೆ.

**ಕೊನೆಟಿಪ್ಪಣಿ:**

೧. ಶರಣರ ಅನುಭಾವಸಾಹಿತ್ಯ, ಡಾ.ಎಚ್.ತಿಪ್ಪೇರುದ್ರಸ್ವಾಮಿಸಮಗ್ರಸಾಹಿತ್ಯಮಾಲೆ–೧, ವಚನ ಅಧ್ಯಯನಕೇಂದ್ರ, ಬೆಳಗಾವಿ, ೨೦೧೫, ಪು. ೧೫೫–೭

## ೩. ಶ್ರೀಘನಲಿಂಗಶಿವಯೋಗಿಗಳವರ ವಚನಗಳಲ್ಲಿ ಅನುಭಾವ

ಶ್ರೀಘನಲಿಂಗಶಿವಯೋಗಿಗಳವರು ಶರಣಮಾರ್ಗದಲ್ಲಿ ಸಾಧನೆಯನ್ನು ಮಾಡಿದ ಶ್ರೇಷ್ಠ ಅನುಭಾವಿಗಳು.ಅವರು ವಿರಕ್ತರಾಗಿದ್ದುಕೊಂಡು, ‘ಶರಣಸತಿಲಿಂಗಪತಿ’ ಮಾರ್ಗದಲ್ಲಿ ಸಾಧನೆಯನ್ನು ಮಾಡಿದರು.ತಮ್ಮ ಅನುಭಾವವನ್ನು ಅವರು ವಚನಗಳ ರೂಪದಲ್ಲಿ ದಾಖಲಿಸಿದರು. ಈವರೆಗೆ ನಮಗೆ ಅವರ ೬೬ ವಚನಗಳು ಸಿಕ್ಕಿವೆ. ಅವರ ವಚನಗಳನ್ನು ವಿಭಾಗಿಸುವುದು

ಕಷ್ಟಕರವಾದುದು. ಅವರ ವಚನಗಳಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆಧ್ಯಾತ್ಮಿಕ, ಸಾರ್ವತ್ರಿಕ, ವೈಯಕ್ತಿಕ ಚಿಂತನೆಗಳು ಒಂದರೊಡನೊಂದು ಹಾಸುಹೊಕ್ಕಾಗಿ ಬೇರ್ಪಡಿಸಲಾಗದಂತೆ ಬೆರೆತುಕೊಂಡಿವೆ. ಅವು ಸುಂದರವಾದ ಭಾವಗೀತೆಗಳಂತಿದ್ದು ಮನಮಿಡಿಯುತ್ತಿವೆ. ಅವುಗಳನ್ನು ನಾವು ಭಿನ್ನಭಿನ್ನ ನೆಲೆಗಟ್ಟಿನ ಹಿನ್ನೆಲೆಯಲ್ಲಿ, ಭಿನ್ನಭಿನ್ನವಾಗಿ ಓದಿ ಅರ್ಥೈಸಿ, ಅವುಗಳಿಂದ ಅನೇಕ ಅರ್ಥಪರಂಪರೆಗಳನ್ನು ಪಡೆಯಬಹುದು. ಅವರ ವಚನಗಳು ತುಂಬಾ ಧ್ವನಿಪೂರ್ಣವಾಗಿದ್ದು, ಹಲವು ಆಯಾಮಗಳಲ್ಲಿ ಅದು ತನ್ನ ಅರ್ಥವನ್ನು ಧ್ವನಿಸುತ್ತಾ ಹೋಗುವ ವಿಶಿಷ್ಟ ಸಾಹಿತ್ಯಕ ಶಕ್ತಿಯನ್ನು ಪಡೆದಿವೆ.ಅವುಗಳಿಂದ ಶ್ರೀಘನಲಿಂಗಶಿವಯೋಗಿಗಳವರ ವ್ಯಕ್ತಿತ್ವವನ್ನು ಆ ಕಾಲದ ಸಾಮಾಜಿಕ ಸ್ಥಿತಿಗತಿಗಳನ್ನು, ಆ ಕಾಲದ ಸಾಂಸ್ಕೃತಿಕ ಪರಂಪರೆಯ ಏತ್ತರಬಿತ್ತರಗಳನ್ನು, ಅವರ ಆಧ್ಯಾತ್ಮಿಕನೆಲೆಯ ಅನುಭಾವದ ಚಿಂತನೆಗಳನ್ನು, ಸಾಹಿತ್ಯಕ ಸೊಗಸನ್ನು ಅರ್ಥೈಸಬಹುದು.ಹೀಗೆ ಅವರ ವಚನಗಳನ್ನು ಹಲವು ಆಯಾಮಗಳಲ್ಲಿ ಅಧ್ಯಯನ ಮಾಡಬಹುದಾದರೂ ಪ್ರಸ್ತುತ ಅವರ ವಚನಗಳಲ್ಲಿ ಅನುಭಾವದ ನೆಲೆಯನ್ನು ಮಾತ್ರಾ ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಪ್ರಸ್ತುತ ಶ್ರೀಘನಲಿಂಗಶಿವಯೋಗಿಗಳವರ ವಚನಗಳಲ್ಲಿ ಅನುಭಾವದ ನೆಲೆಯನ್ನು ಎರಡು ರೀತಿಯಲ್ಲಿ ಗ್ರಹಿಸಬಹುದಾಗಿದೆ.ಮೊದಲಿಗೆ ಇಡೀ ಅವರ ವಚನಗಳನ್ನು ಅವರ ಆಧ್ಯಾತ್ಮ ಬದುಕಿನ ಚರಿತ್ರೆಯಂತೆ ಓದಿದರೆ ಅದರಲ್ಲಿ ರೋಚಕವಾಗಿ ಆಧ್ಯಾತ್ಮ ಸಾಧಕನೋರ್ವನ ಗುರಿ, ಉದ್ದೇಶ, ಅವನ ಸಾಧನೆಯಲ್ಲಿನ ತಳಮಳ, ಎರಡುತೊಡರುಗಳು, ಅವನು ಸಾಧಿಸಬೇಕಾದ ಗುರಿ, ಅದರ ಪರಮಪ್ರಯೋಜನ ಇತ್ಯಾದಿಗಳ ಅದ್ಭುತ ಚಿತ್ರಣವು ನಮ್ಮ ಕಣ್ಮುಂದೆ ಕಟ್ಟುತ್ತದೆ. ಅದು ಬಿಟ್ಟು ಎರಡನೆಯದಾಗಿ ಆಧ್ಯಾತ್ಮಿಕ ಅನುಭಾವವು ಅವರ ವಚನಗಳಲ್ಲಿ ಬಿತ್ತರವಾಗಿರುವ ದೃಷ್ಟಿಕೋನವನ್ನು ಮಾತ್ರಾ ಪ್ರಮುಖವಾಗಿ ಪರಿಗಣಿಸಿ ಓದಿದರೆ ಅವುಗಳು ಮೇಲ್ನೋಟಕ್ಕೆ ವೈಯಕ್ತಿಕ, ಸಾರ್ವತ್ರಿಕ, ಎರಡನ್ನೂ ಒಳಗೊಂಡಿರುವಂತಹುದು ಹಾಗೂ ಆಧ್ಯಾತ್ಮಿಕ ನೆಲೆಯ ವಚನಗಳಾಗಿ ಸ್ಥೂಲವಾಗಿ ನಾಲ್ಕು ಗುಂಪುಗಳಾಗಿ ವಿಭಾಗವಾಗುತ್ತವೆ. ಪ್ರತೀ ಗುಂಪುಗಳ ಹಿನ್ನೆಲೆಯಲ್ಲಿ ಆ ವಚನಗಳನ್ನು ಅಧ್ಯಯನ ಮಾಡಿದಾಗ ಅವುಗಳಿಂದ ಹೊರಹೊಮ್ಮುವ ಆಧ್ಯಾತ್ಮಿಕ ಚಿಂತನೆಗಳನ್ನು ಗುರುತಿಸುವುದು ಎರಡನೆಯ ದೃಷ್ಟಿಯ ಅಧ್ಯಯನವಾಗಿದೆ. ಈ ಎರಡೂ ರೀತಿಯ ಅಧ್ಯಯನಗಳನ್ನು ಇಲ್ಲಿ ಮಾಡಲಾಗಿದೆ.

### ೩.೧ ಸಾಧನಕನ ನೆಲೆಯಲ್ಲಿ ಅನುಭಾವ :

ಮೊದಲಿಗೆ ಅವರ ಎಲ್ಲ ವಚನಗಳನ್ನೂ ಒಬ್ಬ ಆಧ್ಯಾತ್ಮ ಸಾಧಕನ ಅನುಭಾವದ ನೆಲೆಯಲ್ಲಿ ಅನುಕ್ರಮವಾಗಿ ವಿಶ್ಲೇಷಿಸಿದಾಗ ಹೊರಹೊಮ್ಮುವ ಅದ್ಭುತ ಅನುಭಾವದ ಚರಿತ್ರೆ ಹೀಗೆ ಕಂಡುಬರುತ್ತದೆ.ಭಕ್ತಿಯೆಂಬ ವಿರಹಾಗ್ನಿಯಲ್ಲಿ ಬೆಂದ ಶರಣುವೆಣ್ಣಾದ ತನ್ನನ್ನು ಭಗವಂತನೇ, ನಾನೀನುಭಯವಿಲ್ಲದಂತೆ ಕೂಡು, ಕೂಡದಿದ್ದರೆ ತನ್ನ ಪುಣ್ಯ ಕಣ್ದೆರೆಯದು, ಆ ಪುಣ್ಯ ಕಣ್ದೆರೆಯದಿದ್ದರೆ ತನ್ನ ಕರ್ಮ–ಕಾಮ–ಕಾಲ–ಭವಗಳು ಹಗೆಗಳಾಗಿ ತನ್ನನ್ನು ತಿಂದುತೇಗಿ ಹಿಂಡಿ ಹಿಪ್ಪೆಮಾಡಿ, ನುಂಗಿ ಉಗುಳ್ದು, ಹಿಂದಣ ಬಟ್ಟೆಗೆ ನೂಕಿ, ಸೆರೆಸಂಕಲೆ ಹಾಕುವುದು.ಆದುದರಿಂದ ಭಗವಂತನು ತನಗೊಲಿದರೆ ತಾನು ಅನವರತವೂ ಆತನನ್ನೇ ನೆನೆನೆನೆದು ಬೀಗಿಬೆಳೆದು ಹಾಡಿಹಾಡಿ ನೋಡಿನೋಡಿ ಮೋಕ್ಷ ಪಡೆಯುವೆನು.ಆದರೆ ಭವದ ಬಂಧನಕ್ಕೆ ಸಿಲುಕಿ ನಲುಗುವ ನಿನ್ನೊನ್ನೊಲಿಸಿಕೊಳ್ಳಲರಿಯದ ತನಗೆ ಮುಗ್ಧವೆಣ್ಣಾದ ಪತಿಭಕ್ತಿಯನ್ನು ಕರುಣಿಸಿ ಲಾಲಿಸು (೧).ಮತಿಗೆಟ್ಟು ಮಾನವಲೋಕಕ್ಕೆ ಬಂದ ತನ್ನನ್ನು, ಭವಭೂಪತಿ ಸೆರೆಹಾಕಿ ಕಾಲಕಾಮರ ವಶಕ್ಕೆ ಕೊಟ್ಟುದರ ಫಲವಾಗಿ ತಾನು ಬಂಧಿತವಾಗಿರುವೆನು.ಅದರಿಂದ ತಾನೇ ಬಿಡಿಸಿಕೊಳ್ಳಲಾಗದ ದರಿದ್ರತನದಿಂದ ನರಳುತ್ತಿರುವೆನು ಬಸವಾದಿಶರಣಪ್ರಮಥರೆಲ್ಲಾ ಸೇರಿ ಕರುಣೆ ತೋರಿದರೆ ತನಗೆ ಚಂದ್ರಾಯುಧ ದೊರೆತಂತಾಗುವುದು. ಅದನ್ನು ಹಿಡಿದು ತನ್ನೆಲ್ಲಾ ಭವಬಾಧೆಗಳನ್ನು ಗೆದ್ದು ರತ್ನಾಚಲವನ್ನೇರಿ ಅಲ್ಲಿರುವ ಲಿಂಗವನ್ನು ಪೂಜಿಸುವ ತನ್ನ ಬಿನ್ನಪವನ್ನು ನಡೆಸಿಕೊಡಬೇಕು(೨). ತಾನು ಸುತ್ತೂರು ಪೀಠದ ಗುರುಗಳಾಗಿ, ಶ್ರೀತೋಂಟದಾರ್ಯರ ಕರುಣೆಯ ಶಿಶುವಾಗಿ ಘನಲಿಂಗಯೆಂಬ ನಾಮದಿಂದ ಬೆಳೆಯಲು, ಘನಲಿಂಗಿಯಮೋಹದ ಚನ್ನಮಲ್ಲಿಕಾರ್ಜುನನು ತನ್ನನ್ನು ಆತನಿಗಾಗಿ ಬೇಡಿ ಕಳುಹಲು ನಮ್ಮವರು ಒಪ್ಪಿ ಅವನಿಗೆ ಮಾತನ್ನು ಕೊಟ್ಟರು(೩). ಆದರೆ ಭಗವಂತನ ನೆನಹಿಲ್ಲದೆ ತಾನು ಗುರಿತಲುಪಲಾರದೆ ನಡುವೆಯೇ ಬಿದ್ದು ನರಳಿ ಅಜ್ಞಾನದಿಂದ ಒದ್ದಾಡುತ್ತಿರುವೆನು. ಇಂತಹ ತನಗೆ ಸುಜ್ಞಾನವನ್ನು ಕೊಟ್ಟು ಜಾಗ್ರತ್‌ಸ್ವಪ್ನಸುಷುಪ್ತಿಯಲ್ಲೂ ನಿನ್ನನ್ನೇ ನೆನೆಯುವಂತೆ ಮಾಡಿ ಪ್ರೀತಿಯಿಂದ ತನ್ನನ್ನು ರಕ್ಷಿಸು(೪). ಈ ಹಾದಿಯಲ್ಲಿ ತಾನು ದುರ್ಮಾರ್ಗಿಯಾಗಿದ್ದರೂ ತನಗೆ ವಿರಕ್ತನ ಶಿವಲಾಂಛನವನ್ನು ಕೊಟ್ಟುದು ದಿಟದ ಒಲವಲ್ಲ. ತಾನೀಗ ಮುಂದನರಿಯದ ಅಂಧಕನಾಗಿದ್ದೇನೆ. ನಿನ್ನ ಅನಾದಿಯ ಹಳೆಯನಾದ ತನ್ನ ತಪ್ಪನ್ನು ಮನ್ನಿಸಿ ತನ್ನನ್ನು ಕಾಪಾಡು(೫).

ಎಲೈ ಕರುಣೆಯೇ ದೈವಸ್ವರೂಪನಾದ ತನ್ನನ್ನು ಅಜ್ಞಾನದ ಭವಬಂಧನದಲ್ಲಿ ಸಿಲುಕಿಸದೆ, ಡೋಹಾರಕಕ್ಕಯ್ಯಾದಿ ಶರಣರ ಮನೆಯಬಾಗಿಲ ಕಾಯುವ ಶುನಕನ ಮಾಡಿ ನಿಲ್ಲಿಸು(೬) ಎಲೈ ಆತ್ಮನೇ, ನೀನು ಅಜ್ಞಾನದ ಲೌಕಿಕಭವದಲ್ಲಿ ಸಿಲುಕದೆ, ಜ್ಞಾನಭವದಲ್ಲಿ ಮಿಂದು ಲಿಂಗವನೆ ಸಾಧಿಸುವಂತಾಗಲಿ(೭). ಎಲೈ ಜೀವವೇ ನೀನು ಅಂತಃಕರಣ ಚತುಷ್ಟಯಗಳಿಂದ ಕೂಡಿ ಅಜ್ಞಾನದಿಂದ ಭವರಾಟಾಳದಲ್ಲಿ ಸಿಲುಕಿ ದರಿದ್ರನಾದೆ. ೮೪ ಲಕ್ಷ ಜನ್ಮವೆತ್ತಿ ಈಗ ಅಂತಃಕರಣ ಚತುಷ್ಟಯಗಳು ಎಚ್ಚೆತ್ತು ಉಂಟಾದ ಸಮ್ಯಗ್‌ಜ್ಞಾನದಿಂದ ತನ್ನ ಭವರಾಟಾಳದ ಋಣವನ್ನು ತಿದ್ದಿ ತಾನು ಮುಕ್ತಿರಾಜ್ಯ ಪಡೆಯುವಂತಾಗಲಿ(೮). ಜೀವನೆಂಬ ಕೋಡಗ ಜಾತಿ, ವರ್ಣ, ಆಶ್ರಮ, ಕುಲ, ಗೋತ್ರ, ನಾಮಗಳಿಂದ ತ್ರಿಲಿಂಗಗಳನ್ನು ಮರೆಮಾಡಿ, ಅಹಂಕಾರದಿಂದ ಪಂಚಭೂತದ ಈ ದೇಹವನ್ನು ಜ್ಞಾನೇಂದ್ರಿಯ ಕರ್ಮೇಂದ್ರಿಯ ಅಂತಃಕರಣಚತುಷ್ಟಯಗಳಿಗೊಳಗು ಮಾಡಿ, ಪಂಚಪ್ರಾಣಗಳನ್ನು ಕಿತ್ತು ಒಡಹುಟ್ಟಿದವರನ್ನು ನಾಶಮಾಡಿ ತಾನೂ ನಾಶವಾಯಿತು. ಆಗ ಜೀವದಲ್ಲಿ ಭಕ್ತಿಮೂಡಿ, ನಿರಹಂಕಾರ, ಸುಜ್ಞಾನಗಳಿಂದ ಅಜ್ಞಾನದ ನಾಶವಾಗಿ ಜೀವ ಶರಣತ್ವವನ್ನು ಪಡೆಯಿತು(೯). ಅರ್ಥದ ಮೇಲಿನ ಆಶೆ ಇರುವವರೆಗೂ ಮರ್ತ್ಯದ ಹಂಬಲ ಹರಿಯದು; ತಾನು ಭಗವಂತನನ್ನೇ ನಂಬಿನೆಚ್ಚಿರುವೆನೆಂಬುದಕ್ಕೆ ಅರ್ಥದ ಹಂಬಲ ಗೆದ್ದಿರುವುದೇ ಸಾಕ್ಷಿ; ಆದ್ದರಿಂದ ತನಗೆ ಮುಕ್ತಿನೀಡು; ಅರ್ಥಕ್ಕೆ ಆಸೆಪಟ್ಟರೆ ತನಗೆ ಭವರಾಟಾಳವನ್ನೇ ನೀಡು(೧೦). ತಾನು ಶರಣಸತಿಲಿಂಗಪತಿಯಾಗಿ ನಡೆದ ಪತಿವ್ರತೆ ಎಂಬುದಕ್ಕೆ ಏಕಾಂತದ ಪರೀಕ್ಷೆಯಲ್ಲೂ ತನ್ನನ್ನು ಪರೀಕ್ಷಿಸು; ಅದರಲ್ಲಿ ಸೋತರೆ ತನಗೆ ನರಕವನ್ನೇ ನೀಡು ಎಂಬಂ ತನ್ನೀ ಬಿರುದಿನ ಭಾಷೆಯೂ ಭಗವಂತನ ಕರುಣೆಯೇ ಆಗಿದೆ(೧೧). ಭಗವಂತನ ಅನುಗ್ರಹದಿಂದ ತನಗೆ ಈ ಮಾನವಜನ್ಮ, ಅದರಲ್ಲಿ ಲಿಂಗಜ್ಞಾನ ದೊರೆತಿದೆ. ಅದು ಸಾರ್ಥಕವಾಗುವಂತೆ ನುಡಿನಡೆ ಎರಡಾಗದಂತೆ ನಡೆಸು(೧೨). ಮತಿಗೆಟ್ಟ ಮರುಳುಮಾನವ ಕಾಲಕಾಮರನ್ನು ಗೆಲ್ಲುವುದಕ್ಕೆ ಪಂಚೇಂದ್ರಿಯಗಳು ಪಂಚಬ್ರಹ್ಮರನ್ನು, ತನುಮನಧನಗಳು ಪರಬ್ರಹ್ಮನನ್ನು ಅಪ್ಪಿಕೊಳ್ಳುವುದೇ ಉಪಾಯವಾಗಿದೆ(೧೩). ನಿತ್ಯವಾಗಿರುವ ಪರಮಾತ್ಮನು ತಾನೇ ಭೋಗಾಕಾಂಕ್ಷೆಯಿಂದ ಅನಿತ್ಯವಾಗಿರುವ ಜೀವನೆಂಬ ದೇಹದೊಡಗೂಡಿ ದುಃಖಿಯೆನಿಸಿತು. ಅದರಿಂದ ಬಿಡುಗಡೆ ಪಡೆಯಲು ಸ್ವತಃ ಜೀವನೇ ಭೋಗಾಕಾಂಕ್ಷೆಯನ್ನು ಮುರಿದರೆ ಜೀವವು ಆತ್ಮನಾಗಿ ಪರಮಾತ್ಮನಲ್ಲಿ ಅವಿಚ್ಛಿನ್ನವಾಗಿ ಸೇರಿ ಅವಿರಳ ಆನಂದಸ್ವರೂಪಿಯಾಗುತ್ತದೆ(೧೪). ಇಂತಹ ಆತ್ಮನಿಗೆ ಮಲಮಾಯಾಕರ್ಮಗಳಿಲ್ಲ. ದ್ವೈತಮಾರ್ಗಕ್ಕೆ ಮುಕ್ತಿಯಿಲ್ಲ(೧೫). ಶಿವಪ್ರಸಾದವನ್ನು ಬೀಸರವ್ಹೋಗದಂತೆ ಎಚ್ಚರಿಕೆಯಿಂದ ಅರ್ಪಿತಮಾಡಬೇಕು(೧೬). ಗುರು–ಲಿಂಗ–ಜಂಗಮ–ತೀರ್ಥ–ಪ್ರಸಾದಗಳೆಂಬ ಪಂಚಾಚಾರಗಳನ್ನೇ ಪರಬ್ರಹ್ಮನೆಂದು ನಮಿಸಿ ಅಂಗೀಕರಿಸುವುದೇ ಭಕ್ತಿ; ಮಲತ್ರಯಗಳನ್ನು ಗೆಲ್ಲುವುದೇ ಜ್ಞಾನ; ಒಮ್ಮೆ ಲಿಂಗಾರ್ಪಿತ ಮಾಡಿದ ಬಳಿಕ ಮತ್ತೊಂದಕ್ಕೆ ಆಸೆ ಮಾಡದಿರುವುದೇ ವೈರಾಗ್ಯ(೧೭). ಅಂಗಭೋಗ ಅನರ್ಪಿತ; ಲಿಂಗಭೋಗ ಪ್ರಸಾದ(೧೮). ಹೊನ್ನು–ಹೆಣ್ಣು–ಮಣ್ಣನ್ನು ಬಿಟ್ಟಾತ ಮಾತ್ರಾ ವಿರಕ್ತನಲ್ಲ; ಕಾಯಕ ಮಾಡದೆ ಮಂಡೆ ಬೋಳಿಸಿಕೊಂಡು ಕಂಡಕಂಡವರ ಮನೆಯಲ್ಲಿ ಉಂಬಾತ ಆತ್ಮಸುಖಿಯಲ್ಲ; ದೇಹವನ್ನು ದಂಡಿಸಿ ಏಕಾಂಗಿಯಾಗಿ ಗಿರಿಗಹ್ವರದಲ್ಲಿರುವಾತನೂ ವಿರಕ್ತನಲ್ಲ; ಏಕೆಂದರೆ ತಾಯಿಯ ಗರ್ಭದಲ್ಲಿರುವ ಶಿಶುವು ವಿರಕ್ತನಂತೆ ತಪಸ್ವಿಯಂತಿರುವುದು; ಆದರೆ ಅದು ತಪಸ್ವಿಯಲ್ಲ. ಹೆಣ್ಣುಹೊನ್ನುಮಣ್ಣು ತ್ಯಜಿಸಿ, ಲಿಂಗಭೋಗಿಯಾಗಿ, ದೇಹಧಾರಣೆಗಷ್ಟೇ ಭಿಕ್ಷಾನ್ನ ಅವಲಂಬಿಸಿ, ಏಕಾಂತವಾಸಿಯಾಗಿ, ಸದಾಕಾಲ ಮಂತ್ರ ಜಪಿಸುತ್ತಾ, ನವಚಕ್ರಗಳಲ್ಲಿ ನವಬ್ರಹ್ಮರನ್ನು ಮೂರ್ತಿಗೊಳಿಸಿ, ನವಹಸ್ತಗಳಿಂದ ಭಾವಪುಷ್ಪದಿಂದ ಅರ್ಚಿಸುವಾತನೇ ನಿಜವಾದ ವಿರಕ್ತ(೧೯). ಕೇವಲ ಬಹಿರಂಗದ ಷಟ್‌ಸ್ಥಲಮಾರ್ಗಿಯಾಗಿ ಅಷ್ಟಮದಗಳನ್ನು, ದಶವಾಯುಗಳನ್ನು ಇಲ್ಲವಾಗಿಸಿಕೊಳ್ಳಬೇಕು; ನವನಾಳಗಳಲ್ಲಿ ನವಲಿಂಗಗಳನ್ನು ಪೂಜಿಸಬೇಕು; ಯೌಗಿಕ ಸಾಧನೆ ಮಾಡಿ ಇಡಾಪಿಂಗಳಸುಷುಮ್ನ ನಾಡಿಗಳು ಕೂಡುವೆಡೆಯ ಪವಿತ್ರ ಸಂಗಮಕ್ಷೇತ್ರ ಆಜ್ಞಾಚಕ್ರದಲ್ಲಿ ಪರಬ್ರಹ್ಮಶಕ್ತಿಗೆ ಭಾವಪುಷ್ಪಗಳಿಂದ ಪೂಜೆಮಾಡಿ ಜೀವನ್ಮುಕ್ತಿಯನ್ನು ಪಡೆಯುವಾತನೇ ನಿಜವಿರಕ್ತ. ಅದೇ ನಿಜವಿರಕ್ತಿ(೨೦).

ಏಕಲಿಂಗನಿಷ್ಠಾಪರನಾದ ವಿರಕ್ತನು ಉಪಾಧಿಕೆ ಇಲ್ಲದ ಕ್ರಿಯೆಗಳನ್ನು ಕಟ್ಟುನಿಟ್ಟಾಗಿ ಕೊನೆತನಕ ಆಚರಿಸಿದಾಗಲೇ ಅದು ಮುಕ್ತಿಗೆ ಸಾಧನವಾಗುತ್ತದೆ(೨೧). ಶ್ರುತಿ–ಗುರು–ಸ್ವಾನುಭಾವದಿಂದ ತಿಳಿದು ಬರುವ ಅಂಶವೇನೆಂದರೆ ಕೊನೆಯಉಸಿರಿನತನಕ ಶರಣ ಕ್ರಿಯಾನಿಷ್ಠನಾಗಿದ್ದರೆ ಮಾತ್ರಾ ನಿಜಮುಕ್ತಿ(೨೨). ಭಕ್ತ ವಿರಕ್ತರಿಬ್ಬರಲ್ಲೂ ತಂತಮ್ಮ ಜ್ಞಾನಕ್ಕೆ ತಕ್ಕ ಆಚರಣೆ ಇರಲೇಬೇಕು(೨೩). ಭಕ್ತನು ಇಷ್ಟಲಿಂಗದಲ್ಲಿಯೇ ನಿಷ್ಠನಾಗಿ ಶರಣನ ಕಾಯವೇ ಕೈಲಾಸವೆಂದು ಭಾವಿಸಿ ನಿಜಮುಕ್ತಿ ಪಡೆಯಬೇಕು(೨೪). ಪೂರ್ವಶರಣರ ಬಗ್ಗೆ ಕೆಟ್ಟನುಡಿವ ಹೊಟ್ಟೆಯಕಿಚ್ಚಿನ ಬಾಯಿಬಡಕತನ ಬೇಡಾ(೨೫). ಮಾಯೆಗೆ ಸಿಕ್ಕು ನಾಶವಾಗಿ ಹೋದ ಮರುಳರು, ಮಹಾತ್ಮರಂತೆ ವೇಷಧರಿಸಿ ದುಷ್ಕೃತ್ಯಗಳಲ್ಲಿ ತೊಡಗಿ, ಶಿವಶರಣರನ್ನು ನಿಂದಿಸುವವರು ಸೋಲನ್ನುಣ್ಣುತ್ತಾರೆ(೨೬). ಅಜ್ಞಾನಿಗಳು ನರಕುರಿಗಳು(೨೭). ತನ್ನಂತರಂಗದಲ್ಲಿ ಮೂಡಿದ ಮಾಯಾಮೋಹಗಳ ಭಾವವನ್ನು ಭಗವಂತನೊಡನೆ ಮರೆಯಿಲ್ಲದೆ ಹೇಳಿಕೊಂಡು ತನ್ನೀಮನದ ಕಾಳಿಕೆಯನ್ನು ಕಳೆದು ಅವನೊಡನೆ ಒಂದಾಗಿರಿಸಲಿ(೨೮). ಶರಣರ ವಚನಗಳನ್ನು ಓದಿ

ಸನ್ಮಾರ್ಗಹಿಡಿದು ಶಿವಯೋಗದ ಮೂಲಕ ಸರ್ವಾಂಗಲಿಂಗಿಸ್ಥಿತಿ ಪಡೆದಮೇಲೆ ಮತ್ತೆ ಅವುಗಳನ್ನು ಓದಬೇಕಿಲ್ಲ (೨೯). ಲಿಂಗಾಂಗ ಸಂಯೋಗಿಗಳಲ್ಲದವರುಫಲಭೋಗಕ್ಕೆ ಒಳಗಾದರು; ಲಿಂಗಾಂಗಸಂಯೋಗಿಗಳು ಎಲ್ಲವೂ ಶಿವಮಾಯವಾಗುವುದು ಮಾತ್ರಾ ಶಿವನೊಳಗಾದರು(೩೦). ಮಾಯಾಪ್ರಪಂಚದ ಬಲೆಗೆ ಸಿಲುಕದೆ ಧ್ಯಾನ ಮೌನ ಉಪಾಸ್ತಿಯಿಂದ ಜನನಮರಣ ಗೆದ್ದು ಹುಟ್ಟುಗೆಟ್ಟೆನು(೩೧).ತ್ಯಾಗಾಂಗಿ, ಭೋಗಾಂಗಿ, ಯೋಗಾಂಗಿಯಾಗಿ ತಾನು ಸರ್ವಾಂಗಲಿಂಗಿಯಾದೆನು(೩೨). ತನುವಿಡಿದ ನರಗುರಿಗಳೆಲ್ಲಾ ಭಕ್ತರಾಗುವುದಿಲ್ಲ(೩೩). ತಾನು ಕರಪಾತ್ರನಾಗಿ ತನಗೊದಗುವ ಸುಖದುಃಖಗಳಿಗೆಲ್ಲಾ ದೈವವನ್ನೇ ಹೊಣೆಮಾಡುವೆನಲ್ಲದೆ ಮಾನವರ ಹಂಗು ತನಗಿಲ್ಲ(೩೪). ತನ್ನ ಪ್ರಾಣ ಕಿರುಬಟ್ಟೆಯಲ್ಲಿ ನಡೆಯದು(೩೫). ಲಿಂಗದ ಬೆಳಗನ್ನು ಲಿಂಗಸಂಧಾನಿಯೇ ಬಲ್ಲ(೩೬). ವಿರಕ್ತನಾದವನು ಶಿವಯೋಗದಲ್ಲಿ ಸಿದ್ಧಿಯನ್ನು ಸಾಧಿಸಿ ನಿಜಲಿಂಗಸಂಧಾನಿಯಾಗಿರಬೇಕು(೩೭). ತೊಟ್ಟುಬಿಟ್ಟ ಹಣ್ಣಿನಂತೆ ತನಗೆ ನಿಜೈಕ್ಯದ ಬಟ್ಟೆ ನಿರುತವಾಯಿತು(೩೮). ತಾಪತ್ರಯಗಳಿಗೆ ತನ್ನನ್ನು ಒಳಗುಮಾಡುವ ಕರ್ಮತ್ರಯಗಳು ನಾಶವಾದಾಗಲೇ ತಾನು ಶರಣರ ವಶವಾದೆನು(೩೯).

ಹಿಡಿದ ವ್ರತನೇಮಗಳನ್ನು ಬಿಡದ ಸದಾಚಾರವೇ ಶರಣಸ್ಥಲ(೪೦). ಅಜ್ಞಾನಿಗಳು ಬಾಯಿಬಡಕರು(೪೧). ದ್ವೈತಿಅದ್ವೈತಿಗಳು ಲಿಂಗಾಂಗಸಾಮರಸ್ಯವನ್ನು ಒಪ್ಪದಿದ್ದರೆ ಅದರಿಂದ ಲಿಂಗಾನುಭಾವಿಗಳಿಗೆ ಕೊರತೆಯೇನೂ ಇಲ್ಲ(೪೨). ಶರಣರ ಮನೋಮಧ್ಯದಲ್ಲಿರುವ ಶಿವನು ದ್ವೈತಿಅದ್ವೈತಿಗಳಲ್ಲಿ ಇಲ್ಲ(೪೩). ಭಕ್ತಿಯಿಂದ ಬಾಯಿತುಂಬ ವಿರಕ್ತರೆಂದು ಕರೆಸಿಕೊಂಡವರೆಲ್ಲಾ ವಿರಕ್ತರಲ್ಲ: ಇಷ್ಟಲಿಂಗನಿಷ್ಠರಾಗಿ ತತ್ವಮಸಿಗೆ ಅರ್ಹನಾದಾತನೇ ದೇಹತ್ರಯಗಳಲ್ಲಿ ತ್ರಿಲಿಂಗಗಳನ್ನು ಧರಿಸಿ, ಜ್ಞಾತೃ–ಜ್ಞಾನ–ಜ್ಞೇಯ ತ್ರಿಪುಟಿಯನ್ನು ಒಂದು ಮಾಡಿ ಪರಬ್ರಹ್ಮಸ್ವರೂಪನಾಗಿ ಜಾಗೃತಸ್ವಪ್ನಪ್ತಿಯೆಂಬರಿವರತು, ಹಸಿವು ತೃಷೆವಿಷಯವ್ಯಾಪಾರಗಳನ್ನು ಸುಟ್ಟುರುಹಿದಾತನೇ, ವಿರಕ್ತ(೪೪). ಮುಕ್ತಿಯಪುರದ ಗುಪ್ತಮಾರ್ಗವನ್ನು(೪೫), ನಿರಂಜನ ಪ್ರಣವಸ್ವರೂಪವನ್ನು(೪೬), ಪಂಚಲಿಂಗಗಳ ಪ್ರಾಣ–ಅಂಗ–ಮುಖ–ಪದಾರ್ಥಗಳನ್ನು(೪೭), ಅರ್ಪಿತ ಅವಧಾನಕ್ರಮವನ್ನು(೪೮), ಗುರುಕೊಟ್ಟ ಸಂಧಾನವನ್ನು(೫೦), ಲಿಂಗಾಂಗ ಸಂಬಂಧವನ್ನು ಅರಿತರೆ ನಿಜಮುಕ್ತಿ(೫೧). ಶರಣನಿಗೆ ಗಮನ–ನಿರ್ಗಮನವಿಲ್ಲ (೫೨). ಆತ ಇಷ್ಟಲಿಂಗದೀಕ್ಷೆಯಿಂದ ಆರಂಭಿಸಿ ಎಲ್ಲ ಆಚಾರಗಳನ್ನು ಮಾಡಿ ಸರ್ವಾಂಗಲಿಂಗಿಯಾಗುವನು(೫೩). ಲಿಂಗದ ನೋಟ ಬ್ರಹ್ಮದ ನೋಟವಾಗುವುದು (೫೪). ನಿರ್ವಾಣದಾಸೋಹಿಯಾಗಿ(೫೫), ತನುಮನಭಾವ ತ್ರಿವಿಧವೂ ನಷ್ಟವಾಗಿ ಸಾಕ್ಷಾತ್ ಪರಶಿವನೇ ತಾನಾಗುವನು(೫೬),

ಇಂಥ ಶಿವಕೃಪೆಯಿಂದ ಸರ್ವಾಂಗವೂ ಪ್ರಸಾದವಾಗಿ ನಿತ್ಯವಾಯಿತು(೫೭). ಇಂಥ ಶರಣನ ಆಚರಣೆ ಭಕ್ತಿಜ್ಞಾನವೈರಾಗ್ಯದಿಂದ ಷಟ್ಸ್ಥಲ ಮಾರ್ಗದಲ್ಲಿ ನಡೆದು ನಿಜವಿರಕ್ತಿಯಲ್ಲಿ ಆತ ಮುಕ್ತನಾಗುವನು.(೫೮), ಕಠಿಣಪದಾರ್ಥವ ಲಿಂಗಕ್ಕೆ ಕೊಟ್ಟುಕೊಳ್ಳಲರಿಯದು(೪೯). ಸಾಧಕನ ಆಧ್ಯಾತ್ಮಿಕ ಕಷ್ಟಗಳು ಅಪಾರ(೫೯). ಆದರೂ ತಾನು ಭಗವಂತನೊಡನೆ ಮಧುರಭಕ್ತಿಯ ಸ್ವರೂಪದ ಒಗೆತನವ ಮಾಡುವೆ(೬೦), ಮಾಯೆಯ ಹಾವಳಿಯಿಂದ ವಿರಕ್ತರಿಗೆ ಅದೆಷ್ಟೋ ಆಧ್ಯಾತ್ಮಿಕ ಪುಸ್ತಕಗಳೂ ತೋರಿಕೆಗಳಾಗಿ, ಹೆಣ್ಣು ಮೋಹದ ಬಲೆಯಾಗಿ ಕಟ್ಟಿಹಾಕಿದೆ(೬೧), ಲೌಕಿಕ ಕಾಮಕ್ಕೆ ಹೇಸಿ ವಿರಕ್ತನಾಗಿ ನಿರ್ವಾಣಪದಕ್ಕೆ ಕಾಮಿತನಾಗಿ ಭಗವಂತನಿಗೆ ತಾನು ವಧುವಾದೆನು(೬೨). ಆಸೆಯು ನಾಶವಾಗದೆ ತಾನೇ ನಾಶವಾಗುತ್ತಿದ್ದೇನೆ. ಹಾಗಾಗದಂತೆ ತನ್ನ ಮಾಯಾಸೂತ್ರವನ್ನು ಹರಿದು, ದಶೇಂದ್ರಿಯಗಳ ಗುಣಗಳನ್ನು ನಿವೃತ್ತಿ ಮಾಡಿ, ಅಂಗಭೋಗಗಳನ್ನಡಗಿಸಿ ಲಿಂಗಭೋಗಿಯಾಗಿಸಿ ನಿಶ್ಚಲವಾಗಿಸು(೬೩). ಕರಸ್ಥಲದ ಪ್ರಸಾದದಿಂದ ಕಾಯ, ಜೀವ, ಪ್ರಾಣ, ಕರಣೇಂದ್ರಿಯಗಳೆಲ್ಲವೂ ಪ್ರಸಾದವಾಯಿತು(೬೪). ಅಗ್ನಿ ಅಗ್ನಿಯನ್ನು ಕೂಡಿದರೆ ಬೆಳಗು ಮೂಡುವುದು, ತೃಣವನ್ನು ಕೂಡಿದರೆ ಹೊಗೆದೋರುವುದಲ್ಲದೆ ಬೆಳಕು ಕಾಣದು; ಹಾಗೆಯೇ ಪರಮಜ್ಞಾನಿಯೊಡನೆ ಸಮ್ಯಜ್ಞಾನಿ ಒಡವೆರೆದರೆ ನಿರ್ಮಲ ಸ್ವರೂಪ ಕಾಣುವುದಲ್ಲದೆ ಕಾಳಿಕೆ ಕಾಣದು; ಜ್ಞಾನಿ ಅಜ್ಞಾನಿಯೊಡನೆ ಕೂಡಿದರೆ ಹಾಲಿನೊಡನೆ ಹುಳಿಬೆರೆತಂತಾಗುತ್ತದೆ.(೬೫). ಕಾಡುತ್ತಿರುವ ಸಪ್ತ ವ್ಯಸನಗಳಿಂದ ಭಗವಂತನನ್ನು ಅರಿಯದೆ ನೆನೆಯದೆ ಹೋದೆ; ಇವುಗಳನ್ನು ಕಳೆದು ಭಗವಂತನಲ್ಲಿ ತನಗೆ ಪರಮಭಕ್ತಿಯನ್ನು ಕರುಣಿಸು(೬೬).

ಹೀಗೆ ಶ್ರೀಘನಲಿಂಗಶಿವಯೋಗಿಗಳವರ ಎಲ್ಲ ೬೬ ವಚನಗಳನ್ನೂ ಅನುಕ್ರಮವಾಗಿ ಅರ್ಥೈಸಿದಾಗ ಅನುಭಾವದ ಚರಿತ್ರೆಯೊಂದು ನಮಗೆ ದೊರಕುತ್ತದೆ. ಅದರಲ್ಲಿ ಆರಂಭದಿಂದ ೪೪ನೆಯ ವಚನಗಳವರೆಗೂ ಸಾಹಿತ್ಯಕ ಪರಿಭಾಷೆಯಲ್ಲಿ ಆಧ್ಯಾತ್ಮದ ಅನುಭಾವದ ನೆಲೆಗಳನ್ನು ಅನೇಕ ಸಾದೃಶ್ಯಗಳು, ಉಪಮೆಗಳು, ನುಡಿಗಟ್ಟುಗಳ ಬಳಕೆಗಳ ಮೂಲಕ ವಿವರಿಸಿದ್ದಾರೆ. ಅವು ಸುಂದರ ಭಾವಗೀತೆಗಳಂತೆ ಓದುಗರ ಮನದಲ್ಲಿ ಆಳವಾದ ಪ್ರಭಾವವನ್ನು ಬೀರುತ್ತವೆ. ಇನ್ನು ಕೊನೆಯ ೪೫ರಿಂದ ೬೬ರವರೆಗಿನ ಬಹುತೇಕ ವಚನಗಳೆಲ್ಲಾ ತಾತ್ವಿಕ ಸೈದ್ಧಾಂತಿಕ ನೆಲೆಗಟ್ಟನ್ನೇ ಪ್ರಧಾನವಾಗಿ ವಿವರಿಸುವಂತೆ ಕಂಡುಬರುತ್ತವೆ. ಹಾಗಾಗಿ ಅವುಗಳ ಭಾಷೆ

ಪಡೆಸಾಗಿವೆ. ಆಧ್ಯಾತ್ಮ ಸಾಧನೆಯ ಗುರಿ–ಮಾರ್ಗ–ಸಿದ್ಧಿಗಳನ್ನು, ತಾತ್ವಿಕ ನೆಲೆಗಳನ್ನು ವಿವರಿಸುವುದಕ್ಕೆ ಇಲ್ಲಿ ಹೆಚ್ಚಿನ ಪ್ರಾಧಾನ್ಯತೆ ಸಂದಿದೆ. ಆದರೂ ಅವುಗಳನ್ನು ಸುಂದರವಾದ ಕನ್ನಡ ಭಾಷೆಯಲ್ಲಿ ಹೇಳಿರುವುದು ವಿಶಿಷ್ಟವಾಗಿದ್ದು ಗಮನಾರ್ಹವಾಗಿದೆ. ಹೀಗೆ ಅವರ ಎಲ್ಲಾ ವಚನಗಳೂ ಆಧ್ಯಾತ್ಮಸಾಧಕನೋರ್ವನ ಚರಿತ್ರೆಯಂತಿರುವುದು ವಿಶಿಷ್ಟವಾಗಿದೆ.

### ೩.೨ ಆಧ್ಯಾತ್ಮದ ನೆಲೆಯಲ್ಲಿ ಅನುಭಾವ :

ಇನ್ನು ಎರಡನೆಯದಾಗಿ ಶ್ರೀಘನಲಿಂಗಶಿವಯೋಗಿಗಳವರ ವಚನಗಳಲ್ಲಿ ಬಿತ್ತರವಾಗಿರುವ ಆಧ್ಯಾತ್ಮದ ಅನುಭಾವದ ನೆಲೆಯಲ್ಲಿ ಅವರ ವಚನಗಳನ್ನು ಸ್ಥೂಲವಾಗಿ ಅಧ್ಯಯನಕ್ಕೊಳಪಡಿಸಿದಾಗ ಅವುಗಳನ್ನು ವೈಯಕ್ತಿಕ, ಸಾರ್ವತ್ರಿಕ, ಎರಡನ್ನು ಒಳಗೊಂಡಿರುವಂತಹುದು ಹಾಗೂ ಆಧ್ಯಾತ್ಮಿಕನೆಲೆಯ ವಚನಗಳೆಂದು ೩ಭಾಗಗಳಾಗಿ ವಿಭಾಗಿಸಬಹುದು. ಆ ವಿಭಾಗಗಳ ಹಿನ್ನೆಲೆಯಲ್ಲಿ ಅವರ ವಚನಗಳನ್ನು ಅಧ್ಯಯನ ಮಾಡಿದಾಗ ಹೊರಹೊಮ್ಮುವ ಅನುಭಾವದ ಆಧ್ಯಾತ್ಮಿಕ ಚಿಂತನೆಗಳು ಹೀಗಿವೆ:

### ೩.೨.೧ ವೈಯಕ್ತಿಯ ನೆಲೆಯಲ್ಲಿ ಅನುಭಾವ :

ಶ್ರೀಘನಲಿಂಗಶಿವಯೋಗಿಗಳವರ ೩,೧೧,೧೨,೧೬,೧೮,೨೮,೨೯,೩೦,೩೧,೩೪,೩೫,೩೮,೩೯ನೆಯ ವಚನಗಳು ಅಂದರೆ ಒಟ್ಟು ಅವರ ೧೩ ವಚನಗಳು ಮೇಲ್ನೋಟಕ್ಕೆ ಸ್ಥೂಲವಾಗಿ ವೈಯಕ್ತಿಕ ವಚನಗಳ ಗುಂಪಿಗೆ ಸೇರಿಸಬಹುದಾಗಿದ್ದರೂ ಅವುಗಳಲ್ಲಿಯೂ ಆಧ್ಯಾತ್ಮದ ನೆಲೆಯ ಅನೇಕ ಕಿಡಿಗಳಿವೆ.

ಮೊದಲಿಗೆ ಶ್ರೀಮತ್ಸೂತ್ತೂರು ಗುರುಪೀಠಪರಂಪರೆಯಲ್ಲಿ ಬಂದ ತಾವು ಶರಣಸತಿಲಿಂಗಪತಿ ಭಾವದಲ್ಲಿ ಶರಣುವೆಣ್ಣಾಗಿ ಶ್ರೀಗುರು ತೋಂಟದಾರ್ಯರ ಶಿಷ್ಯತ್ವದಲ್ಲಿ ಘನಲಿಂಗಿಯೆಂಬ ನಾಮಕರಣದಿಂದ ತನ್ನರಿವನ್ನು ಬೆಳಗಿಸಿಕೊಂಡು ಲೋಕೋದ್ಧಾರಕ್ಕಾಗಿ ತನ್ನನ್ನು ಸಂಪೂರ್ಣ ಮೀಸಲಿರಿಸಿಕೊಂಡ ವಿವರವು ಬರುತ್ತದೆ (೩).ಅನಂತರ ತನ್ನೀ ನಿರ್ಧಾರ ಕುಟಿಲವಲ್ಲವೆಂಬುದನ್ನು ಹೇಳುತ್ತಾರೆ. (೧೧). ಮರ್ತ್ಯಲೋಕದಲ್ಲಿನ ಮನುಷ್ಯಜನ್ಮದ ಪಾವಿತ್ರ್ಯತೆಯನ್ನು ಹೇಳಿ, ಅದರಲ್ಲಿ ಬಂದಿರುವ ಲಿಂಗಪರಿಕಲ್ಪನೆಯ ಅದ್ಭುತತೆಯನ್ನು ಹೇಳಿ, ಅದರ ಸಾಧನೆ ಸಿದ್ಧಿಗೆ ಮನುಷ್ಯನ ನಡೆನುಡಿ ಒಂದಾಗಿರಬೇಕೆಂಬ ಆಶಯವನ್ನು ವೈಯಕ್ತಿಕನೆಲೆಯಲ್ಲಿ ಹೇಳುತ್ತಾರೆ (೧೨). ಭಕ್ತನಾದ ವಿರಕ್ತನು ಮೂರು ಪಾಶಗಳ ಕುಣಿಕೆಗಳನ್ನು ಕಳೆದು, ಭೋಗಭುಕ್ತ್ಯಾದಿಗಳನ್ನು ಅತಿಗಳೆದು, ಅಹಂಕಾರ ಮಮಕಾರರಹಿತನಾಗಿ ಉಪಾಧಿಕೆ ಒಡಲಾಶೆಗಳನ್ನು ಗೆದ್ದು, ಪೊಡವಿಯ ಸ್ನೇಹವನ್ನು ಬಿಟ್ಟು, ತ್ಯಾಗಿಯಾಗಿ ನಿಜಮುಕ್ತಿಗಾಗಿ ಬದುಕುವ ಕರಪಾತ್ರೆಯ ಬಿರುದಿನ ತನ್ನ ಬದುಕು ಪ್ರಸಾದ ದ್ರೋಹವಾಗುವುದಿಲ್ಲ; ಕಡೆತನಕ ತ್ರಿವಿಧಪ್ರಸಾದವನ್ನು ಉದಾಸೀನಮಾಡದಂತೆ ನಡೆಸೆಂಬ ನಿಷ್ಠೆ ಸಾಧಕನಲ್ಲಿರಬೇಕೆಂಬ ಆಶಯ ಇಲ್ಲಿ ವ್ಯಕ್ತಪಡಿಸುತ್ತಾರೆ. (೧೬). ಅಂಗಭೋಗ ಅನರ್ಪಿತ, ಲಿಂಗಭೋಗ ಪ್ರಸಾದವೆಂಬ ಆದ್ಯರ ವಚನಕ್ಕನುಗುಣವಾಗಿಯೇ ಸರ್ವಕಾಲವೂ ಸಾಧಕ ಸಂಯಮದಿಂದ ತನ್ನ ಇಂದ್ರಿಯಗಳನ್ನು ತನ್ನ ಬುದ್ಧಿಯ ಹತೋಟಿಯಲ್ಲಿರಿಸಿ ಸಿದ್ಧಿಯನ್ನು ಕಾಣಬೇಕೇ ಹೊರತು, ಸ್ವಚ್ಛಂದತೆಯಿಂದ ವಿನಾಶ ಉಂಟುಮಾಡಿಕೊಳ್ಳಬಾರದೆಂಬ ಎಚ್ಚರ ಸಾಧಕನಲ್ಲಿರಬೇಕು(೧೮). ಸಾಧಕನ ಸಾಧನೆಯಲ್ಲಿ ಜಾಗ್ರತ್–ಸ್ವಪ್ನ–ಸುಷುಪ್ತಿಯ ಅವಸ್ಥೆಗಳಲ್ಲಿ ಮನಸ್ಸು–ನಡೆ–ನುಡಿ ಒಂದಾಗದೆ, ಭೋಗ–ಕಾಮನೆಗಳಲ್ಲಿಯೇ ತೊಡಗಿಕೊಂಡಿದ್ದರೆ ಇಷ್ಟ–ಪ್ರಾಣ–ಭಾವಲಿಂಗಪೂಜೆಯ ಸಿದ್ಧಿ ದೊರಕುವುದಿಲ್ಲವೆಂದು ಪರಿತಪಿಸುತ್ತಾ ಅವಸ್ಥಾತ್ರಯಗಳಲ್ಲಿ ದೈವದ ಜೊತೆಯೇ ಭಕ್ತನಿರಲೆಂದಾಶಿಸುತ್ತಾರೆ(೨೮). ಪ್ರೀತಿಸಿ ಲೌಕಿಕಭೋಗದಲ್ಲಿಯೇ ಮುಳುಗಿದವಳಿಗೆ ಸಾಮಾನ್ಯ ಸುಖ ಮನವೆಳೆಸದಂತೆ, ಒಮ್ಮೆ ಪುರಾತನರ ವಚನಾಧ್ಯಯನಗಳಿಂದ ಆಧ್ಯಾತ್ಮದಲ್ಲಿ ಸಾಧನೆ ಮಾಡಿ ಶಿವಯೋಗಸಿದ್ಧಿ ಪಡೆದ ಮೇಲೆ ಮರಳಿ ಅವುಗಳ ಅಧ್ಯಯನ ಸೊಗಸುವುದಿಲ್ಲ ಎಂಬುದನ್ನು ಕೆನೆ ಸಾಧ್ಯವಾದ ಬಳಿಕ ಹಾಲಿನ ಹಂಗೇತಕಯ್ಯ ಎಂಬ ಮಾತಿನ ಮೂಲಕ ಅಭಿವ್ಯಕ್ತಿಸಿದ್ದಾರೆ(೨೯).

ಸಾಧಕನು ಹೆಣ್ಣುಹೊನ್ನುಮಣ್ಣನ್ನು ಬಿಟ್ಟು ಷಟ್ಸ್ಥಲದ ಷಡ್ಲಿಂಗ ದರ್ಶಿಸಿ, ಅರಿಷಡ್ವರ್ಗಗಳನ್ನು ದೂರಮಾಡಿ ಗುರುಲಿಂಗಜಂಗಮರ ಸೇವೆಯಿಂದ ಏಕೋತ್ತರ ಶತಸ್ಥಲದ ಆಚರಣೆಯ ಮೂಲಕ ಸಿದ್ಧಿ ಪಡೆದು ಶಿವನೊಳಗಾಗಬೇಕೆನ್ನುತ್ತಾರೆ. ಹಾಗೆ ಮಾಡದೆ ಮಣ್ಣನ್ನು ನಂಬಿ ಬ್ರಹ್ಮನ ಸೃಷ್ಟಿಗೆ ಅಂದರೆ ಭವಕ್ಕೆ ಒಳಗಾಗುತ್ತಾರೆ; ಹೊನ್ನನ್ನು ನಂಬಿ ವಿಷ್ಣುವಿನ ಸ್ಥಿತಿಗೆ ಅಂದರೆ ಬದುಕಲಿಕ್ಕೇ ಪರದಾಡುತ್ತಾರೆ; ಹೆಣ್ಣನ್ನು ನಂಬಿ ರುದ್ರಸ್ಥಿತಿಗೆ ಅಂದರೆ ಲಯಕ್ಕೆ ಒಳಗಾಗುತ್ತಾರೆ. ಅವರು ಹುಟ್ಟಿ–ಅಲೆದು ಅಧಮರಾಗಿ ಸಾಯುತ್ತಾರೆ.ಇನ್ನೂ ಕೆಲವರು ಹೆಣ್ಣುಹೊನ್ನುಮಣ್ಣಿನ ಆಕರ್ಷಣೆಯಿಂದ ದೂರವಾಗಿ ಸದಾಚಾರಿಯಾಗಿ ಸನ್ಯಾಸಿಯಾಗಿ ತಿಂದುಂಡು ಆತ್ಮಸುಖಿಯಾಗಿ ಫಲಭೋಗಿಗಳಾಗುತ್ತಾರೆ.ಇದು ಮನುಷ್ಯನ ಮಧ್ಯಮ ಜೀವನ. ಆದರೆ ಯಾವ ಸಾಧಕ ಶಿವಯೋಗ ಸಾಧನೆ ಮಾಡಿ ಸಿದ್ಧಿ

ಪಡೆಯುವನೋ ಅವನೇ ಉತ್ತಮಜೀವನ ನಡೆಸಿ ಸಿದ್ಧಿಪುರುಷನಾಗಿ ಬಾಳುತ್ತಾನೆ (೩೦). ಪುಣ್ಯಾಕಾಂಕ್ಷಿಗಳಾದ ತಾವು ಭೌತಿಕ ಯಾತ್ರೆಗಿಂತ ಆಧ್ಯಾತ್ಮಿಕ ಯೌಗಿಕಯಾತ್ರೆಯನ್ನು ಭಕ್ತಿಜ್ಞಾನವೈರಾಗ್ಯಪರರಾಗಿ ಜಂಗಮನ ಮೂಲಕ ಧ್ಯಾನ ಮೌನ ಉಪಾಸ್ತಿಯ ಮೂಲಕ ೨೫ ತತ್ವಗಳ ಈ ದೇಹದ ಅಟ್ಟಹಾಸವನ್ನು ಮೆಟ್ಟಿತುಳಿದು, ಶಿವನ ಪಂಚಮುಖ ಪಂಚಸಾದಾಖ್ಯ ಪಂಚಶಕ್ತಿಗಳೇ ದೇಹದ ಧಾತುವಾಗಿ ಸ್ಥೂಲ–ಸೂಕ್ಷ್ಮ–ಕಾರಣವೆಂಬ ತನುತ್ರಯಗಳ ಮೇಲೆ ಇಷ್ಟ–ಪ್ರಾಣ–ಭಾವಲಿಂಗಗಳನ್ನು ಧರಿಸಿ ಓಂಕಾರದ ನೆಲೆಯಲ್ಲಿ ಸರ್ವಾರ್ಪಣ ಭಾವದಿಂದ ಯೌಗಿಕವಾಗಿ ಆಜ್ಞಾಚಕ್ರದ ಮೂಲಕ ಪಶ್ಚಿಮಚಕ್ರದ ಸಹಸ್ರಾರದ ಶಾಂಭವೀ ದ್ವೀಪ ತಲುಪಿ ಹುಟ್ಟುಗೆಟ್ಟು ಮೋಕ್ಷಸ್ಥಿತಿ ಪಡೆದುದಾಗಿ ಹೇಳಿದ್ದಾರೆ(೩೧).

ಸನ್ಯಾಸದೀಕ್ಷಿತನಾದ ತಾನು ಕರಪಾತ್ರ ಹಿಡಿದು ಹೋಗುವಾಗ ಭಕ್ತರು ತನ್ನನ್ನು ಮನೆಯೊಳಕ್ಕೆ ಕರೆದು ಯಾವ ಕನಿಷ್ಟ ರೀತಿಯಲ್ಲಿ ಉಪಚರಿಸಿದರೂ ಅದರಿಂದ ತಾನು ಗಲಿಬಿಲಿಗೊಳ್ಳದೆ, ಮನುಷ್ಯಜನ್ಮ ಪಡೆದ ತನಗೆ, ಮುಕ್ತಿಗಾಗಿ ಸನ್ಯಾಸತ್ವ ನೀಡಿ, ಅದರಲ್ಲಿ ಅಂಬಲಿ ಭಿಕ್ಷೆ ದೊರೆತಾಗ, ಅದರಲ್ಲಿ ಎಲ್ಲಕ್ಕೂ ಕಾರಣಕರ್ತನಾದ ಭಗವಂತನ ಇರವು ಅರಿವನ್ನು ತಿಳಿದು ಬದುಕುವೆನೇ ಹೊರತು ಮಾನವನ ಹಂಗು ತನಗಿಲ್ಲವೆಂಬ ಜ್ಞಾನಿಗಳಾಗಿದ್ದಾರೆ ಘನಲಿಂಗದೇವರು(೩೪). ಸಾಧಕನಾದ ತನ್ನ ಮನಸ್ಸು ಷಟ್ಸ್ಥಲ ಷಡ್ವಿಧ ಲಿಂಗಗಳನ್ನಲ್ಲದೆ ಷಟ್ಚಕ್ರಗಳಲ್ಲಿಯೂ ಪ್ರವಹಿಸಿ ಶಿವಯೋಗ ಸಾಧನೆ ಮಾಡಿದೆ.ಶರಣೆ ಅಕ್ಕಮಹಾದೇವಿಯಂತೆ ತನ್ನ ಮಾರ್ಗ ಹಿರಿದಾದುದು ಕಿರಿದಲ್ಲವೆನ್ನುತ್ತಾರೆ. ಷಟ್ಸ್ಥಲ ಸಾಧಕಿ ನೀಲಾಂಬಿಕೆಯವರ ಮೋಹದ ಕಂದನಾಗಿ ತಾನು ವಿರಕ್ತನಾಗಿರುವೆನೆನ್ನುತ್ತಾರೆ(೩೫). ಜೀವ ಪಂಚಭೂತಗಳಿಂದಾಗಿ ಆತ್ಮನನ್ನು ಹೊಂದಿ, ಅದಕ್ಕೆ ಸೃಷ್ಟಿ–ಸ್ಥಿತಿ–ಲಯವನ್ನು ಪಡೆದುಕೊಂಡೆನು. ಸಾಲ ತೀರಿಸಲಾಗದೆ ಜೈಲು ಸೇರಿದಾಗ ಅದರಿಂದ ಪಾರಾಗುವುದಕ್ಕಾಗಿ ತಾನು ದೇಹದುರ್ಭಾವಗಳನ್ನು ಪರಿಹರಿಸಿಕೊಂಡೆನು. ಹೀಗೆ ಜೈವಿಕ ಕಾಲಾಂತರದ ದೋಷಗಳಿಂದ ಪಾರಾಗಿ ಆಧ್ಯಾತ್ಮಿಕ ಶಕ್ತಿಸಂಪನ್ನನಾಗಿ ಮಾಯೆಯಿಂದ ಮುಕ್ತನಾಗಿ ತ್ರಿಪುರದಹನ ಮಾಡಿ ಸಂಸಾರಸಾಗರ ದಾಟಿ ಮುಕ್ತಿಯ ಸಿಂಹಾಸನವಿರುವ ಪಶ್ಚಿಮಚಕ್ರದ ಬಾಗಿಲಿನಲ್ಲಿ ಶಿವನ ಮುಂದೆ ಮೊರೆಯಿಡುತ್ತಿರು ವೆನೆಂದಿದ್ದಾರೆ(೩೮). ತಾಪತ್ರಯಗಳಿಗೆ ಕಾರಣವಾದ ಸಂಚಿತ–ಪಾರಬ್ಧ– ಆಗಾಮಿ ಎಂಬ ಕರ್ಮತ್ರಯಗಳನ್ನು ಹೊನ್ನು ಹೆಣ್ಣು ಮಣ್ಣು ಬಿಡುವ ಮೂಲಕ ಕಳೆದುಕೊಂಡು, ಅದೇರೀತಿ ಬ್ರಹ್ಮ–ವಿಷ್ಣು–ರುದ್ರರ ಸೃಷ್ಟಿ– ಸ್ಥಿತಿ–ಲಯದ ಕಾಟದಿಂದಲೂ ಪಾರಾಗಿ ಜೀವನ್ಮುಕ್ತರಾಗಿದ್ದಾಗ ತನ್ನನ್ನು ಬಸವಾದಿ ಪ್ರಮಥ ಪರಂಪರೆಯ ಕೈವಶಕ್ಕೆ ಒಪ್ಪಿಸಿದುದಾಗಿ ಹೇಳಿಕೊಂಡಿದ್ದಾರೆ (೩೯).

ಹೀಗೆ ಈ ಮೇಲಿನ ೧೩ ವಚನಗಳಲ್ಲಿ ಶ್ರೀಘನಲಿಂಗಶಿವಯೋಗಿಗಳರವರು ಆಧ್ಯಾತ್ಮಿಕ ವಿಚಾರಗಳನ್ನು ತಮ್ಮ ವೈಯಕ್ತಿಕ ಬದುಕಿನ ನೆಲೆಯಲ್ಲಿ ವಿವರಿಸುವಂತೆ ಕಂಡರೂ ಅವುಗಳಲ್ಲಿ ಎಲ್ಲ ಸಾಧಕರ ಬೇಗುದಿಯ ಮನದಾಳದ ಮಾತುಗಳು ಅಡಗಿವೆ. ಸಾಧಕನೊಬ್ಬನ ಸಾಧನೆಯ ಹಂತದಲ್ಲಿನ ಆಧ್ಯಾತ್ಮದ ಚಿಂತನೆಯ ಪ್ರತೀಕಗಳು ಅಲ್ಲಿವೆ. ಆಧ್ಯಾತ್ಮದ ಮಾರ್ಗದಲ್ಲಿ ಮುನ್ನಡೆಯುವ ಜೀವದ ಮಿಡಿತಗಳನ್ನಿಲ್ಲಿ ಕಾಣಬಹುದಾಗಿದೆ. ಅದರಲ್ಲಿ ಸಾಧಕನ ಸರ್ವಾರ್ಪಣೆ, ಅಚಲನಿಷ್ಠೆ, ನಡೆನುಡಿಯಲ್ಲಿ ಏಕತೆ, ತ್ಯಾಗ, ಇಂದ್ರಿಯನಿಗ್ರಹ, ದೈವಶ್ರದ್ಧೆ, ಶಿವಯೋಗಸಿದ್ಧಿ, ಮೋಕ್ಷಸ್ಥಿತಿ, ಸನ್ಯಾಸತ್ವದ ಸಮತೆ, ವಿರಕ್ತನ ನಡೆ, ಶಿವನಿಷ್ಠೆ, ಬಸವನಿಷ್ಠೆಗಳ ವಿವರಗಳಿವೆ.

ಹೀಗೆ ಮೊದಲ ಗುಂಪಿನ ವೈಯಕ್ತಿಕ ವಚನಗಳಲ್ಲಿ ವಿಶೇಷವಾಗಿ ಅವರ ಬದುಕಿನ ವಿವರಗಳನ್ನು ಹೇಳುತ್ತಿದ್ದರೂ ಅದರ ಮೂಲಕ ಅನೇಕ ಆಧ್ಯಾತ್ಮಿಕ ಮೌಲ್ಯಗಳ ಪ್ರತಿಪಾದನೆಗಳಾಗಿರುವುದನ್ನು ಕಾಣಬಹುದು. 'ನಡೆನುಡಿ ಎರಡಾಗದಂತೆ ನಡೆಸಯ್ಯ' (೧೨) ಎಂಬ ವಚನದಲ್ಲಿ ಸಾಧಕನ ವ್ಯಕ್ತಿತ್ವದ ಪರಿ ಅಭಿವ್ಯಕ್ತವಾಗಿದೆ.'ಕರಪಾತ್ರೆಯಬಿರುದು' (೧೬) ಎಂಬ ವಚನದಲ್ಲಿ ಆ ಕಾಲದ ಜನರ ನಡವಳಿಕೆಗಳ ಚಿತ್ರಣವಿದೆ. ಜನ ಭಿಕ್ಷೆಯನ್ನು ಕುಳ್ಳಿರಿಸಿಯೇ ಊಟಕ್ಕೆ ಹಾಕಲೀ ಅಥವಾ ಭಿಕ್ಷಾಪಾತ್ರೆಗೇ ಹಾಕಲಿ ಎರಡನ್ನೂ ಏಕನಿಷ್ಠೆಯಿಂದಲೇ ಸ್ವೀಕರಿಸುವುದಾಗಿ ಹೇಳಿದ್ದಾರೆ.ತಮ್ಮ ಈ ಕರಪಾತ್ರೆಯ ಬಿರುದಿಗೆ ತಾನೆಂದೂ ಅಪಚಾರವೆಸಗುವುದಿಲ್ಲ ; ಎಸಗಿದರೆ ತಕ್ಕ ಶಿಕ್ಷೆಯಾಗಿಲಿ ಎನ್ನುತ್ತಾರೆ. ಮುಂದೆ 'ಅನರ್ಪಿತ ಮತ್ತು ಪ್ರಸಾದ'(೧೮) ಎಂಬ ವಚನದಲ್ಲಿ ಹಸಿವಿನ ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ತಮ್ಮ ಕಣ್ಮುಂದೆ ಆಹಾರಪದಾರ್ಥಗಳೆಲ್ಲಾ ಬಿದ್ದಿದ್ದರೂ ತಾನು ಅನರ್ಪಿತದ ಬೋನವನ್ನು ಸ್ವೀಕರಿಸುವುದೇ ಎಲ್ಲ. ಅಂಗಭೋಗ ಅನರ್ಪಿತ; ಲಿಂಗಭೋಗ ಪ್ರಸಾದವಾಗಿರುವುದರ ಕಾರಣ ತಾನು ಅದನ್ನು ಸ್ವೀಕರಿಸುವುದೇ ಇಲ್ಲ ಎಂಬ ಮೌಲ್ಯನಿಷ್ಠ ಜೀವನ ತನ್ನದೆನ್ನುತ್ತಾರೆ. ಅದು ಬಿಟ್ಟು ಸಿಕ್ಕಿಸಿಕ್ಕಿದ್ದನ್ನೆಲ್ಲಾ ಬೇಕಾಗಲೀ ಬೇಡವಾಗಲೀ ತಿನ್ನುತ್ತಾ ಸಂಗ್ರಹಿಸುತ್ತಾ ಹೋಗುವುದು ಸಾಮಾಜಿಕ ಪಾಪ. ಇಂದ್ರಿಯಗಳ ಬಯಕೆಗಳನ್ನು ಮಾನವೀಯ ನೆಲೆಯಲ್ಲಿ ಒಂದು

ನಿಯಂತ್ರಣದಲ್ಲಿಟ್ಟುಕೊಳ್ಳುವುದು ಯೋಗ್ಯವೆಂಬ ಅವರ ಪ್ರತಿಪಾದನೆ ಸಮಾಜಕ್ಕೆ ಮಾರ್ಗದರ್ಶಕವಾಗಿದೆ.ಇದು ವಿಶಾಲಾರ್ಥದಲ್ಲಿ 'ಏಕಕಾಲಕ್ಕೆ ವೈಜ್ಞಾನಿಕ, ಆಧ್ಯಾತ್ಮಿಕ, ದೈನಂದಿನ ತ್ರಿವೇಣಿಸಂಗಮವಾಗಿದೆ' ಎನ್ನುತ್ತಾರೆ ಡಾ.ಎಲ್. ಬಸವರಾಜು ಅವರು[೧].

'ನಿನ್ನೊಡನೆ ಮರೆಯಿಲ್ಲದೆ ಆಡುತಿಪ್ಪೆನಯ್ಯ'(೨೮) ಎಂಬ ವಚನದಲ್ಲಿ ಒಬ್ಬ ವಿರಕ್ತರಾಗಿ ಅವರು ಅದಕ್ಕೆ ಬದ್ಧವಾಗಿರುವ ತಮ್ಮ ಬದುಕನ್ನು ಆತ್ಮವಿಮರ್ಶೆ ಮಾಡಿಕೊಳ್ಳುತ್ತಿರುವುದು ಅಪೂರ್ವ ಸಾಧಕನ ಲಕ್ಷಣವಾಗಿದೆ. ಸಾಧಕನ ಬದುಕಿನಲ್ಲಿ ಉಂಟಾಗುವ ಕರ್ತವ್ಯಚ್ಯುತಿಗಳನ್ನು ಒಪ್ಪಿಕೊಂಡು ಮುಂದೆ ಹಾಗಾಗದಂತೆ ನಡೆಸೆಂದು ದೈವವನ್ನು ಪ್ರಾರ್ಥಿಸುವಲ್ಲಿ ಸಾಧಕನ ಪ್ರಾಮಾಣಿಕತೆ, ದೃಢತೆ, ನಿಷ್ಠೆ, ಛಲ ವ್ಯಕ್ತವಾಗುತ್ತದೆ. ಕೆನೆಸಾಧ್ಯವಾದ ಬಳಿಕ ಹಾಲಿನ ಹಂಗೇತಕಯ್ಯ'(೨೯) ಎಂಬ ವಚನದಲ್ಲಿ ಶಿವಯೋಗಿಗಳಾದ ಸಿದ್ದಲಿಂಗ ಯತಿಗಳೊಡನೇ ಒಡನಾಡುವಾಗ ಬೇರೇ ಸಾಮಾನ್ಯ ದರ್ಶನಾದಿಗಳು ಬೇಕಿಲ್ಲ. ಗುರಿ ತಲುಪಿದ ನಂತರ ಮತ್ತೆ ಸಾಧನಗಳ ಹಂಗಿಲ್ಲವೆನ್ನುತ್ತಾರೆ. ಮುಂದೆ ತಾನು ಸಾಧನೆಯ ಪಥದಲ್ಲಿ ಹೆಣ್ಣುಹೊನ್ನುಮಣ್ಣು ಮೂರನ್ನು ಬಿಟ್ಟು ಆರನ್ನು ಅಂದರೆ ಷಟ್ಸ್ಥಲ ಷಡ್ಲಿಂಗಗಳನ್ನು ಹಿಡಿದೆನೆನ್ನುತ್ತಾರೆ(೩೦). 'ಎನ್ನ ಪ್ರಾಣ ಕಿರುಬಟ್ಟೆಯಲ್ಲಿ ನಡೆಯದು'(೩೫) ಎಂಬ ವಚನದಲ್ಲಿ ಷಟ್ಸ್ಥಲಮಾರ್ಗದಲ್ಲಿ ನಡೆವ ತಮ್ಮ ದಾರಿ ಸಾಮಾನ್ಯರನ್ನು ಅನುಸರಿಸುವುದಿಲ್ಲ. ಮಹಾನ್‌ವ್ಯಕ್ತಿಗಳೇ ತಮ್ಮ ಆದರ್ಶವೆಂದು ಹೇಳುವ ಮೂಲಕ ಸಾಧಕ ಉದಾತ್ತವಾದುದನ್ನೇ ತನ್ನ ಆದರ್ಶವಾಗಿಸಿಕೊಳ್ಳಬೇಕೆಂಬುದನ್ನು ಹೇಳಿದ್ದಾರೆ. 'ಎನಗೆ ನಿಜೈಕ್ಯದ ಬಟ್ಟೆ ನಿರುತವಾಯಿತಯ್ಯ'(೩೮) ಎಂಬ ವಚನದಲ್ಲಿ ಜೀವಿಯೊಂದು ಉಗಮಗೊಳ್ಳುವಾಗ ಯಾರೆಲ್ಲರಿಂದ ಉಪಕೃತನಾಗಿರುವುದೋ ಅವರ ಉಪಕಾರವನ್ನು ಹಿಂದಿರುಗಿಸದಿದ್ದರೆ ಕಷ್ಟಕ್ಕೆ ಸಿಲುಕುವನು. ಭಕ್ತಿಜ್ಞಾನವೈರಾಗ್ಯದಿಂದ ವಿವೇಕೋದಯವಾಗಿ ದೇಹದ ದುರ್ಭಾವಗಳನ್ನು ಪಂಚಭೂತಕ್ಕೆ ಒಪ್ಪಿಸಿ, ಜೀವಾತ್ಮದ ದುರ್ಭಾವಗಳನ್ನು ಪರಬ್ರಹ್ಮಕೊಪ್ಪಿಸಿ, ಉತ್ಪತ್ತಿಸ್ಥಿತಿಲಯಗಳ ಸಾಲವನ್ನು ತ್ರಿಮೂರ್ತಿಗಳಿಗೊಪ್ಪಿಸಿ ಜನ್ಮಾಂತರವನ್ನು ಇಲ್ಲವಾಗಿಸಿಕೊಂಡೆನು.ಆಗ ಆಧ್ಯಾತ್ಮಿಕ ಶಕ್ತಿ ಸಂಪನ್ನನಾಗಿ ಲೌಕಿಕದ ಎಲ್ಲಾ ಬಂಧನಗಳಿಂದ ಬಿಡುಗಡೆಗೊಂಡು ನಿರಾಭಾರಿಯಾಗಿ ಯೌಗಿಕಮಾರ್ಗದಲ್ಲಿ ಮುನ್ನಡೆದು ಜೀವನ್ಮುಕ್ತಿಯನ್ನು ಪಡೆದೆನು ಎಂದು ಹೇಳುವ ಮೂಲಕ ಪ್ರತಿಯೊಬ್ಬ ಸಾಧಕನ ಆತ್ಮೋದ್ಧಾರದ ಮಾರ್ಗವನ್ನು ಸೂಚಿಸುತ್ತಾರೆ.'ಹೊನ್ನುಹೆಣ್ಣುಮಣ್ಣು'(೩೯) ಎಂಬ ವಚನದಲ್ಲಿ ತಾಪತ್ರಯಗಳು, ಕರ್ಮತ್ರಯಗಳು, ನಾಶವಾಗುತ್ತಿದ್ದಂತೆಯೇ ಸೃಷ್ಟಿಸ್ಥಿತಿಲಯದ ಕಾಟವೂ ನಾಶವಾಗಿ ಜೀವನ್ಮುಕ್ತ ಸ್ಥಿತಿಯಲ್ಲಿ ಬಸವಾದಿ ಪ್ರಮಥರ ಕೈವಶನಾದೆನೆಂದು ಹೇಳಿಕೊಳ್ಳುವ ಮೂಲಕ ಸಾಧಕನ ಉದ್ಧಾರದ ಹಾದಿಯನ್ನು ಸೂಚಿಸಿದ್ದಾರೆ.

### ೩.೨.೨ ಸಾರ್ವತ್ರಿಕ ನೆಲೆಯಲ್ಲಿ ಅನುಭಾವ :

ಇನ್ನುಎರಡನೆಯಗುಂಪಿನ೭,೯,೧೫,೧೭,೨೦,೨೨,೨೩,೨೪,೨೫,೨೬,೨೭,೩೩,೩೬,೩೭,೪೦,೪೧,೪೨,೪೩,೪೪,೬೧, ನೆಯ ಒಟ್ಟು ೨೦ ವಚನಗಳು ನೇರವಾಗಿ ಸಾರ್ವತ್ರಿಕ ವಚನಗಳ ಗುಂಪಿಗೆ ಸೇರುತ್ತವೆ. ಇವುಗಳಲ್ಲಿಯೂ ಸಾರ್ವತ್ರಿಕವಾದ ಅನೇಕ ವಿಚಾರಗಳನ್ನು ಕುರಿತು ಮಾತನಾಡುತ್ತಿದ್ದರೂ ಅದರೊಳಗಿನ ಒಂದು ಎಳೆ ಆಧ್ಯಾತ್ಮದ ಶ್ರುತಿಯನ್ನು ಮಿಡಿಯುತ್ತಿರುವಂತಿದೆ.

ಜೀವದ ಆದಿಮಧ್ಯಅಂತ್ಯವನ್ನು ಕುರಿತು ಹುಟ್ಟು, ಭವದ ಬದುಕಿನಲ್ಲಿ ಮುಳುಗಿರುವುದು, ಭವದ ರಾಟಾಳದಲ್ಲಿ ಸಿಲುಕಿ ಅಂತಕನ ಕೈಯಲ್ಲಿ ಅರೆಸಿಕೊಳ್ಳುವುದು ಲೌಕಿಕನೆಲೆಯಾದರೆ, ಅಲೌಕಿಕನೆಲೆಯಲ್ಲಿ ಮಹಾಲಿಂಗದಲ್ಲಿ ಬಂದೆನೆಂಬುದೇ ಆದಿ, ಇಷ್ಟಪ್ರಾಣಲಿಂಗದಲ್ಲಿದ್ದು ಮೋಕ್ಷಗಾಮಿಯಾದುದೇ ಮಧ್ಯ, ಪರಬ್ರಹ್ಮಕ್ಕೆ ಸಮರ್ಪಣ ಮಾಡಿ ಭವಗೆಲ್ಲುವುದೇ ಅವಸಾನ. ಅದು ಬಿಟ್ಟು ಮನವಾಡಿದಂತೆ ಆಡಿದರೆ ಮುಕ್ತಿ ದೊರಕುವುದಿಲ್ಲ(೭). ಬೆಡಗಿನ ಭಾಷೆಯಲ್ಲಿ ಜೀವದ ವಿನಾಶದ ಸಹಜ ಸ್ವರೂಪವನ್ನು ಹೇಳಿ ಆದು ಭಕ್ತಿಯೆಂಬ ಮಾರ್ಗದಲ್ಲಿ ಉದ್ಧಾರವಾಗುವುದೆಂಬುದನ್ನು ಹೀಗೆ ಹೇಳಿದ್ದಾರೆ: ಜಾತಿ,ವರ್ಣ, ಆಶ್ರಮ, ಕುಲ, ಗೋತ್ರ, ನಾಮಗಳಿಂದ ಕೂಡಿದ ಪಂಚಭೂತ, ಪಂಚಪ್ರಾಣ, ಪಂಚೇಂದ್ರಿಯಗಳೆಂಬ ೧೫ ಅಂಶಗಳಿಂದಾದ ದೇಹದ ಮನುಷ್ಯ ಇಷ್ಟ–ಪ್ರಾಣ–ಭಾವಲಿಂಗಗಳ ಮರೆಯಿಂದ ಅಹಂಕಾರ ಪರ್ವತವನ್ನು ಏರಿ, ಪಂಚಭೂತದ ಈ ದೇಹವನ್ನು ಹಾಳುಮಾಡಿ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳನ್ನೆಲ್ಲಾ ಕೆಡಿಸಿ, ಚಿತ್ತ ಮನ ಬುದ್ಧಿ ಅಹಂಕಾರಗಳನ್ನು ಪಂಚಪ್ರಾಣಗಳನ್ನು ನಾಶಮಾಡಿ, ತನ್ನೊಡನೆ ಹುಟ್ಟಿದ್ದ ತೈಜಸ ಪ್ರಾಜ್ಞರನ್ನು ನಾಶಮಾಡಿ ತಾನೂ ನಾಶವಾಗುವುದು. ಆಗ ಜೀವಕ್ಕೆ ಭಕ್ತಿಯೆಂಬ ಬಿಲ್ಲಿನಿಂದ ನಿರಹಂಕಾರವೆಂಬ ತಿರುವನೇರಿಸಿ ಜ್ಞಾನವೆಂಬ ಬಾಣದಿಂದ ಜೀವದ ಚಂಚಲತೆಯನ್ನು ನಾಶಮಾಡಲು ಆಗ ಜೀವನು ಲಿಂಗಕ್ಕೆ ಸಲ್ಲುವನು(೯). ಆತ್ಮನಿಗೆ ಮಲಮಾಯಾ ಕರ್ಮಗಳಿಲ್ಲ; ಏಕವೇ ಮುಕ್ತಿ, ಅನೇಕವೇ ಸಂಸಾರ; ಪಾಶುಪತದ ದ್ವೈತಮಾರ್ಗಕ್ಕೆ ನಿಜಮುಕ್ತಿ ಎಂದಿಗೂ ದೊರೆಯುವುದಿಲ್ಲ(೧೫). ಗುರುಲಿಂಗಜಂಗಮಕ್ಕೆ ತನುಮನಧನವನ್ನು ಅರ್ಪಿಸಿ ಅವರ ಪಾದೋದಕ ಪ್ರಸಾದಗಳೇ ಪಂಚಬ್ರಹ್ಮವಾಗಿ

ಅದರ ಉಪಾಸನೆಯೇ ಭಕ್ತಿಯಾಗಿದೆ. ತ್ರೈಮಲಗಳನ್ನು ಕಳೆದುಕೊಳ್ಳುವುದೇ ಜ್ಞಾನ, ವಿಪರೀತ ಸ್ಥಿತಿಯಲ್ಲೂ ಸ್ಥಿತಪ್ರಜ್ಞನಾಗಿರುವುದು ವೈರಾಗ್ಯ, ಇಂಥ ವಿರಕ್ತನಾಗಿ ಮೊದಲಮನೆಯ ಭಿಕ್ಷಾವೃತ್ತಿಯ ನೇಮದಿಂದಲೇ ನಿತ್ಯ ಆಹಾರ ಸೇವಿಸುವ ಉಗ್ರಷರತ್ತಿನ ಖ್ಯಾತಿಯವರು ಶ್ರೀಘನಲಿಂಗ ಶಿವಯೋಗಿಗಳು(೧೮). ಕರ್ಮಕಾಂಡದಲ್ಲಿ ಮುಳುಗಿ ಜ್ಞಾನದ ಮಾತಾಡುವುದು ವೈರಾಗ್ಯವಲ್ಲ; ನಿಜದ ವೈರಾಗ್ಯವೆಂದರೆ ಷಟ್ಸ್ಥಲಮಾರ್ಗಿಯಾಗಿ, ವ್ರತನಿಷ್ಠನಾಗಿ, ಅಷ್ಟಮದರಹಿತನಾಗಿ ದಶವಾಯು ನಾಶಮಾಡಿ, ನವನಾಳಗಳಲ್ಲಿ ನವಲಿಂಗಗಳನ್ನು ಸ್ಥಾಪಿಸಿ ಪೂಜಿಸಿ ಪರಬ್ರಹ್ಮನಲ್ಲಿ ಒಂದಾಗುವುದೇ ಜೀವನ್ಮುಕ್ತಿ ನಿಜವಿರಕ್ತಿ(೨೦). ನಿಜೈಕ್ಯಪದವಿಗೆ ಸಾಧಕನು ಜ್ಞಾನಪ್ರಧಾನನಾಗಿರಬಹುದು; ಸಿದ್ಧಿಪಡೆದವನಾಗಿರಬಹುದು; ಪರಬ್ರಹ್ಮನೇ ತಾನೆಂಬ ಅಹಂಕಾರಿಯಾಗಿರಬಹುದು; ಆದರೆ ವೀರಶೈವರ ಶಿವನಲ್ಲೇ ಐಕ್ಯವಾಗುವ ಕಲ್ಪನೆ ಅವರೆಲ್ಲರಿಗೂ ಸಿಗುವುದಿಲ್ಲ. ಷಟ್ಸ್ಥಲಮಾರ್ಗಿಯಾಗಿ ಶರಣಲಿಂಗಾಚರಣೆಯ ಮೂಲಕ ಯಾರು ಜ್ಞಾನ–ಕರ್ಮಗಳ ಮೂಲಕ ಭಾವಶುದ್ಧಿ ಹೊಂದುತ್ತಾರೋ ಅವರು ಮಾತ್ರಾ ಮುಕ್ತಿ ಪಡೆಯುವರು.

ಕೊನೆಯಗಳಿಗೆಯ ತನಕ ಕ್ರಿಯೆಯಲ್ಲಿ ತೊಡಗಿರುವಾತನಿಗೇ ನಿಜಮುಕ್ತಿ(೨೨). ಜ್ಞಾನಕ್ಕೆ ತಕ್ಕ ಆಚರಣೆಯಿಲ್ಲದಿದ್ದರೆ, ಬಸವಾದಿಗಳ ವಚನಗಳನ್ನೋದಿಯೂ ಆಚರಣೆಯಲ್ಲಿ ತಾರದಿದ್ದರೆ ಅದು ನಿಷ್ಪ್ರಯೋಜಕವಾಗುವುದು. ವಚನರಚನೆ ಪಾಂಡಿತ್ಯವಲ್ಲ; ಅದು ಅರಿವಿನ ಕುರುಹು; ಮನ ಬಂದಂತೆ ನಡೆಯುವವರಿಗೆ ಧರ್ಮ, ವಚನ ಮುಕ್ತಿ ತೋರಿಸದೆ ಸ್ವಾರ್ಥದ ಲಾಭಕ್ಕಾಗಿ ಬಳಕೆಯಾಗುವುದು.ತಮ್ಮೀ ಮಾತುಗಳು ಜ್ಞಾನಿಗಳಿಗೆ ಹಾಲುಸಕ್ಕರೆ; ವಿಶ್ವಾಸಘಾತುಕರಿಗೆ ಅಲಗಿನ ಮೊನೆ(೨೩). ನಿರಾಕಾರ ಶಿವನನ್ನು ಒಲಿಸಿಕೊಳ್ಳಲು ಇಷ್ಟಲಿಂಗೋಪಾಸಾನೆಯೇ ಮಾರ್ಗ.ಗುರುಶಿಷ್ಯ ಸಂಬಂಧದಿಂದ ದೀಕ್ಷೆ.ಆ ಕುರುಹಿನ ಮೂಲಕ ಅರಿವು.ಸ್ಥೂಲಸೂಕ್ಷ್ಮಕಾರಣ ತನುವಿನಲ್ಲಿ ಇಷ್ಟಪ್ರಾಣಭಾವಲಿಂಗಗಳ ಅರಿವು. ಶರಣಸತಿಲಿಂಗಪತಿ ಭಾವದಿಂದ ಇಷ್ಟಲಿಂಗೋಪಾಸನೆಯ ಮೂಲಕ ಲಿಂಗಾಂಗಸಾಮರಸ್ಯ ಹೊಂದುವರು(೨೪). ಶಿವಶರಣರು ಪವಾಡಗಳನ್ನು ಮಾಡಿದ ಮಹಿಮಾ ಪುರುಷರು. ಅವರ ಬಗ್ಗೆ ಲಘುವಾಗಿ ಮಾತನಾಡಬಾರದು(೨೫). ಮಾಯೆಗೆ ಬಲಿಯಾದವರು ಮಾಯೆಯನ್ನು ಗೆದ್ದ ಮಹಾಪುರುಷರಂತೆ ನಟಿಸಿ ಉಳಿದವರನ್ನು ಶೋಷಣೆ ಮಾಡಬಾರದು(೨೬).

ತಾವೇ ಸರಿಯಾಗಿಲ್ಲದೇ ಇದ್ದರೂ ದೇವೇಂದ್ರನನ್ನೇ ಜರಿಯುವ ಮನುಷ್ಯರ ಮನಸ್ಥಿತಿ ವಿಡಂಬನಾತ್ಮಕವಾಗಿದೆ(೨೮). ಗುರುಲಿಂಗಜಂಗಮರನ್ನು ತಮ್ಮ ಸ್ಥೂಲಸೂಕ್ಷ್ಮಕಾರಣತನುವನ್ನಾಗಿ ಮಾಡಿಕೊಂಡು ಸಮ್ಯಕ್‌ಜ್ಞಾನವೇ ಪ್ರಾಣವಾಗಿ ತೀರ್ಥಪ್ರಸಾದಗಳೇ ಕಣ್ಣುಗಳಾಗಿರುವ ಭಕ್ತರು ಮುಕ್ತಿಸುಖದಲ್ಲಿರುವರು; ಉಳಿದ ಅಜ್ಞಾನಿಗಳು ಬಳಲುವರು(೩೩) ನಿಜವಾದ ಲಿಂಗಾಂಗ ಸಂಧಾನವನ್ನು ನಿಜಶರಣ ಹೇಳಬಲ್ಲನಲ್ಲದೆ ವೇಷಧಾರಿಗಳು ಹೇಳಲಾರರು(೩೬). ಲಿಂಗಸಂಧಾನಿಯಾದವನು ಶಿವಯೋಗದಲ್ಲಿಯೂ ಸಿದ್ಧಿ ಪಡೆದಿರಬೇಕು; ಅಂತರಂಗದ ಸಾಧನೆಯಿಲ್ಲದೆ ಕೇವಲ ಬಾಹ್ಯವೇಷದಲ್ಲಿ ಮಾತ್ರಾ ವಿರಕ್ತನಾಗಿದ್ದರೆ ಅವನೊಡನೆ ಲಿಂಗಸಂಧಾನ ವ್ಯರ್ಥ(೩೮). ಶಿವಯುಕ್ತವಾದ ಅನಾಚಾರವನ್ನು ನಿಷ್ಠೆಯಿಂದ ಮಾಡಿ ಸದಾಚಾರಕ್ಕೊಳಗಾಗಿ ಮುಕ್ತಿ ಪಡೆದರು; ಆದರೆ ಪಂಚಾಚಾರದ ವ್ರತನೇಮಗಳನ್ನು ಹಿಡಿದುಬಿಟ್ಟರೆ ಅದು ಸದಾಚಾರಶರಣಸ್ಥಲವಾಗುವುದಿಲ್ಲ (೪೦).

ನಿಜೈಕ್ಯದ ಸ್ಥಿತಿಯನ್ನು ಪಶುಪ್ರಾಣಿಗಳಂತಹ ಅಜ್ಞಾನಿಗಳು ಅರಿಯರು.ಅವರ ಅರಿವು ಕುರುಡರು ಆನೆಯನ್ನು ಬಣ್ಣಿಸಿದಂತೆ ಇರುತ್ತದೆ.ಅದು ವಾಸ್ತವದಲ್ಲಿ ಪ್ರತ್ಯಕ್ಷವನ್ನು ಪ್ರಮಾಣಿಸಿ, ಅಪರೋಕ್ಷವಾಗಿ ಆಲೋಚಿಸಿ, ಸಹಜಜ್ಞಾನವನ್ನು ಸಂಪಾದಿಸಿ ಅನಾಚಾರ ಸದಾಚಾರಗಳನ್ನು ನಿಶ್ಚೈಸಿಕೊಂಡು ಸದಾಚಾರದಲ್ಲಿ ನಡೆದು ಆದಿಅನಾದಿಯ ಆಚೆಯ ಶೂನ್ಯಲಿಂಗವನ್ನು ಬೇರಾಗದಂತೆ ಬೆರೆಸಿದಾಗ ನಿಜೈಕ್ಯಸ್ಥಿತಿ ತಲುಪುವನು (೪೧). ದ್ವೈತಾದ್ವೈತವನ್ನು ಬಿಟ್ಟ ವೀರಶೈವಶರಣ ಅಂಗಲಿಂಗದ ಹೊಲಬನರಿದು ಸ್ವಯಲಿಂಗಿಯಾದವನನ್ನು ಅಂಗವಿಕಾರಿ ಜರಿದು ಮಾತನಾಡಿದರೆ ಕೊರತೆಯೇನೂ ಇಲ್ಲ(೪೨). ಶರಣರ ಮನೋಮಧ್ಯದಲ್ಲಿ ಶಿವನು ಮೂರ್ತಿಗೊಂಡು ಅವರ ಜಿಹ್ವೆಯ ವಚನಗಳ ಮೂಲಕ ಪರಿಪೂರ್ಣನಾಗಿರುವನು; ಅದು ದ್ವೈತಿ ಅದ್ವೈತಿಗಳಲ್ಲಿ ಇಲ್ಲ (೪೩).ತತ್–ತ್ವಂ–ಅಸಿ ಪದನಾಗಿ ಜ್ಞಾತೃ–ಜ್ಞಾನ–ಜ್ಞೇಯವೆಂಬ ತ್ರಿಪುಟಿಯನು ಒಂದು ಮಾಡಿ ಜಾಗ್ರತ್–ಸ್ವಪ್ನ ಸುಷುಪ್ತಿಯಲ್ಲಿ ಹಸಿವು ತೃಷೆ ವಿಷಯವನ್ನು ಸುಟ್ಟುರುಹಿದವರೇ ನಿಜವಿರಕ್ತರು. ವಿ–ವಿಷಯಗಳನ್ನು, ರ–ರಾಗಗಳನ್ನು, ಕ್ತ–ತ್ರಿಗುಣಗಳನ್ನು ನಾಸ್ತಿಮಾಡಿದಾತನೇ ವಿರಕ್ತ. ಹಗಲಾದರೆ ಹಸಿವುತೃಷೆಗೆ ಹಂಬಲಿಸುವ, ಇರುಳಾದರೆ ವಿಷಯಾತುರಕೆ ಕಳವಳಿಸುವ, ಮನವು ಆಡಿದಂತೆ ಆಡುವವರೆಲ್ಲಾ ನಿಜವಿರಕ್ತರಾಗುವುದಿಲ್ಲ (೪೪). ವಿರಕ್ತಿ ಎಂಬುದು ಕೇವಲ ಕರಣಹಸಿಗೆ, ಮಿಶ್ರಾರ್ಪಣ, ಮಂತ್ರಗೋಪ್ಯ ತತ್ತ್ವಕೃತಿಗಳನ್ನು ಓದುವುದರಲ್ಲಿ ಇಲ್ಲ; ಕಾವಿಯ ಬಟ್ಟೆಯಲ್ಲಿ, ಜಟೆಯಲ್ಲಿ, ತಲೆಬೋಳಿಸುವಲ್ಲಿ, ವಿಭೂತಿಧಾರಣೆಯಲ್ಲಿ, ಅಂಗೈಯ ಲಿಂಗದಲ್ಲಿ ಇಲ್ಲ; ಇವೆಲ್ಲಾ ಲೋಕವಂಚನೆಗಾಗಿ ಬಳಕೆಯಾಗುತ್ತಿವೆ. ಇಂಥ ಛದ್ಮವೇಷಧಾರಿ ಕಾಮಿಗಳೆಲ್ಲಾ ಮೂಳರು ಅವರಿಗೆ ವಿರಕ್ತಿಯಿಲ್ಲ (೬೧) ಎನ್ನುತ್ತಾರೆ.

ಹೀಗೆ ಈ ಮೇಲಿನ ೨೦ ವಚನಗಳಲ್ಲಿ ಶ್ರೀಘನಲಿಂಗಶಿವಯೋಗಿಗಳವರು ಆಧ್ಯಾತ್ಮಿಕ ವಿಚಾರಗಳನ್ನು ಸಾರ್ವತ್ರಿಕ ಬದುಕಿನ ನೆಲೆಯಲ್ಲಿ ವಿವರಿಸಿದ್ದಾರೆ. ಅವು ಸಾಧಕರ ಸಾಧನೆಯ ಬದುಕಿನ ಅನೇಕ ಎಳೆಗಳನ್ನು ಕುರಿತದ್ದಾಗಿದೆ: ಸಾಧಕನು ಮನವಾಡಿದಂತೆ ಆಡಬಾರದು, ದ್ವೈತಿಗಳಿಗೆ ಮುಕ್ತಿದೊರಕದು; ಜೀವದ ವಿನಾಶದ ಮೆಟ್ಟಿಲನ್ನು ಭಕ್ತಿ–ಜ್ಞಾನದಿಂದ ಗೆಲ್ಲಬೇಕು; ಭಕ್ತಿಜ್ಞಾನವೈರಾಗ್ಯಪರರಿಗೇ ನಿಜಮುಕ್ತಿ; ಷಟ್ಸ್ಥಲಮಾರ್ಗದ ಸಾಧನೆಯೇ ಜೀವನ್ಮುಕ್ತಿ, ನಿಜವಿರಕ್ತಿ; ಜ್ಞಾನದೊಡನೆ ಕ್ರಿಯೆಯೂ ಕಡೆತನಕವಿರಬೇಕು; ಜ್ಞಾನಕ್ಕೆ ತಕ್ಕ ಆಚರಣೆ ಇರಬೇಕು; ಶರಣನ ಕಾಯವೇ ಕೈಲಾಸ; ಸಾಧಕರು ಮಿತಿಯರಿತು ವಿನಯವಾಗಿರಬೇಕು; ಸಾಧಕ ಮಾಯೆಯ ಕಾಲು ಬಾಯಿಗೆ ಸಿಲುಕಿ ತೊತ್ತಳದುಳಿಸಿಕೊಳ್ಳಬಾರದು; ಅಜ್ಞಾನಿಗಳಾಗಬಾರದು; ಜ್ಞಾನಮಾರ್ಗದಲ್ಲಿ ನಡೆಯುವವರೇ ಭಕ್ತರು; ಸಾಧಕರಿಗೇ ಲಿಂಗದಬೆಳಗು ತಿಳಿವುದು; ವಿರಕ್ತನ ಬಾಹ್ಯವೇಷಕ್ಕೆ ತಕ್ಕ ನಡವಳಿಕೆಯಿಂದ ಮಾತ್ರಾ ಲಿಂಗಸಂಧಾನ ಸಾಧ್ಯ; ಶರಣ ಸದಾಚಾರಿಯಾಗಿರಬೇಕು; ಸತ್ಯವನ್ನರಿಯದೆ ಮಾತನಾಡಬಾರದು; ಅಜ್ಞಾನಿಗಳ ಟೀಕೆಗಳಿಂದ ಜ್ಞಾನಿಗಳ ಸಿದ್ಧಿ ಮಸುಳಿಸದು; ಸಿದ್ಧಪುರುಷ ಶರಣರಲ್ಲಿ ಶಿವ ಮೈದೋರುವನು; ನಿಜವಿರಕ್ತ ಜ್ಞಾನಿಯಾಗಿರುವನು; ಮಾಯೆಯ ಹಾವಳಿ ಗೆದ್ದಾತ ವಿರಕ್ತ ಎಂಬಿತ್ಯಾದಿಯಾಗಿ ಸಾಧಕನ ಆಧ್ಯಾತ್ಮಯಾತ್ರೆಯ ಅನೇಕ ಎಳೆಗಳನ್ನು ಮನಮುಟ್ಟುವಂತೆ ಸಾದೃಶ್ಯಗಳ ಮೂಲಕ ವಿವರಿಸಿದ್ದಾರೆ.

ಹೀಗೆ ಎರಡನೆಯ ಗುಂಪಿನ ಸಾರ್ವತ್ರಿಕ ವಚನಗಳಲ್ಲಿ ವೈಯಕ್ತಿಕ ವಿಚಾರಗಳ ಎಳೆಯು ಕಡಿಮೆ ಪ್ರಮಾಣದಲ್ಲಿದ್ದು ಆಧ್ಯಾತ್ಮಿಕ ನೆಲೆಯ ಸಾರ್ವತ್ರಿಕ ವಿಚಾರಗಳು ಹೆಚ್ಚಿವೆ. 'ಆದಿಮಧ್ಯಅವಸಾನ' (೬) ಎಂಬ ವಚನದಲ್ಲಿ ಜೀವದ ಹುಟ್ಟು ಬಾಳುವೆ ಸಾವನ್ನು ಸಾಂಪ್ರದಾಯಿಕವಾದ ಸೃಷ್ಟಿಸ್ಥಿತಿಲಯಕ್ಕೆ ಹೋಲಿಸದೆ ಬದಲಿಗೆ ಮಾನವನ ಆದಿಯನ್ನು ಮಹಾಲಿಂಗದಿಂದ ಹುಟ್ಟಿದುದು, ಮಧ್ಯವೆಂದರೆ ಲೌಕಿಕದಲ್ಲಿಯೇ ಬಾಳನ್ನು ಮುಳುಗಿಸಿಕೊಳ್ಳದೆ ಲಿಂಗದೀಕ್ಷೆಯಿಂದ ಪರಾರ್ಥಕ್ಕಾಗಿ ಬದುಕುವುದು, ಅವಸಾನವೆಂದರೆ ನಿರಹಂಕಾರ ಸೇವೆಯಲ್ಲಿ ಸಾಕಾರವೆಲ್ಲಾ ಸವೆದು ನಿರಾಕಾರವಾಗುವುದು ಅಂದರೆ ಹುಟ್ಟು ಸಾವನ್ನು ಗೆದ್ದು ಶಿವನೇ ಆಗುವುದು. ಅದಕ್ಕೆ ವ್ಯತಿರಿಕ್ತವಾಗಿ ಮನವಾಡಿದಂತಾಡಿದರೆ ಭಕ್ತಿಜ್ಞಾನವೈರಾಗ್ಯ ಮುಕ್ತಿ ದೊರಕುವುದಿಲ್ಲ ಎನ್ನುತ್ತಾರೆ.ಮುಂದೆ ಜೀವದ ಆತ್ಮನ ಸ್ವರೂಪವನ್ನು ಭಕ್ತಿಜ್ಞಾನವೈರಾಗ್ಯದ ನಿಜವಿರಕ್ತಿಯ ಸ್ವರೂಪವನ್ನು ವಿವರಿಸುತ್ತಾರೆ. 'ಕ್ರಿಯಾದ್ವೈತಂ ನ ಕರ್ತವ್ಯಂ' (೨೨) ಎಂಬ ವಚನದಲ್ಲಿ ಲಿಂಗಪೂಜಾದಿಗಳ ಕ್ರಿಯೆಗಳಿಲ್ಲದ ಗಂಭೀರಜ್ಞಾನಿಗೆ ಸಾಯುಜ್ಯಾದಿಗಳು ದೊರೆಯಬಹುದೇ ಹೊರತು ನಿಜೈಕ್ಯವು ದೊರೆಯುವುದಿಲ್ಲ. ಏಕೆಂದರೆ ಐಕ್ಯಸ್ಥಿತಿಯನ್ನು ಪಡೆದ ಮೇಲೆಯೂ ಬಸವಣ್ಣನವರು ತಮ್ಮೆಲ್ಲಾ ಪೂಜಾದಿ ಕಾರ್ಯಗಳನ್ನು ಕೊನೆಯತನಕ ಬಿಟ್ಟಿರಲಿಲ್ಲ. ಆದುದರಿಂದ ಶರಣನು ನಿಜೈಕ್ಯಸ್ಥಿತಿಯನ್ನು ಪಡೆದ ಮೇಲೆಯೂ ಕೊನೆತನಕ ಲಿಂಗಪೂಜದಿಗಳನ್ನು ಬಿಡಬಾರದೆನ್ನುತ್ತಾರೆ. 'ಭಕ್ತ–ವಿರಕ್ತ' (೨೩) ಎಂಬ ವಚನದಲ್ಲಿ ಭಕ್ತ ವಿರಕ್ತರಿಬ್ಬರ ಆಚರಣೆಯೂ ಒಂದೇ ರೀತಿಯಾಗಿರುತ್ತದೆ.ಇದನ್ನು ಅತಿಗಳೆದು ಸ್ವಾರ್ಥಕ್ಕೆ ಬಳಸಿಕೊಂಡವರಿಗೆ ಮುಕ್ತಿ ದೊರಕದು ಎನ್ನುತ್ತಾರೆ. ಶರಣನ ಕಾಯವೇ ಕೈಲಾಸವೆನ್ನುತ್ತಾರೆ(೨೪). ಶರಣರು ಮಾಡಿದ ಪವಾಡಗಳನ್ನು ಹೇಳುತ್ತಾರೆ(೨೫). ಮಾಯೆಗೆ ಸಿಕ್ಕಿಹಾಕಿಕೊಂಡವರ ವರ್ತನೆಗಳನ್ನು ಪರಿಪರಿಯಾಗಿ ವಿವರಿಸಿ ನಿಷ್ಠಾವಂತ ಭಕ್ತರ ಮೇಲೆ ದೋಷಾರೋಪಣೆ ಮಾಡಿದವರು ಭವಬಂಧನದಲ್ಲಿ ಸುತ್ತುವರೆನ್ನುತ್ತಾರೆ(೨೬). ಎಲ್ಲಾ ಭಕ್ತರಾಗಲು ಸಾಧ್ಯವಿಲ್ಲ(೩೩). ಅಜ್ಞಾನಿಗಳು ಬಾಯಿಬಡುಕರು (೪೧) ಎಂದು ಆಧ್ಯಾತ್ಮದ ನೆಲೆಯಲ್ಲಿನ ಸಾಮಾಜಿಕ ಸಾಂಸ್ಕೃತಿಕ ವಿಚಾರಗಳನ್ನು ಕುರಿತು ಚಿಂತಿಸಿದ್ದಾರೆ.

### ೩.೨.೩ ವೈಯಕ್ತಿಕಸಾರ್ವತ್ರಿಕ–ಸಾರ್ವತ್ರಿಕವೈಯಕ್ತಿಕ ನೆಲೆಯಲ್ಲಿ ಅನುಭಾವ :

ಇನ್ನು ಮೂರನೆಯ ಗುಂಪಿನ ೧,೨,೪,೫,೬,೮,೧೦,೧೩,೧೪,೧೯,೨೧,೩೨,೬೨ನೆಯ ವಚನಗಳು ಒಟ್ಟು ೧೩ ವಚನಗಳು ವೈಯಕ್ತಿಕ ಸಾರ್ವತ್ರಿಕ ಎರಡೂ ಅಂಶಗಳನ್ನು ಒಳಗೊಂಡ ಗುಂಪಿಗೆ ಸೇರುತ್ತವೆ. ಇವುಗಳಲ್ಲಿ ಸಾರ್ವತ್ರಿಕ ವೈಯಕ್ತಿಕ, ವೈಯಕ್ತಿಕ ಸಾರ್ವತ್ರಿಕ ಅಂಶಗಳು ಇವೆ. ಹಾಗಿದ್ದರೂ ಅವುಗಳೊಳಗಿನ ಸ್ಥಾಯೀಭಾವದ ಒಂದು ಎಳೆ ಆಧ್ಯಾತ್ಮದ ಶ್ರುತಿಯನ್ನೇ ಮಿಡಿಯುತ್ತಿದೆ.

ಆದಿ ಅನಾದಿಯ ಪೂರ್ವದಲ್ಲಿ ನಿಷ್ಕಳ ಪರಬ್ರಹ್ಮನ ಸಾನ್ನಿಧ್ಯ ಸಂಕಲ್ಪದಿಂದಲೇ ಜನ್ಮತಳೆದ ಜೀವ ೮೪ ಲಕ್ಷ ಜೀವರಾಶಿಗಳನ್ನು ದಾಟಿ ಕೊನೆಗೆ ಮಾನವಜನ್ಮವನ್ನು ಪಡೆದಿದೆ.ಅಂತಹ ಅಪೂರ್ವ ಮಾನವಜನ್ಮದ ಪಿಂಡೋತ್ಪತ್ತಿಯಲ್ಲಿಯೇ ತನಗೆ ಶರಣಸತಿಲಿಂಗಪತಿ ಭಾವ ತಲೆದೋರಿ ತಾನು ಶರಣವೆಣ್ಣಾಗಿ ಹುಟ್ಟಿದೆನು.ಆ ಹಿನ್ನೆಲೆಯಲ್ಲಿ ತನ್ನನ್ನು ಕೂಡುವಂತೆ ಬಗೆಬಗೆಯಾಗಿ

ಭಗವಂತನನ್ನು ಪ್ರಾರ್ಥಿಸುವರು.ಅದಾಗದಿದ್ದರೆ ತನ್ನ ಕರ್ಮ–ಕಾಮ–ಕಾಲ–ಭವಗಳು ತನ್ನನ್ನು ಬಂಧಿಸುವುವು.ನೀನು ಕೃಪೆದೋರಿದರೆ ಭವದ ಬಳ್ಳಿ ಅಳಿವುದು.ತನ್ನ ಬಿನ್ನಪವನ್ನು ಲಾಲಿಸು ಎಂಬಲ್ಲಿ ಭಕ್ತನ ಆಧ್ಯಾತ್ಮದ ಆರ್ತಮೊರೆಯಿದೆ (೧). ಮಾನವಜನ್ಮತಳೆದು ಈ ಲೋಕಕ್ಕೆ ಬರುತ್ತಿದ್ದಂತೆಯೇ ಭವವೆಂಬ ಭೂಪತಿ ಜೀವವನ್ನು ಕಾಲ ಕಾಮರ ವಶಕ್ಕೆ ಕೊಟ್ಟನು.ಪರಿಣಾಮವಾಗಿ ಬಂಧನದಲ್ಲಿ ಸಿಲುಕಿ ನರಳುವ ತನ್ನ ಜೀವದ ಸೆರೆಯನ್ನು ಬಿಡಿಸಿಕೊಳ್ಳಿರೆಂದು ಬಗೆಬಗೆಯಾಗಿ ಬಸವಾದಿ ಪ್ರಮಥರನ್ನು ಪ್ರಾರ್ಥಿಸಿದ್ದಾರೆ. ದೈವದ ಕರುಣೆಯಿಂದ ತಾನು ಚಂದ್ರಾಯುಧ ಪಡೆದು ಅದರಿಂದ ಭವಬಂಧನವನ್ನು ಕಳೆದುಕೊಂಡು ಭಗವಂತನ ಸೇವೆಯಲ್ಲಿರುವೆನು ಎಂಬಲ್ಲಿ ಮಾನವಜನ್ಮದ ಭವಬಂಧನಗಳ ಪರಿ, ಎಚ್ಚೆತ್ತ ಜೀವ ಅದರಿಂದ ಬಿಡುಗಡೆಗೊಳ್ಳಲು ಪಡುವ ಪರಿಪರಿಯ ತವಕದ ಚಿತ್ರವಿದೆ (೨) ಭವಭಾಧೆಯಿಂದ ಪಾರಾಗುವ ಹಲವು ಪ್ರಯತ್ನಗಳಲ್ಲಿ ಜೀವವು ವಿಫಲವಾಗಿ ಅನುಭವಿಸಿದ ಕಷ್ಟಪರಂಪರೆಗಳನ್ನು ವಿವರಿಸುತ್ತಾ ಭಗವಂತನ ಕರುಣೆಯು ತನ್ನಲ್ಲಿ ಸುಜ್ಞಾನ ಮೂಡಿಸಿ ಭಗವಂತನೆಡೆಗೆ ತನ್ನನ್ನು ತಿರುಗಿಸಲೆಂಬಲ್ಲಿ ಭಕ್ತನ ಪ್ರಾರ್ಥನೆಯಿದೆ(೪).

ತನ್ನೆಲ್ಲಾ ದೋಷದೌರ್ಬಲ್ಯಗಳ ನಡುವೆಯೂ ತನಗೆ ಒಲಿದು ವಿರಕ್ತಿಯೆಂಬ ಶಿವಲಾಂಛನವನ್ನು ಕೊಟ್ಟುದು ಕೋಪದ ಕಾರಣವಲ್ಲದೆ ಕೃಪೆಯಲ್ಲ. ಏಕೆಂದರೆ ನನ್ನಂತಹ ಸಾಮಾನ್ಯ, ಅಜ್ಞಾನಿ ಭಕ್ತನಿಗೆ ವಿರಕ್ತಿಯ ಲಾಂಛನವನ್ನು ದಯಪಾಲಿಸಿದುದು, ಅದಕ್ಕೆ ತಾನು ದ್ರೋಹ ಬಗೆಯದಂತೆ ನಡೆಸೆಂದು ನಿಂದಾಸ್ತುತಿಯ ಮೂಲಕ ಪ್ರಾರ್ಥಿಸುವಲ್ಲಿ ಭಕ್ತನ ಆತ್ಮಾವಲೋಕನವಿದೆ (೫). ಸಾಧಕಜೀವಿಯ ಕಟ್ಟಕಡೆಯ ಬಯಕೆಯೆಂದರೆ ಇನ್ನು ಮುಂದೆ ಹುಟ್ಟದಂತೆ ಮಾಡೆಂಬುದೇ ಆಗಿದೆ. ಸಾಧಕನು ಇಲ್ಲಿ ತನಗೆ ಆಸೆ ಆಮಿಷಗಳ ಮಾನವಜನ್ಮವೇ ಬೇಡಾ ಎಂದಿದ್ದಾರೆ; ಬದಲಿಗೆ ಸಾಮಾನ್ಯ ಶಿವಭಕ್ತರ ಮನೆಯ ಬಾಗಿಲುಕಾಯುವ ಶುನಕನ ಮಾಡಿ ನಿಲಿಸಯ್ಯ ಎಂಬಲ್ಲಿ ಮನುಷ್ಯಜನ್ಮದ ತಾಪತ್ರಯಗಳಿಗಿಂತ ಶಿವಭಕ್ತರ ಮನೆಯ ಬಾಗಿಲಕಾಯುವ ಶುನಕನೇ ಲೇಸೆಂಬ ಅಭಿಪ್ರಾಯವಿದೆ(೬). ತ್ರಿಲೋಕಗಳಲ್ಲಿಯೂ ಭೋಗರಾಜ್ಯದ ಅರಸನಾಗಿ ಜೀವ ತನ್ನ ಅಂತಃಕರಣ ಚತುಷ್ಟಯಗಳಿಂದ ಭ್ರಷ್ಟನಾಗಿ ತನ್ನ ನಿರ್ಗತಿಕ ದುರ್ಗತಿಯಿಂದ ಭವರಾಟಾಳದಲ್ಲಿ ಸಿಲುಕಿ ಕೆಡುತ್ತಾನೆ. ಬಳಿಕ ಯೋಗಸಾಮ್ರಾಜ್ಯದ ಚಕ್ರವರ್ತಿಯ ಕೃಪಾಕಟಾಕ್ಷದಿಂದ ದೈವದೊಲುಮೆಯ ಭಕ್ತಿಯಿಂದ ಜ್ಞಾನಸ್ವರೂಪಿಯಾಗಿ ತನ್ನ ಮಾಯಾಪಾಶಗಳನ್ನು ಕಳೆದುಕೊಂಡು ಮುಕ್ತಿರಾಜ್ಯವನ್ನು ಕಟ್ಟಿ ಕಾಪಾಡು ಎಂಬ ಮೊರೆಯಿದೆ(೮). ಭಕ್ತನೊಬ್ಬ ಮರ್ತ್ಯಲೋಕದ ಹಂಗುತೊರೆದು ಭಗವಂತನನ್ನೇ ನಂಬಿ ನೆಚ್ಚಿದ್ದಾನೆಂಬುದಕ್ಕೆ ಏಕಾಂತದಲ್ಲಿ ಭಕ್ತನೆದುರಿಗೆ ಮುತ್ತುರತ್ನಗಳ ಕೊಡ ಬಂದರೂ ಅದನ್ನೂ ಕಡೆಗಣಿಸಿದಾಗಲೇ ಆತ ಶರಣನಾಗುವನು; ಬದಲಿಗೆ ಆಸೆ ಮಾಡಿದರೆ ಹಂದಿ ನಾಯಾಗುವನು; ಆಳಿನ ಅಪಮಾನ ಆಳ್ದಂಗೆ ತಪ್ಪದು(೧೦).

ಶರಣರು ತಮ್ಮ ಶಿವತತ್ವದ ಸಮ್ಯಕ್‌ಜ್ಞಾನದ ಬಲದಿಂದ ಕಾಲಕಾಮರನ್ನು ಗೆದ್ದರು (೧೩).ನಿತ್ಯ ಪರಮಾತ್ಮ, ಅನಿತ್ಯ ದೇಹದೊಡಗೂಡಿ ಜೀವನಾಗಿ ತನಗೆ ತಾನೇ ಬಂಧಿಸಿಕೊಂಡಿದೆ. ಅದನ್ನು ಬಿಚ್ಚಿ ಬೇರೆಮಾಡಲು ಕರಣೇಂದ್ರಿಯ ಸೂತ್ರಗಳನ್ನೆಲ್ಲಾ ಹರಿಯಲು ತನ್ನಿಂದ ತಾನೇ ಪ್ರಕೃತಿ ಪರಬ್ರಹ್ಮನಲ್ಲಿ ಸೇರಿ ಒಂದಾಗುತ್ತದೆ (೧೪). ನಿಜವಿರಕ್ತನೆಂದರೆ ಕೇವಲ ಹೆಣ್ಣುಹೊನ್ನುಮಣ್ಣು ಬಿಟ್ಟಾತ ಮಾತ್ರನಲ್ಲ; ಕೇವಲ ವಿರಕ್ತನ ವೇಷವ ಧರಿಸಿದಾತ ಮಾತ್ರವಲ್ಲ; ಕೇವಲ ವಿರಕ್ತನ ಆಚರಣೆಯಲ್ಲಿದ್ದಾತ ಮಾತ್ರನಲ್ಲ; ಹೀಗೆ ಕೇವಲ ವೇಷ, ಆಚರಣೆಗಳಿಂದ ಮುಕ್ತಿ ದೊರಕದು; ಬರಿಯ ವೈರಾಗ್ಯ, ಭವಕ್ಕೆ ಬೀಜ.ನಿಜವಿರಕ್ತನೆಂದರೆ ಅಂಗಭೋಗ ನೂಕಿ ಲಿಂಗಭೋಗ ಅನುಭವಿಸುತ್ತಾ, ಮಂತ್ರ, ಏಕಾಂತವಾಸ, ನವಹಸ್ತಗಳಿಂದ ಷಟ್ಸ್ಥಲಸಾಧನೆ ಸಿದ್ಧಿ ಪಡೆದಾತ. ಇಂಥ ವಿರಕ್ತಿಯನ್ನು ತನಗೆ ಕರುಣಿಸು(೧೯). ಪರಮವಿರಕ್ತರು ಕಟ್ಟುನಿಟ್ಟಿನ ಜೀವನವನ್ನು ನಡೆಸಬೇಕು; ಹೊತ್ತಿಗೊಂದು ದಿನಕ್ಕೊಂದು ಪರಿಯಾಗಿರದೆ ಆತ್ಮಪ್ರಕಾಶದಿಂದ ಹೊಳೆಯುವ ರತ್ನದಂತೆ ಇದ್ದು ತನ್ನ ಕ್ರಿಯೆಯ ಬೀಜದ ಮೂಲಕ ಸಮ್ಯಕ್‌ಜ್ಞಾನ ವೃಕ್ಷದಿಂದ ಭಕ್ತಿಯ ಹೂ ಪಡೆದು ಲಿಂಗನಿಷ್ಠೆಯ ಕಾಯಿಯ ಮೂಲಕ ಮುಕ್ತಿಯೆಂಬ ಹಣ್ಣನ್ನು ಪಡೆಯಬೇಕು. ಆ ಹಣ್ಣನ್ನು ಸವಿದು ಬಸವಾದಿ ಪ್ರಮಥರ ಮಾರ್ಗದಲ್ಲಿ ನಡೆಯುವ ಶಕ್ತಿಯನ್ನು ತಾನು ಪಡೆದೆನು ಎಂದು ಹೇಳಿಕೊಳ್ಳುವ ಮೂಲಕ ವಿರಕ್ತರ ನಡೆಯ ಪರಿಯನ್ನು ಇಲ್ಲಿ ಹೇಳಿದ್ದಾರೆ(೨೧).

ಸ್ಥೂಲದೇಹದ ಇಷ್ಟಲಿಂಗದ ಉಪಾಸನೆಯ ಬಲದಿಂದ ಸಾಧಕನಾದವನು ಷಟ್ಸ್ಥಲದ ಮಾರ್ಗದಲ್ಲಿ ಮುನ್ನಡೆದು ಭಕ್ತ, ಮಾಹೇಶ್ವರ ಸ್ಥಲದಲ್ಲಿ ಆಚಾರಲಿಂಗ, ಗುರುಲಿಂಗಗಳನ್ನು ಪೂಜಿಸುತ್ತಾ ಹೆಣ್ಣುಹೊನ್ನುಮಣ್ಣುಗಳ ಮೋಹವನ್ನು ತ್ಯಜಿಸಿ ತ್ಯಾಗಾಂಗಿಯಾಗುವನು.ಮುಂದುವರಿದು ಪ್ರಸಾದಿ, ಪ್ರಾಣಲಿಂಗಿಸ್ಥಲದಲ್ಲಿ ಶಿವಲಿಂಗ, ಜಂಗಮಲಿಂಗಗಳ ಉಪಾಸನೆಯ ಮೂಲಕ ಸೂಕ್ಷ್ಮದೇಹದ ಪ್ರಾಣಲಿಂಗವನ್ನು ಪೂಜಿಸಿ ಸರ್ವವನ್ನೂ ಲಿಂಗಾರ್ಪಣ ಮಾಡಿ ಭೋಗಿಸುವ ಮೂಲಕ ಸಾಧಕ

ಭೋಗಾಂಗಿಯಾಗುವನು.ಮುಂದೆ ಕಾರಣದೇಹದ ಭಾವಲಿಂಗ ಪೂಜಾಬಲದಿಂದ ಶರಣ, ಐಕ್ಯಸ್ಥಲಗಳಲ್ಲಿ ಮನಸ್ಸನ್ನು ಪ್ರಸಾದಲಿಂಗ, ಮಹಾಲಿಂಗಗಳಲ್ಲಿ ಐಕ್ಯಗೊಳಿಸಿ ಯೋಗಮಾರ್ಗದ ಮೂಲಕ ಷಟ್‌ಚಕ್ರ ಮಾರ್ಗದಲ್ಲಿ ನಡೆದು ಇಡೀ ದೇಹವೇ ದೈವಾಂಶವಾಗಿ ಸರ್ವಾಂಗಲಿಂಗಿಯಾಗಿ ಯೋಗಾಂಗಿಯಾಗುವನು. ಹೀಗೆ ದೇಹತ್ರಯಗಳು ಲಿಂಗತ್ರಯಗಳ ಮೂಲಕ ಲೌಕಿಕ ಮೋಹಗಳ ತ್ಯಾಗಿಯಾಗಿ, ಸರ್ವವನ್ನೂ ಲಿಂಗಾರ್ಪಿತ ಭೋಗವನ್ನಾಗಿಸಿಕೊಂಡು ಸಾಧಕ ಯೋಗಮಾರ್ಗದ ಮೂಲಕ ಸರ್ವಾಂಗಲಿಂಗಿಸಿದ್ಧಿಯನ್ನು ತಾನು ಪಡೆದುದಾಗಿ ಹೇಳುವ ಮೂಲಕ ಸಾಧಕನ ಸಿದ್ಧಿಯ ಪರಿಯನ್ನು ಇಲ್ಲಿ ವಿವರಿಸಿದ್ದಾರೆ(೩೨). ಮನುಷ್ಯ ಸಾಧಕನಾಗಿ ಪರಿವರ್ತನೆಯಾಗುವುದು ತುಂಬಾ ಕಷ್ಟಸಾಧ್ಯ, ಬಹಳ ಬೇಗ ಮನುಷ್ಯನು ಲೌಕಿಕ ಭೋಗಭಾಗ್ಯಕ್ಕೆ ಬಲಿಯಾಗುತ್ತಾನೆ. ಅದರಿಂದ ಪಾರಾಗಿ ವಿರಕ್ತನಾಗಿ ನಿರ್ವಾಣ ಪದವಿ ಪಡೆಯುವುದು ಕಷ್ಟಸಾಧ್ಯ.ಅಂತಹ ಕಷ್ಟಸಾಧ್ಯದ ಮಾರ್ಗದಲ್ಲಿ ತಾನು ನಡೆದು, ಕಾಮವನ್ನು ಖಂಡಿಸಿ ಗೆದ್ದು ಭಕ್ತನಾದ ತಾನು ಭಗವಂತನಿಗೆ ಸತಿಯಾಗಿ ಮಧುರಭಕ್ತಿಯನ್ನು ಆಚರಿಸುತ್ತಿರುವೆನೆಂದಿದ್ದಾರೆ. ಆ ಮೂಲಕ ಭಕ್ತನ ದಾರಿ ಕಠಿಣ; ಆದರೂ ಅದು ಕಷ್ಟಸಾಧ್ಯವಾದ ಮಾರ್ಗವೆಂದಿದ್ದಾರೆ(೬೨).

ಹೀಗೆ ಈ ಮೇಲಿನ ೧೩ ವಚನಗಳಲ್ಲಿ ಶ್ರೀಘನಲಿಂಗಶಿವಯೋಗಿಗಳವರು ಆಧ್ಯಾತ್ಮಿಕ ವಿಚಾರಗಳನ್ನು ವೈಯಕ್ತಿಕ ಹಾಗೂ ಸಾರ್ವತ್ರಿಕ ಎರಡೂ ನೆಲೆಯಲ್ಲಿ ವಿವೇಚಿಸಿದ್ದಾರೆ. ಅವೂ ಸಾಧಕರ ಬದುಕಿನ ವಿವಿಧ ಮಜಲುಗಳನ್ನು ತಿಳಿಸುತ್ತಿವೆ. ಮಾನವಜನ್ಮವನ್ನು ಪಡೆದ ಸಾಧಕ ಅದರ ಬಂಧನದಿಂದ ಬಿಡಿಸಿಕೊಳ್ಳಲು ಸ್ವಪ್ರಯತ್ನದ ಜೊತೆಗೆ ದೈವಬಲವೂ ಬೇಕೆನ್ನುತ್ತಾರೆ; ಬಂಧನಕ್ಕೊಳಗಾದ ಜೀವದ ತವಕ ಅನಂತಪರಿಯಾದುದು; ಅದರಿಂದ ಮುಕ್ತಿಗೆ ಭಗವಂತನೊಲುಮೆ ಬೇಕು; ಭಗವಂತನ ಒಲುಮೆಗೆ ವಿರಕ್ತಿಯ ಮಾರ್ಗ ಕಷ್ಟಕರವಾದುದು; ಮಾನವಜನ್ಮವೂ ಕಷ್ಟಕರವಾದುದು; ಭಕ್ತರ ಮನೆಯ ಶುನಕನೇ ಲೇಸು, ಭವರಾಟಾಳದಲ್ಲಿ ಸಿಲುಕಿ ಕೆಡುವ ಭೋಗಿ ಮನುಷ್ಯನಿಗೆ ಭಕ್ತಿಯೋಗದಿಂದ ಮುಕ್ತಿನೀಡು; ಭಕ್ತನ ಲೌಕಿಕ ಮೋಹದ ತ್ಯಾಗ ಏಕಾಂತದಲ್ಲೂ ಸಾಬೀತಾದಾಗ ಆತ ನಿಜಶರಣನೆನಿಸುವನು; ಅನಿತ್ಯದಲ್ಲಿ ಬಂಧನ; ಆ ಬಂಧನ ಮುಕ್ತಿಯೇ ಪರಮಾತ್ಮ; ನಿಜವಿರಕ್ತಿ ಬಹಿರಂಗದ ತೋರಿಕೆಯಾಗದೆ ಅಂತರಂಗದ ಸಾಧನೆಯಾಗಬೇಕು; ಪರಮವಿರಕ್ತಿ ಆಡಂಬರವಾಗದೆ ಜ್ಞಾನಕ್ರಿಯೆಯಲ್ಲಿ ಪ್ರಕಾಶವಾಗಬೇಕು; ತನುತ್ರಯಗಳಲ್ಲಿ ತ್ರಿಲಿಂಗಗಳ ಮೂಲಕ ಅಂಗತ್ರಯಗಳನ್ನು ಷಟ್ಸ್ಥಲಗಳಿಂದ ಸಾಧಿಸಿ ಸರ್ವಾಂಗಲಿಂಗಿಯಾಗಬೇಕು; ಸಾಧಕನು ಮನುಷ್ಯ ಬಂಧನಗಳಿಂದ ಬಿಡುಗಡೆ ಹೊಂದಿ ಭಕ್ತಿಯಿಂದ ವಿರಕ್ತಮಾರ್ಗದಲ್ಲಿ ಸಿದ್ಧಿ ಪಡೆಯುವುದು ಕಠಿಣ ಎಂಬುದಾಗಿ ವೈಯಕ್ತಿಕ ನೆಲೆಯಲ್ಲಿಯೇ ನಾನಾಪರಿಯಲ್ಲಿ ಸಾಧಕನ ಸಿದ್ಧಿಯ ಮಾರ್ಗದ ತಳಮಳಗಳನ್ನು ಈ ಭಾಗದಲ್ಲಿ ಅನೇಕ ಸಾದೃಶ್ಯಗಳ ಮೂಲಕ ವಿವರಿಸಿದ್ದಾರೆ.

ಈ ರೀತಿಯಾಗಿ ಮೂರನೆಯ ಗುಂಪಿನ ವೈಯಕ್ತಿಕ ಸಾರ್ವತ್ರಿಕ ವಚನಗಳಲ್ಲಿಯೂ ಆಧ್ಯಾತ್ಮದ ನೆಲೆಗಳನ್ನು ಗುರುತಿಸಬಹುದಾಗಿದೆ.'ಕಾಲಕಾಮರ ಗೆಲುವ ಉಪಾಯ' (೧೩) ಎಂಬ ವಚನದಲ್ಲಿ ಚಿಂತಾಕ್ರಾಂತನಾದ ಮತಿಗೆಟ್ಟ ಮರುಳು ಮಾನವ ಮುಂದನ್ನರಿಯದೆ ಇದ್ದಾಗ ಮೊಲ ಜಂಬುಕಗಳ ಹೊಯ್ಲಿಗೆ ಆನೆಯ ಪೌಜನ್ನು ಅಡ್ಡಮಾಡಬೇಕಿಲ್ಲ. ಪಂಚೇಂದ್ರಿಯಗಳು ಪರಬ್ರಹ್ಮನನ್ನು ಅಪ್ಪಿ ಅಗಲದಿದ್ದರೆ ಕಾಮನನ್ನು ಗೆಲ್ಲಬಹುದು.ತಾನು ಪರಬ್ರಹ್ಮದಿಂದ ಜನಿಸಿದ್ದು ಆತನಿಗೇ ತನ್ನ ತನುಮನಧನಗಳನ್ನೆಲ್ಲಾ ಕೊಟ್ಟಿದ್ದೇನೆಂಬ ದೃಢನಿಷ್ಠೆಯೇ ಕಾಲನನ್ನು ಗೆಲ್ಲುತ್ತದೆ ಎನ್ನುತ್ತಾರೆ. 'ಭೋಗವೆಂಬ ಸೂಜಿ' (೧೪) ಎಂಬ ವಚನದಲ್ಲಿ ನಿತ್ಯ ಅನಿತ್ಯದ ನಡುವೆ ಭೇದವನ್ನು ಯಾರೂ ಮಾಡಿಲ್ಲ. ಆತ್ಮನು ಭೋಗವೆಂಬ ಸೂಜಿಯನ್ನು ಹಿಡಿದುಕೊಂಡು ಅಂತಃಕರಣ ಚತುಷ್ಟಯ, ಪಂಚೇಂದ್ರಿಯಗಳಿಗೆ ತನುಮನಗಳನ್ನು ಹತ್ತಿರ ತರಲು ಅವು ಒಂಬತ್ತು ತನಗೆ ತಾನೇ ಹೊಲಿದು ಸೇರಿಕೊಂಡಿತು ; ಅವುಗಳನ್ನು ಬೇರೆಮಾಡಲು ಸೂಜಿಯನ್ನು ಮುರಿದು ನಾಲ್ಕುಕರಣ ಐದಿಂದ್ರಿಯಗಳ ಒಂಬತ್ತು ದಾರವನ್ನು ತುಂಡು ತುಂಡಾಗಿ ಹರಿದಾಗ ತನುಪ್ರಕೃತಿಯನ್ನು, ಪ್ರಾಣ ಪರಬ್ರಹ್ಮನನ್ನು ಕೂಡುತ್ತದೆ ಎನ್ನುತ್ತಾರೆ.

'ಮುಕ್ತಿಪಥಕ್ಕೆ ಕ್ರಿಯೆ ಸಾಧನ' (೨೧) ಎಂಬ ವಚನದಲ್ಲಿ ನಿರ್ವಾಣವನ್ನು ಪಡೆಯುವುದಕ್ಕಾಗಿ ಪ್ರಾಪಂಚಿಕ ಪ್ರತಿಷ್ಠೆಗಳನ್ನೆಲ್ಲಾ ಬಿಟ್ಟು ಏಕಲಿಂಗನಿಷ್ಠಾಪರನಾಗಿ ಪರಮವಿರಕ್ತನಾಗಿ ತ್ರಿಸಂಧ್ಯಾಕಾಲದಲ್ಲೂ ಲಿಂಗಪೂಜೆ ಮಾಡುತ್ತಾ ಸಕಲಪದಾರ್ಥಗಳನ್ನು ಇಷ್ಟಲಿಂಗಕ್ಕೆ ಅರ್ಪಿಸಿ ಪಡೆಯುವ, ಅಚ್ಚಲಿಂಗೈಕ್ಯರ ಮನೆಯಲ್ಲಿಯೇ ಭಿಕ್ಷೆ ಪಡೆಯುತ್ತ, ತೀರ್ಥ ಪ್ರಸಾದದಲ್ಲಿ ಎಚ್ಚರಿಕೆಯಿಂದಿರುತ್ತ, ಭವಿಭಕ್ತಿಯನ್ನು ಸ್ವೀಕರಿಸದೆ, ಬಿದ್ದಫಲಗಳನ್ನು ಮುಟ್ಟದೆ, ರಾತ್ರಿಯ ಕಾಲಕ್ಕೆ ಭಿಕ್ಷವೇ ಬಿಡಾರವಾಗಿ ಭಕ್ತರು ಬಿನ್ನಹ ಮಾಡಿದರೆ ಕೈಕೊಳ್ಳುವುದು, ಇಲ್ಲದಿದ್ದರೆ ಬಿಡುವುದು, ಭಕ್ತರು ವಿಭೂತಿಗೆ ಹೇಳಿದರೆ ಒಪ್ಪಿದರೆ ಹೋಗುವುದು, ಇಲ್ಲದಿದ್ದರೆ ಬಿಡುವುದು, ಒಪ್ಪಿದ ಮೇಲೆ ಕಟ್ಟಿಗೆ ತಕ್ಕಂತೆ ನಡೆಯುವುದನ್ನು ಕೊನೆತನಕ ನಡೆಸುವಾತನೇ ನಿರಂಗಶರಣ. ಅದು ಬಿಟ್ಟು ಪುರಾತನರ ಮಕ್ಕಳಾಗಿ ಮನಬಂದ ಪರಿಯಲ್ಲಿ

ಕ್ಷಣಕ್ಕೊಂದು ರೀತಿಯಲ್ಲಿ ಬದಲಾಗಿ ನಡೆಯಲಾಗುವುದಿಲ್ಲ. ಅಂತಹ ವಿರಕ್ತ ಅನವರತವೂ ಹೊಳೆಯುವ ರತ್ನಪ್ರಕಾಶದಂತೆ.ಶಿವಜ್ಞಾನವೇ ಇಲ್ಲದ ಕ್ರಿಯಾಚರಣೆ ವ್ಯರ್ಥ.ಸತ್ಕ್ರಿಯಾಚರಣೆಯು ಬಸವಾದಿ ಪ್ರಮಥರ ಶಿಷ್ಯತ್ವಕ್ಕೆ ಯೋಗ್ಯತೆ ತಂದು ಮುಕ್ತಿಪಥಕ್ಕೆ ಸಾಧನವಾಯಿತು ಎನ್ನುತ್ತಾರೆ.

### ೩.೨.೪ ಆಧ್ಯಾತ್ಮಿಕ ನೆಲೆಯಲ್ಲಿ ಅನುಭಾವ :

ಇನ್ನು ನಾಲ್ಕನೆಯ ಕೊನೆಯ ಗುಂಪಿನ ೪೫ ರಿಂದ ೬೦ ರವರೆಗಿನ ಹಾಗೂ ೬೩ರಿಂದ ೬೬ರವರೆಗಿನ ವಚನಗಳು ಒಟ್ಟು ೨೦ ವಚನಗಳು ಸಂಪೂರ್ಣವಾಗಿ ಆಧ್ಯಾತ್ಮಿಕ ನೆಲೆಯನ್ನೇ ಕುರಿತದ್ದಾಗಿವೆ.

ಲೌಕಿಕಬಂಧನವನ್ನು ನೀಗಿ ಜ್ಞಾನಕ್ರೀಗಳಿಂದ ಅಂಗಲಿಂಗ ಸಂಬಂಧಿಗಳಾದ ಶಿವಲಿಂಗಮೋಹಿಗಳು ಶರಣರ ಮುಕ್ತಿಯ ಮಾರ್ಗವನ್ನು ಅರಿಯಬೇಕು.ಆ ದಾರಿಯಲ್ಲಿ ನಮಗೆ ಸಿಗುವ ಪಂಚವರ್ಣದ ಮಹಾಪಟ್ಟಣವೇ ಪಂಚಭೂತದ ಈ ದೇಹ.ಈ ದೇಹವಿಲ್ಲದೆ ಮುಕ್ತಿ ಅಸಾಧ್ಯ.ಈ ದೇಹದಲ್ಲಿ ಅಹಂಕಾರ, ಮಮಕಾರಗಳೆಂಬ ಎರಡು ಸುಪರಿಚಿತ ಮಾರ್ಗಗಳಿವೆ. ಅದರಾಚೆಗಿರುವುದೇ ಅಪರಿಚಿತ ಭಕ್ತಿಪುರ.ಆ ಅಪರಿಚಿತ ದಾರಿ ತಲುಪಿದಲ್ಲದೆ ಮುಕ್ತಿಯ ದಾರಿ ಸಿಗದು.ಆದರೆ ಈ ದಾರಿಯಲ್ಲಿ ಹೋಗಬೇಕೆಂಬುದನ್ನು ಪ್ರಥಮದಲ್ಲಿ ಕಂಡುಕೊಳ್ಳುವುದೇ ಸಾಧಕನ ಮೊದಲ ರಹಸ್ಯ. ಅತ್ಯಂತ ಸಾಹಸದಿಂದ ಸಾಧಕನು ಆ ಭಕ್ತಿಪುರ ತಲುಪಿದ ಮೇಲೆ ದೇಹದ ಸಕಲಬಾಧೆಗಳೆಂಬ ಮಹಾರಣ್ಯವನ್ನು ಭೇದಿಸಿ ಅದರೊಳಗೆ ಇರುವ ನಿರ್ಮಲ ಮಾನಸಸರೋವರವನ್ನು ತಲುಪಿದ ಮೇಲೆ ಆತನ ಯೋಗಸಾಧನೆ ಆರಂಭವಾಗುತ್ತದೆ. ಅಂದರೆ ಜೀವಾತ್ಮನು ಮನಃಪೂರ್ವಕವಾಗಿ ತನ್ನ ಸಾಧನೆಯನ್ನು ಪ್ರಾರಂಭಿಸಬೇಕೆಂಬ ಭಾವವಿದೆ. ಹೃದಯದ ಅನಾಹತಚಕ್ರದಿಂದ ಪ್ರಾರಂಭವಾಗಿ ಮುಂದೆ ಕಂಠಸ್ಥಾನದ ವಿಶುದ್ಧಿಚಕ್ರದಲ್ಲಿ ತಂಗಿ, ಮುಂದೆ ಹುಬ್ಬುಗಳ ನಡುವಿನ ಆಜ್ಞಾಚಕ್ರಕ್ಕೆ ಬಂದು, ಅಲ್ಲಿನ ಸುಷುಮ್ನಾ ನಾಡಿಯ ಮೂಲಕ ನೆತ್ತಿಯ ಸಹಸ್ರಾರಚಕ್ರ ತಲುಪುವನು. ಮುಕ್ತಿಪುರವೆಂಬ ಒಂಭತ್ತನೆಯ ಪಶ್ಚಿಮಚಕ್ರಕ್ಕೆ ಪ್ರವೇಶಿಸಿದಾಗ ಮಹಾಲಿಂಗ ದರ್ಶನವಾಗಿ ಐಕ್ಯಸ್ಥಿತಿ ಪಡೆಯುವನು. ಆಧ್ಯಾತ್ಮದ ಈ ಯೌಗಿಕ ಪರಿಭಾಷೆಯ ಮೂಲಕ ಪಂಚಭೂತಾತ್ಮಕವಾದ ಈ ದೇಹ ಪಂಚಬ್ರಹ್ಮಸ್ವರೂಪವಾಗಿ ವಿರಕ್ತಮಾರ್ಗದಲ್ಲಿ ಹುಟ್ಟುಸಾವು ದಾಟಿ ತಾವು ಅಮೃತತ್ವ ಪಡೆದುದನ್ನು ವಿಸ್ತಾರವಾಗಿ ತಿಳಿಸುತ್ತಾರೆ(೪೫).

ಆಕಾಶ, ವಾಯು, ತೇಜ, ಅಪ್ಪು, ಪೃಥ್ವಿ ಎಂಬ ಪಂಚಭೂತಗಳ ಉತ್ಪತ್ತಿಗೆ ಕಾರಣವಾಗುವ ಶಬ್ಧಸ್ಪರ್ಶರೂಪರಸಗಂಧ ಎಂಬ ಪಂಚತನ್ಮಾತ್ರೆಗಳು ಪ್ರತ್ಯಕ್ಷವಾಗುವುದಕ್ಕೆ ಮುಂಚೆಯೇ ನಿರ್ಮಲಾಕಾಶವು ಸಾಕಾರವಾಗಿ ನಿರಂಜನ ಪ್ರಣವವೆಂಬ ಬೀಜವಾಯಿತು.ಅದು ಬೀಜವಾಗಿ ಹೂಂಕಾರಮಂಟಪದಲ್ಲಿ ನಟ್ಟುಕೊಂಡಿತು.ಅದು ತನ್ನ ನಿರಂಜನ ಶಕ್ತಿಯ ನೆನಹಿನಿಂದ ಹ್ರಾಂಕಾರಚಕ್ರ ಕುಹರದಲ್ಲಿ ಶುದ್ಧಪ್ರಸಾದವಾಗಿ ಮೊಳಕೆಯಾಯಿತು.ಅದು ತನ್ನ ಶೂನ್ಯಶಕ್ತಿಯ ಸೆಜ್ಜೆಯಿಂದ ಹನ್ನೊಂದುನೂರು ದಳದ ಪ್ರಣವದಲ್ಲಿ ಹ್ರೀಂಕಾರ ಸಿಂಹಾಸನದಲ್ಲಿ ಸಿದ್ಧಪ್ರಸಾದವೆಂಬ ತಳಿರಾಯಿತು.ಅದು ಕಾಂತಶಕ್ತಿಯಿಂದ ಆಜ್ಞಾಚಕ್ರದ ಮಧ್ಯದಲ್ಲಿ ಪ್ರಸಿದ್ಧ ಪ್ರಸಾದವೆಂಬ ಮಹಾವೃಕ್ಷವಾಗಿ ಬೆಳೆಯಿತು.ಅದು ತನ್ನ ಚಿತ್‌ಶಕ್ತಿಯಿಂದ ಪಂಚಶಕ್ತಿಗಳ ಐದುಹೂವಾಯಿತು.ಅವುಗಳ ಕೂಟದಿಂದ ಪಂಚಲಿಂಗವೆಂಬ ಹಣ್ಣಾಯಿತು. ಅದನ್ನು ಹಿಡಿದು ಶರಣನು ಷಟ್ಸ್ಥಲವನ್ನು ಪ್ರಸಿದ್ಧಪ್ರಸಾದ ವೃಕ್ಷಕ್ಕೆ ಆನಿಸಿ ಜ್ಞಾನಕ್ರೀಗಳೆಂಬ ದೃಢದಿಂದ ಏರಿ ನಾಲ್ಕೆನೆಯ ಪೀತವರ್ಣದ ಹಣ್ಣನ್ನು (ಆಧಾರಚಕ್ರವನ್ನು) ಸುಚಿತ್ತವೆಂಬ ಹಸ್ತದಲ್ಲಿ ಹಿಡಿದು, ಆರೆಲೆಯ ನೀಲವರ್ಣದ ಹಣ್ಣನ್ನು (ಸ್ವಾದಿಷ್ಠಾನ ಚಕ್ರವನ್ನು) ಸುಬುದ್ಧಿಯೆಂಬ ಹಸ್ತದಲ್ಲಿ ಹಿಡಿದು, ಹತ್ತೆಲೆಯ ಸ್ಫಟಿಕವರ್ಣದ ಹಣ್ಣನ್ನು (ಮಣಿಪೂರಕ ಚಕ್ರವನ್ನು) ನಿರಹಂಕಾರವೆಂಬ ಹಸ್ತದಲ್ಲಿ ಹಿಡಿದು, ಹನ್ನೆರಡೆಲೆಯ ಸುವರ್ಣವರ್ಣದ ಹಣ್ಣನ್ನು (ಅನಾಹತಚಕ್ರವನ್ನು) ಸುಮನವೆಂಬ ಹಸ್ತದಲ್ಲಿ ಹಿಡಿದು, ಹದಿನಾರೆಲೆಯ ಮಿಂಚು ವರ್ಣದ ಹಣ್ಣನ್ನು (ವಿಶುದ್ಧಚಕ್ರವನ್ನು) ಸುಜ್ಞಾನವೆಂಬ ಹಸ್ತದಲ್ಲಿ ಹಿಡಿದು ಆಸನಸ್ಥಿರವಾಗಿ ಕಣ್ಮುಚ್ಚಿ ಜ್ಞಾನಚಕ್ಷುವಿನಿಂದ ರೇಚಕ ಪೂರಕ ಕುಂಭಕ ಮಾಡಿ ಹೆಣ್ದುಂಬಿ–ವೀಣಾ–ಘಂಟಾ–ಭೇರಿ–ಮೇಘ–ಪ್ರಣವ–ದಿವ್ಯ–ಸಿಂಹನಾದಗಳಿಂದ ಆ ಐದೂ ಹಣ್ಣುಗಳನ್ನು ಮನವೆಂಬ ಹಸ್ತದಿಂದ ಕಿತ್ತು, ಪಂಚಭೂತಗಳನ್ನು ದಶವಾಯುಗಳನ್ನು ಅಷ್ಟಮದಗಳನ್ನು, ಅಂತಃಕರಣಗಳನ್ನು, ಮೂಲಾಹಂಕಾರವನ್ನು, ಸಪ್ತವ್ಯಸನಗಳನ್ನು, ಜ್ಞಾನೇಂದ್ರಿಯಗಳನ್ನು, ಕರ್ಮೇಂದ್ರಿಯಗಳನ್ನು, ತನ್ಮಾತ್ರೆಗಳನ್ನು, ಅರಿಷಡ್ವರ್ಗಗಳನ್ನು ನಾಶಮಾಡಿ ಸ್ಫಟಿಕದ ಪುತ್ಥಳಿಯಂತೆ ನಿಜರೂಪವಾಗಿ ಆಜ್ಞಾಚಕ್ರದಲ್ಲಿ ಸುಜ್ಞಾನಹಸ್ತದಲ್ಲಿ ಹಿಡಿದು ಓಂಕಾರ ಮಂತ್ರದಿಂದ ಸಂತೈಸಿ ನೀರು ನೀರು ಕೂಡಿದಂತೆ ಪರಬ್ರಹ್ಮನೊಡಿಗೆ ಕೂಡಿ ಪರಬ್ರಹ್ಮನೆ ತಾನಾಗಿ ಸಹಸ್ರಾರಚಕ್ರದ ಬ್ರಹ್ಮರಂಧ್ರದ ನಿಷ್ಕಲಬ್ರಹ್ಮದ ನಿರಾಕಾರ ಪಾದವನ್ನು ನಿರ್ಭಾವವೆಂಬ ಹಸ್ತದಿಂದ ಹಿಡಿದು ಪಂಚಪ್ರಸಾದವೆಂಬ ಮಂತ್ರದಿಂದ ಕ್ಷೀರಕ್ಷೀರ ಕೂಡಿದಂತೆ ನಿಷ್ಕಲಪರಬ್ರಹ್ಮನನ್ನು ಕೂಡಿ ನಿಷ್ಕಲ ಪರಬ್ರಹ್ಮನೇ ತಾನಾಗಿ, ಶಿಖಾಚಕ್ರದ ಶೂನ್ಯಬ್ರಹ್ಮದ ಶೂನ್ಯಪಾದವನ್ನು

ನಿಷ್ಕಲ ಹಸ್ತದಿಂದ ಹಿಡಿದು ಘೃತ ಘೃತವನ್ನು ಕೂಡಿದಂತೆ ಶೂನ್ಯಬ್ರಹ್ಮನನ್ನು ಕೂಡಿ ಶೂನ್ಯಬ್ರಹ್ಮನೇ ಆಗಿ, ಪಶ್ಚಿಮಚಕ್ರದ ನಿರಂಜನಬ್ರಹ್ಮದ ನಿರಂಜನಪಾದವನ್ನು ಶೂನ್ಯಹಸ್ತದಿಂದ ಹಿಡಿದು ಬಯಲು ಬಯಲನ್ನು ಬೆರೆಸಿದಂತೆ ನಿರಂಜನಬ್ರಹ್ಮನನ್ನು ಕೂಡಿ ನಿರಂಜನಬ್ರಹ್ಮನೇ ತಾನಾಗಿ ಆ ಮಹಾಗುರು ಸಿದ್ಧಲಿಂಗಪ್ರಭುವಿನ ಗರ್ಭದಲ್ಲಿ ಜನಿಸಿದ ಬಾಲಕಿ ಶರಣಕನ್ಯೆ ತಾನೆಂದಿರುವರು. ಇಂತಹ ತನಗೆ ಗುರುಸಿದ್ಧೇಶ್ವರರು ಪ್ರೇರಕರಾಗಿ ಷಟ್ಸ್ಥಲ ಮಾರ್ಗವನ್ನು ಪುರಾತನ ವಚನಾನುಭವವನ್ನು, ಭಕ್ತಿ–ಜ್ಞಾನ–ವೈರಾಗ್ಯವನ್ನು ಉಣ್ಣಿಸಲು ತಾನು ಬಾಲ್ಯಕಳೆದು ಯೌವನಸ್ಥರಾಗಿ ನಿಜಮೋಕ್ಷದ ವಿರಹವನ್ನು ಅನುಭವಿಸಿ ಶರಣಸತಿಲಿಂಗಪತಿಯಾಗಿಸೆಂದು, ತನ್ನನ್ನು ಪ್ರಮಥಗಣಗಳ ಸಾಕ್ಷಿಯಲ್ಲಿ ಶಿವನು ಮದುವೆಯಾಗಲೆಂದು ಪ್ರಾರ್ಥಿಸುವರು. ಲಿಂಗಪತಿಗೆ ಶರಣಸತಿಯಾಗಬೇಕಾದರೆ ಯೋಗಮಾರ್ಗದಲ್ಲಿ ಸಿದ್ಧಿ ಪಡೆದಿರಬೇಕೆಂಬುದಾಗಿ ಇಲ್ಲಿ ಹೇಳಿದ್ದಾರೆ(೪೬).

ನಿಷ್ಕಳ ಪರಂಜ್ಯೋತಿಯು (ಶಿವತತ್ವವು) ಚಿತ್‌ಶಕ್ತಿಯ ಸಂಯೋಗದಿಂದ ಮಹಾಲಿಂಗ (ಸದಾಶಿವತತ್ವ) ವೆನಿಸುವುದು.ಆ ಸದಾಶಿವತತ್ತ್ವವು ಕ್ರಿಯಾ–ಜ್ಞಾನ–ಇಚ್ಛಾ–ಆದಿ–ಪರಾಶಕ್ತಿಗಳ ಸಂಯೋಗದಿಂದ ಆಚಾರ–ಗುರು–ಶಿವ–ಚರ–ಪ್ರಸಾದಲಿಂಗಗಳಾಗಿ ಸದಾಶಿವತತ್ತ್ವದ ಪಂಚಮುಖಗಳೆಂಬಂತೆ ಉದ್ಭವಿಸುವುವು. ಇವಕ್ಕೆ ಶರಣನು ಗಂಧ–ರಸ–ರೂಪ–ಸ್ಪರ್ಶ–ಶಬ್ಧಗಳನ್ನು ನಿವೇದಿಸಿ ಲಿಂಗಪ್ರಸಾದವಾಗಿ ಅನುಭವಿಸುವನೇ ಹೊರತು ವಿಷಯಲಂಪಟನಾಗಿ ಭೋಗಲೋಲುಪ್ತನಾಗಿರತಕ್ಕದ್ದಲ್ಲವೆಂಬ ವಿಚಾರವನ್ನು ಇಲ್ಲಿ ತಿಳಿಸಿದ್ದಾರೆ(೪೭). ಶರಣರು ಇಷ್ಟಲಿಂಗಕ್ಕೆ ಅರ್ಪಿಸಿ ಉಣ್ಣುವ ಅರ್ಪಿತಾವಧಾನ ಕ್ರಿಯೆಯ ಕ್ರಮವನ್ನು ಹೇಳುತ್ತಾ ಶಿವಸ್ಮರಣೆಯಿಲ್ಲದೆ ತಿನ್ನುವುದನ್ನು 'ಭಿನ್ನಬೋಜನ'ವೆಂದೂ ಅದು ನಿಷಿದ್ಧವೆಂದೂ, ಆರಂಭದ ತುತ್ತನ್ನು ಮಾತ್ರಾ ಆರ್ಪಿಸಿ ತಿಂದರೆ ಅದು 'ಪ್ರಸಾದಭೋಜನ'ವೆಂದೂ ಅದು ಅಗತ್ಯವೆಂದೂ, ಬದಲಿಗೆ ತಿನ್ನುವ ಪ್ರತೀ ತುತ್ತನ್ನೂ ಶಿವಾರ್ಪಣ ಮಾಡಿದರೆ ಅದು 'ಸಹಬೋಜನ'ವೆಂದೂ ಅದು ಆದರ್ಶವೆಂದೂ ಹೇಳುತ್ತಿರುವರು(೪೮). ಆಹಾರದ ಬಗೆಗಿನ ಆ ಕಾಲದ ಮಡಿವಂತಿಕೆಯ ಒಂದು ಅತಿರೇಕದ ವಿಚಾರದ ಬಗ್ಗೆ 'ಒಂದು ಅನುಮಾನ' ಎಂಬ ವಚನದಲ್ಲಿ ಸರ್ವವನ್ನೂ ದೈವಕ್ಕೆ ಸಮರ್ಪಿಸಿಯೇ ಸ್ವೀಕರಿಸುವಾಗ ಮಾವಿನಹಣ್ಣನ್ನು ಸಮರ್ಪಿಸಿ ಬೀಜ ಬಿಸಾಕುವುದು ಅಪರಾಧವಾಗಬಹುದೇ ಎಂಬ ಗೊಂದಲದ ಬಗ್ಗೆ ಪ್ರಸಾದವೆಂಬ ಪರತತ್ತ್ವದಲ್ಲಿ ಜ್ಞಾನಅಜ್ಞಾನಗಳೆರಡೂ ಹುದುಗಿವೆ ಎಂದು ಹೇಳಲು ಹಿಂಜರಿಯುತ್ತಾರೆ(೪೯). ಕೇವಲ ಬರಿದೆ ಮುಕ್ತಿಬೇಕೆಂಬುದಾಗಿ ಹಂಬಲಿಸಿದರೆ ಸಿಗುವುದಿಲ್ಲ; ಬದಲಾಗಿ ಸಾಧಕನು ತನ್ನ ಇಷ್ಟಲಿಂಗವನ್ನು ಬಹಿರಂಗವಾಗಿ ಪೂಜಿಸುವುದರ ಜೊತೆಗೆ ಯೌಗಿಕನೆಲೆಯಲ್ಲಿ ಅನಾಹತ ಚಕ್ರದಲ್ಲಿ (ಹೃದಯಸ್ಥಾನದಲ್ಲಿ) ಅದನ್ನು ಸ್ಥಾಪಿಸಿಕೊಂಡು, ಆಜ್ಞಾಚಕ್ರದಲ್ಲಿ (ಭ್ರೂಮಧ್ಯಸ್ಥಾನದಲ್ಲಿ) ಮುಂದುವರಿದು, ಸಹಸ್ರಾರಚಕ್ರದಲ್ಲಿ (ಉತ್ತಮಾಂಗದಲ್ಲಿ) ಧ್ಯಾನಿಸಿದಾಗ ನಿಜಮುಕ್ತಿದೊರೆತು ಪರಂಜ್ಯೋತಿಸ್ವರೂಪನಾಗಿ ಶಕ್ತಿಶಾಲಿಯಾಗಿ ದೇಹವೆಂಬ ಹಣತೆ ಮನಸ್ಸೆಂಬ ಎಣ್ಣೆ, ಭಾವವೆಂಬ ಬತ್ತಿಯೊಡಗೂಡಿ ಸ್ವಯಂಪ್ರಕಾಶವಾಗಿರುತ್ತದೆ(೫೦) ಎನ್ನುವರು.

ಸ್ಥೂಲತನುವಿನ ಮೇಲಿರುವ ಆಚಾರ(ಇಷ್ಟ)ಲಿಂಗವನ್ನು ಆ ತನುವೆಂಬ ಪುಷ್ಪದಿಂದ ಪೂಜಿಸಿ ಅಂದರೆ ಇಷ್ಟಲಿಂಗಕ್ಕೆ ತನುವನ್ನು ಸಮರ್ಪಿಸಿಕೊಂಡು ಅದಕ್ಕೆ ಸಾಕ್ಷಿಯಾಗಿ ಹೊನ್ನುಹೆಣ್ಣುಮಣ್ಣಿನ ವ್ಯಾಮೋಹ ಬಿಡಬೇಕು. ಅನಂತರ ಎರಡನೆಯದಾಗಿ ಒಳಗಣ ಸೂಕ್ಷ್ಮತನುವಿನ ಮೇಲಿರುವ ಪ್ರಾಣಲಿಂಗ ಅಂದರೆ ಜೀವಂತ ಲಿಂಗವಾದ ಜಂಗಮಲಿಂಗವನ್ನು ಅಂತರಂಗವೆಂಬ ಹೂವಿನಿಂದ ಪೂಜೆಮಾಡಿ ಅದಕ್ಕೆ ಸಾಕ್ಷಿಯಾಗಿ ಮನ–ಬುದ್ಧಿ–ಚಿತ್ತ–ಅಹಂಕಾರವೆಂಬ ಅಂತಃಕರಣ ಚತುಷ್ಟಯವನ್ನು ಸುಟ್ಟು ನಿರೋಧಿಸಬೇಕು.ಮೂರನೆಯದಾಗಿ ಅಂತರತಮ ಕಾರಣತನುವಿನ ಮೇಲಿನ ಭಾವಲಿಂಗವನ್ನು ಜ್ಞಾನಕ್ರಿಯೆಗಳಿಂದ ಮನೋಮಧ್ಯದ ಭಾವಪುಷ್ಪದಿಂದ ಪೂಜಿಸಿ ಲೋಕದ ತೃಪ್ತಿ ಸಂತೋಷವನ್ನೆಲ್ಲವನ್ನೂ ಅದಕ್ಕೆ ಸಮರ್ಪಿಸಬೇಕು. ಈ ರೀತಿ ಸಾಧನೆ ಮಾಡಿದ ಸಾಧಕನಾದ ತನಗೆ ಶಿವರಾತ್ರಿಸಂಕಣ್ಣನಿಗೆ ಒಲಿದಂತೆ ಒಲಿದು ಕರುಣಿಸಯ್ಯ ಎನ್ನುತ್ತಾರೆ(೫೧). ಜ್ಞಾನಕ್ರಿಯಾಶೀಲನಾದವನಿಗೆ ಲಿಂಗಸಂಧಾನವೇ ಹೊರತು ಬಹಿಃಕ್ರಿಯಾಕರ್ತನಿಗಲ್ಲ. ಶರಣನಲ್ಲಿ ಅಂಗಲಿಂಗ ಸಂಬಂಧ ಪುಷ್ಪದಲ್ಲಿನ ಪರಿಮಳದಂತೆ, ಸೂರ್ಯ ಹಾಗೂ ಅದರ ಕಿರಣದಂತಿರುತ್ತದೆ. ಅವನ ಮಾತು, ಉಸಿರು, ನಡೆ, ಸ್ವರ್ಶ ಎಲ್ಲವೂ ಲಿಂಗಮಯ ಮಂತ್ರಮಯವಾಗಿರುತ್ತದೆ(೫೨). ವೀರಶೈವನು ಆಚಾರಪಾಲಕನಾಗಿ ಗುರುವನ್ನು ಒಪ್ಪಿಸಿ ಅವನಿಂದ ಶಿವಲಿಂಗದೀಕ್ಷೆ ಪಡೆದು, ಅದನ್ನು ಉಪಾಸಿಸುತ್ತ, ಜಂಗಮಸೇವಾನಿರತನಾಗಿ ಮನಃಪ್ರಸನ್ನತೆಯಿಂದ ಪ್ರಸಾದ ಲಿಂಗೋಪಾಸಕನಾಗಿ ಮಹಾಲಿಂಗದಲ್ಲಿ ಲೀನನಾಗಿ ಜೀವನ್ಮುಕ್ತಿಯನ್ನು ಪಡೆಯುತ್ತಾನೆ. ಹೀಗೆ ಷಡ್ಲಿಂಗಗಳನ್ನು ಷಟ್ಸ್ಥಲದಲ್ಲಿ ಸಮೀಕರಿಸಿ ಮಾಡಿದ ಲಿಂಗಪೂಜೆಯೆನ್ನುವುದು ಕೇವಲ ಬಹಿರುಪಚಾರವಾಗದೆ ಧ್ಯಾನ, ಧಾರಣ, ಯೋಗದ ಮೂಲಕ ಪ್ರಾಣಲಿಂಗ ಭಾವಲಿಂಗವಾಗಿ ಸರ್ವಾಂಗಲಿಂಗವಾಗಬೇಕು. ಆಗ ಆತನೇ ಪರಬ್ರಹ್ಮನಾಗುತ್ತಾನೆ. ಆದಾಗದೆ ಕೇವಲ ಜ್ಞಾನಕ್ರೀಗಳಿಂದಲೇ ತಲೆತಿರುಗಿದವರನ್ನು ನೋಡಲಾರೆನೆನ್ನುತ್ತಾರೆ(೫೩).

ಮಾನವನ ದೇಹವು ೫ಕರ್ಮೇಂದ್ರಿಯ, ೫ಪ್ರಾಣವಾಯು, ೫ಜ್ಞಾನೇಂದ್ರಿಯ, ೫ಐಂದ್ರಿಯಿಕ ವಿಷಯ, ೫ಅಂತಃಕರಣ ಒಟ್ಟು ೨೫ ತತ್ತ್ವಗಳಿಂದಾಗಿದೆ.ಇಂಥ ದೇಹವನ್ನು ಒಂದು ಊರಾಗಿ ಕಲ್ಪಿಸಿ ಅಲ್ಲಿನ ೨೪ ತತ್ತ್ವಗಳನ್ನು ಪುಂಡರಾಗಿಸದೆ ಧರ್ಮಮಾರ್ಗದಲ್ಲಿ ನಡೆಸಿದಾಗ ಮಾತ್ರಾ ೨೫ನೆಯ ತತ್ವ ಜೀವವು ಪರಬ್ರಹ್ಮನಾಗುವುದು. ಆದರೆ ವಂಚಕನೊಬ್ಬ ವಿರಕ್ತನಂತೆ ಕಾಣಬೇಕೆಂದು ಕೈಯಲ್ಲಿ ಲಿಂಗವನ್ನು ಹಿಡಿದುಕೊಂಡು ನೋಟಕ್ಕಾಗಿ ಆಡಂಬರದ ಪೂಜೆ ಮಾಡುವವರನ್ನು ಇಲ್ಲಿ ವಿಡಂಬನೆ ಮಾಡಿದ್ದಾರೆ(೫೪). ದಾಸೋಹವು ಬಾಹ್ಯ ಮತ್ತು ಆಂತರಿಕ (ನಿರ್ವಾಣ) ಎಂದು ಎರಡು ವಿಧ.ಬಾಹ್ಯದಾಸೋಹದಲ್ಲಿ ತನ್ನಲಿರುವುದನ್ನು ಗುರುಲಿಂಗಜಂಗಮಕ್ಕೆ ನೀಡಿ ಶುದ್ಧಸಿದ್ಧಪ್ರಸಿದ್ಧ ಪ್ರಸಾದ ಪಡೆಯುವರು. ತಮ್ಮ ಸಮಕಾಲೀನ ತೋರಿಕೆಯ ಈ ಬಾಹ್ಯದಾಸೋಹಕ್ಕೆ ಹೇಸಿ ತಾವು ನಿರ್ವಾಣದಾಸೋಹವನ್ನು ಅನುಸರಿಸಿ ಅದರಲ್ಲಿ ಗುರುಲಿಂಗಜಂಗಮಕ್ಕೆ ತಾನು ದೈಹಿಕವಾಗಿ ಮಾನಸಿಕವಾಗಿ, ಅಂತರ್ಮಾನಸಿಕವಾಗಿ ಸಾಧನೆ ಮಾಡಿ ತನ್ನ ಆಧ್ಯಾತ್ಮಿಕ ಸಿದ್ಧಿಗಳನ್ನು ಅರ್ಪಿಸಿ ನಿರ್ವಿಕಾರವಾಗಿ ನಿರಂಜನದಲ್ಲಿರುವುದನ್ನೇ ನಿರ್ವಾಣದಾಸೋಹವೆಂದು ಕರೆದು ಅದನ್ನೇ ವಿರಕ್ತರಾದ ತಾವು ನಿವೃತ್ತಿಮಾರ್ಗದಲ್ಲಿ ಅನುಸರಿಸುವುದಾಗಿ ಹೇಳುತ್ತಾರೆ(೫೫). ಪ್ರವೃತ್ತಿಮಾರ್ಗದಿಂದ ಆಕಾಶ ಚಿದಾಕಾಶ ಭಾವ, ಮನ, ದೇಹವಾಗಿ ಇಳಿದು ಬಂದ ನಿರಾಕಾರ ಪರಬ್ರಹ್ಮವು ನಿವೃತ್ತಿಮಾರ್ಗದಿಂದ ದೇಹವು–ಮನದಲ್ಲಿ, ಮನವು–ಭಾವದಲ್ಲಿ, ಭಾವವು–ಚಿದಾಕಾಶದಲ್ಲಿ, ಚಿದಾಕಾಶವು–ಆಕಾಶದಲ್ಲಿ ಲೀನವಾದರೆ ಆ ಶರಣನು ಮುಕ್ತನಾಗಿ ಪರಬ್ರಹ್ಮನೇ ಆಗುವನು(೫೬). ಪದಾರ್ಥಕ್ಕೂ ಪ್ರಸಾದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಶರಣನು ಪ್ರಸಾದಿಯಾಗಿ ನಿತ್ಯತ್ವ ಪಡೆಯುತ್ತಾನೆ(೫೭).

ಶರಣಧರ್ಮದ ಸೈದ್ಧಾಂತಿಕ ಸೂತ್ರಸಂಹಿತೆಯನ್ನು ಹೇಳುತ್ತಾರೆ.ಶರಣಮಾರ್ಗ ಭಕ್ತಿಪ್ರಧಾನವೂ ವೈಚಾರಿಕವೂ, ಭಕ್ತಿಜ್ಞಾನ ಕರ್ಮ ಸಮನ್ವಿತವೂ ಆಗಿದೆ.ಷಟ್ಸ್ಥಲಸಿದ್ಧಾಂತದನ್ವಯ ಶರಣ, ಐಕ್ಯಸ್ಥಿತಿಯಲ್ಲಿ ಭಕ್ತನು ಮಧುರಭಕ್ತಿಯಲ್ಲಿ ಮುಂದುವರಿದು ಪ್ರಾಣಲಿಂಗ ಭಾವಲಿಂಗದ ಅನುಸಂಧಾನದಿಂದ ಸ್ವಯಂಭುಲಿಂಗವಾಗಬೇಕು. ಷಡ್ವಿಧಲಿಂಗಗಳ ಮೂಲಕ ಪದಾರ್ಥವನ್ನು ಪ್ರಸಾದವಾಗಿಸಿಕೊಂಡು ಷಡಕ್ಷರಿ ಮಂತ್ರೋಪಾಸನೆಯ ಮೂಲಕ ನಡೆನುಡಿ ಒಂದಾಗಿ ಸಮತೋಲನದ ಕೌಶಲ್ಯದಿಂದ ಸಂಸಾರಿಗಳೂ ಸನ್ಯಾಸಿಗಳೂ ಲೋಕವೇ ಮುಕ್ತಿಸ್ಥಾನವಾಗಿಸಿಕೊಂಡು ಬದುಕಬೇಕು(೫೮). ಲೌಕಿಕದಲ್ಲಿ ಒಬ್ಬ ಸತಿಯ ಪಾಡು ಎಷ್ಟು ಶೋಚನೀಯವಾಗಿರುತ್ತದೋ ಅದೇ ರೀತಿ ಆಧ್ಯಾತ್ಮಿಕವಾಗಿ ಒಬ್ಬ ಶರಣರ ಪಾಡೂ ಅಷ್ಟೇ ಶೋಚನೀಯವಾಗಿರುತ್ತದೆ. ಗಂಡನಿಂದ ದುಃಖಿತಳಾದ ಹೆಣ್ಣೊಬ್ಬಳು ಊರಹೊರಗಿನ ವ್ಯಕ್ತಿಯೊಬ್ಬನೊಡನೆ ಸಂಪರ್ಕ ಬೆಳೆಸಿ ತನಗೆ ಅಡ್ಡಿಯಾಗುವರೆಂದು ಗಂಡ ಮಕ್ಕಳನ್ನು ಕೊಲೆಮಾಡಲು ನಿರ್ಧರಿಸಿ ಅಂಥ ಮಗನನ್ನು ನೀಡೆಂದು ಪ್ರಾರ್ಥಿಸಿದಂತೆ, ಕ್ರೂರಿಯಾದ ಕಾಲನೆಂಬ ಗಂಡನಿಂದ ದುಃಖಿತಳಾದ ಹೆಣ್ಣೊಬ್ಬಳು ಅಂದರೆ ಕಾಲಗತಿಗೆ ಸಿಕ್ಕು ಜರ್ಝರಿತವಾಗಿ ಮುಕ್ತಿಪಡೆಯಲು ಕಾತರನಾಗಿರುವ ಸಾಧಕನೊಬ್ಬನು ಕೈಕಾಲಿಲ್ಲದ ಮಿಂಡನೆಂದರೆ ನಿಶ್ಚಲ ಸದ್ಗುರುವೊಬ್ಬನನ್ನು ಆಶ್ರಯಿಸಿ ಜಂಜಡದಿಂಂದ ಪಾರುಮಾಡಿ ಅನುಗ್ರಹಿಸುವಂತೆ ಪ್ರಾರ್ಥಿಸುವನು. ಇದು ಬೆಡಗಿನ ಭಾಷೆಯಲ್ಲಿದೆ(೫೯).

ಬೆಡಗಿನ ವಚನದ ಪರಿಭಾಷೆಯಲ್ಲಿ ಶಿವಭಕ್ತಿ ಸ್ವರೂಪವನ್ನು ಹೀಗೆ ಹೇಳಿದ್ದಾರೆ: ಶಿವನ ಹೊಟ್ಟೆಯಲ್ಲಿ ಹುಟ್ಟಿದ ಚಿತ್‌ಶಕ್ತಿಯ ಮಗನೇ ಶರಣ. ಆತನ ತಂಗಿಯರಾದ ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಯರೇ ಹೆಂಡಿರಾದರು.ಅವರು ತನ್ನನ್ನೂ ಹೆಣ್ಣುಮಾಡಿ ತನ್ನ ತಂದೆ ಶಿವನಿಗೇ ತನ್ನನ್ನು ಕೊಟ್ಟು ಮದುವೆ ಮಾಡಿದರು. ಆತ ಒಲಿಯಲಿ ಬಿಡಲಿ ಆತನೊಡನೆ ಒಗೆತನಮಾಡಿ ತಾಯಿ ಚಿತ್‌ಶಕ್ತಿಯಿಂದ ಸೈಎನ್ನಿಸಿಕೊಳ್ಳುವೆನು(೬೦). ಮನುಷ್ಯನ ಬಹಿರಂಗ ಸಾಮ್ರಾಜ್ಯದ ಭೋಗಲಾಲಸೆಯು ಒಂದು ದಿನ ತಪ್ಪಿದರೂ ಪರಿತಪಿಸುವ ಆತನ ಆಶೆಬುರುಕತನ ಹೀನವಾದದ್ದು.ಭೋಗದಲ್ಲೇ ಮುಳುಮುಳುಗಿ ಈ ದೇಹ ಛಿದ್ರಛಿದ್ರವಾದರೂ ಅತೃಪ್ತಿ ಕಾಡುತ್ತದೆ. ಮನೋವಿಕಾರ, ಇಂದ್ರಿಯವಿಕಾರಗಳು ಮನುಷ್ಯನನ್ನು ನಾಶಪಡಿಸುತ್ತವೆ. ಜಗದ್ರಕ್ಷಕನಾದ ಶಿವನೇ ತನ್ನನ್ನು ಈ ಮಾಯಾಮೋಹಕಾಮದ ಬಲೆಯಿಂದ ರಕ್ಷಿಸಿ ಕಾಪಾಡು ಎನ್ನುತ್ತಾರೆ(೬೩). ಕರಸ್ಥಲದ ಪ್ರಸಾದದಿಂದ ತನ್ನ ಕಾಯ, ಜೀವ, ಪ್ರಾಣ, ಕರಣೇಂದ್ರಿಗಳೆಲ್ಲವೂ ಪ್ರಸಾದವಾಯಿತು(೬೪). ಜ್ಞಾನಿ ಜ್ಞಾನಿಯು ಕೂಡಿದರೆ ಬೆಳಗು ಮೂಡುವುದು; ಬದಲಿಗೆ ಜ್ಞಾನಿ ಅಜ್ಞಾನಿಯು ಕೂಡಿದರೆ ಹಾಲಿಗೆ ಹುಳಿ ಬೆರೆಸಿದಂತೆ ವ್ಯರ್ಥವಾಗುವುದು(೬೫). ಭಗವಂತನನ್ನು ಅರಿಯಲು ಸಪ್ತ ಮಲ, ವ್ಯಸನ, ಮದಗಳನ್ನು ಕಳೆದು ಭಕ್ತಿಯನ್ನು ದಯಪಾಲಿಸೆನ್ನುತ್ತಾರೆ(೬೬).

ಹೀಗೆ ಈ ಮೇಲಿನ ೨೦ ವಚನಗಳಲ್ಲಿ ಶ್ರೀಘನಲಿಂಗಶಿವಯೋಗಿಗಳವರು ನೇರವಾಗಿ ಆಧ್ಯಾತ್ಮದ ವಿಚಾರಗಳನ್ನು ಕುರಿತೇ ಹೇಳಿದ್ದಾರೆ. ಅವು ಸಾಧಕನು ತನ್ನ ಆಧ್ಯಾತ್ಮ ಸಾಧನೆಯ ಅವಧಿಯಲ್ಲಿ ಪರಿತ್ಯಜಿಸಬೇಕಾದ ಅಂಶಗಳನ್ನೂ, ಏರಬೇಕಾದ ಸಾಧನೆಯ ಸಿದ್ಧಿಯ ಎತ್ತರಬಿತ್ತರಗಳನ್ನೂ ವಿವರಿಸುತ್ತಿವೆ; ಅದಕ್ಕೆ ಆತ ಭಕ್ತಿಮಾರ್ಗದಲ್ಲಿ ನಡೆದು ಮನಸ್ಸನ್ನು ದೈವೀಶಕ್ತಿಯಲ್ಲಿ ಕೇಂದ್ರೀಕರಿಸಿ

ಷಟ್ಚಕ್ರಗಳ ಜಾಗೃತಿಯಿಂದ ಯೌಗಿಕ ಸಾಧನೆಯನ್ನು ಮಾಡಿ ವಿರಕ್ತನಾಗಿ ಸಿದ್ಧಿ ಪಡೆದುದನ್ನು ತಿಳಿಸುತ್ತಾರೆ. ಪಂಚಭೂತಗಳು, ಪಂಚತನ್ಮಾತ್ರೆಗಳಿಗಿಂತ ಮುಂಚೆ ನಿರಂಜನಪ್ರಣವ ಬೀಜಾಂಕುರವು ಷಟ್ಚಕ್ರಗಳಲ್ಲಿ ಬೆಳಗಿ ನಿಜರೂಪವಾಗಿ ಬಯಲು ಬಯಲನ್ನು ಬೆರೆಸಿದಂತೆ ಗುರುಸಿದ್ಧೇಶ್ವರರ ಕೃಪಾಶ್ರಯದಲ್ಲಿ ಶರಣಸತಿಲಿಂಗಪತಿಯಾದುದನ್ನು ತಿಳಿಸುತ್ತಾರೆ; ನಿಷ್ಕಳ ಪರಂಜ್ಯೋತಿಯು ಮಹಾಲಿಂಗವಾಗಿ ಷಡ್ವಿಧಶಕ್ತಿ, ಷಡ್ಲಿಂಗಗಳ ಮೂಲಕ ಅರ್ಚಿಸಿ ತೃಪ್ತನಾಗುವನೇ ಹೊರತು ಲಂಪಟತನದ ತೃಪ್ತಿ ಪಡೆಯನು; ಭಕ್ತನು ಅನವರತವೂ ಅರ್ಪಿತಾವಧಾನಿಯಾಗಿರುತ್ತಾನೆ; ಮುಕ್ತಿಯು ಷಟ್ಚಕ್ರಗಳ ಸಾಧನೆಯಿಂದ ಪ್ರಕಾಶಿಸುತ್ತದೆ; ತನುತ್ರಯಗಳಲ್ಲಿ ತ್ರಿವಿಧಲಿಂಗಗಳ ಸಾಧನೆಯಿಂದ ದೈವವನ್ನು ಒಲಿಸಿಕೊಳ್ಳಬೇಕು ; ಬಹಿಃ ಕ್ರಿಯಾಕರ್ತನಿಗೆ ಹೊರತಾಗಿ ಜ್ಞಾನಕ್ರಿಯಾಶೀಲನಾದವನಿಗೆ ಲಿಂಗಾಂಗಸಾಮರಸ್ಯ ಸಿದ್ಧಿಸುತ್ತದೆ; ಅದೂ ಕೇವಲ ಜ್ಞಾನಕ್ರೀಗಳಲ್ಲೇ ಮುಳುಗದೆ ಧ್ಯಾನಧಾರಣಗಳಿಂದ ಪೂರ್ಣಗೊಂಡು ಸರ್ವಾಂಗಲಿಂಗಿಯಾಗಿ ಪರಬ್ರಹ್ಮಸಿದ್ಧಿ ಪಡೆಯಬೇಕು; ೨೫ ತತ್ತ್ವಗಳ ಈ ದೇಹವನ್ನು ಒಂದೇ ದಾರಿಯಲ್ಲಿ ನಡೆಸಿದರೆ ಪರಬ್ರಹ್ಮನಾಗುವನು, ಅದುಬಿಟ್ಟು ಬಾಹ್ಯಾಡಂಬರಕ್ಕೆ ಬಲಿಯಾದರೆ ನಾಶವಾಗುವನು; ಬಾಹ್ಯದಾಸೋಹಕ್ಕೆ ಬದಲಾಗಿ ಆಂತರಿಕ ನಿರ್ವಾಣದಾಸೋಹ ಶ್ರೇಷ್ಠವಾದುದು; ಪ್ರವೃತ್ತಿಮಾರ್ಗದಲ್ಲಿ ಇಳಿದ ಪರಬ್ರಹ್ಮನನ್ನು ನಿವೃತ್ತಿಮಾರ್ಗದಲ್ಲಿ ಸಾಧಿಸಿ ಸೇರಬೇಕು; ಶರಣ ಪ್ರಸಾದಿಯಾಗಬೇಕು; ಶರಣ ಈ ಲೋಕದಲ್ಲಿಯೇ ಸಾಧನೆ ಮಾಡಿ ಜೀವನ್ಮುಕ್ತಿ ಪಡೆಯಬೇಕು; ಲೋಕದಲ್ಲಿದ್ದುಕೊಂಡೇ ಲೋಕವನ್ನು ಗೆಲ್ಲಬೇಕು; ಭಗವಂತ ಒಲಿಯಲಿ ಬಿಡಲಿ ಸಾಧಕ ಮಾತ್ರಾ ಸಾಧನೆ ಮಾಡಿ ಸಿದ್ಧಿ ಪಡೆಯಬೇಕು; ಅತುಲಭೋಗದ ವ್ಯಾಮೋಹದ ಬಲೆಯಲ್ಲಿ ಸಿಲುಕಿದ ಮನುಷ್ಯನನ್ನು ಭಗವಂತನೇ ಕಾಪಾಡಬೇಕು, ಸರ್ವಾಂಗವು ಪ್ರಸಾದವಾಗಬೇಕು, ಜ್ಞಾನಿಯ ಸಹವಾಸದಿಂದ ತನು, ಕರಣ, ಮನಗಳು ನಿರ್ಮಲವಾಗುವುದು, ಮಲ, ವ್ಯಸನ, ಮದಗಳನ್ನು ಇಲ್ಲವಾಗಿಸಿ ಪರಮಭಕ್ತಿನೀಡಿ ಪಾಲಿಸು ಎಂಬಿತ್ಯಾದಿಯಾಗಿ ಸಾಧಕನ ಆಧ್ಯಾತ್ಮಯಾತ್ರೆಯಲ್ಲಿನ ಹಲವಾರು ಮಜಲುಗಳನ್ನು ಹೃದಯಸ್ಪರ್ಶಿಯಾಗಿ ವಿವರಿಸಿದ್ದಾರೆ.

ಹೀಗೆ ಕೊನೆಯ ನಾಲ್ಕನೆಯ ಗುಂಪಿನ ಈ ವಚನಗಳು ಸಂಪೂರ್ಣವಾಗಿ ಆಧ್ಯಾತ್ಮಿಕ ವಿಚಾರಗಳನ್ನೇ ಹೇಳಿರುವುದು ವಿಶಿಷ್ಟವಾಗಿವೆ. ಒಟ್ಟಾರೆಯಾಗಿ ಇಲ್ಲಿನ ಎಲ್ಲ ೬೬ ವಚನಗಳಲ್ಲಿಯೂ ಆಧ್ಯಾತ್ಮದ ಅಂಶ ಇದ್ದೇ ಇರುವುದಾದರೂ ಕೊನೆಯ ನಾಲ್ಕನೆಯ ಗುಂಪಿನ ೨೦ವಚನಗಳಲ್ಲಿ ಆಧ್ಯಾತ್ಮಿಕ ನೆಲೆಯ ಚಿಂತನೆಗಳೇ ಸಂಪೂರ್ಣವಾಗಿ ಇವೆ. ಮೊದಲಿಗೆ 'ಮುಕ್ತಿಯ ಪುರದ ಗುಪ್ತಮಾರ್ಗವನ್ನು' (೪೫) ವಿವರವಾಗಿ ಹೇಳಿ ಅನಂತರ 'ನಿರಂಜನ ಪ್ರಣವ' (೪೬)ದ ಉಗಮವನ್ನು ಅದರ ಬೆಳವಣಿಗೆಯನ್ನು ಶಿವಜೀವರ ಅಂಗಲಿಂಗದ ಸಾಮರಸ್ಯವನ್ನು, ಆ ಹಿನ್ನೆಲೆಯಲ್ಲಿ ನಡೆದ ಜೀವವು ಷಟ್ಸ್ಥಲಮಾರ್ಗವನ್ನು ಕ್ರಮಿಸಿ ಅಷ್ಟಾವರಣಾದಿಗಳ ಕ್ರಿಯೆಯಲ್ಲಿ ತೊಡಗಿ ಪಂಚಾಚಾರನಿಷ್ಠನಾಗಿ ಕೊನೆಗೆ ತನ್ನನ್ನು ಶರಣಸತಿಲಿಂಗಪತಿಯಾಗಿರಿಸೆಂಬ ಜೀವದ ಪ್ರಾರ್ಥನೆಯನ್ನು ಹೇಳಿದೆ. ಮುಂದೆ ಪಂಚಲಿಂಗಗಳ ಪ್ರಾಣ–ಅಂಗ–ಮುಖ–ಪದಾರ್ಥ(೪೭) ಎಂಬ ವಚನದಲ್ಲಿ ಮಹಾಲಿಂಗವು ಪಂಚಲಿಂಗಗಳಾದುದನ್ನು ಆ ಪಂಚಲಿಂಗಗಳ ಅಂಗ, ಮುಖ, ಪದಾರ್ಥಗಳನ್ನು ವಿವರವಾಗಿ ತಿಳಿಸಿ ಅವನ್ನು ಮಹಾಲಿಂಗಕ್ಕೆ ಸಮರ್ಪಿಸುವುದು ಶರಣರಿಗಲ್ಲದೆ ಮಿಕ್ಕವರಿಗೆ ಬರುವುದಿಲ್ಲವೆನ್ನುತ್ತಾರೆ. 'ಅರ್ಪಿತ ಅವಧಾನಕ್ರಮ' (೪೮) ಎಂಬ ವಚನದಲ್ಲಿ ಅರ್ಪಿತದ ತ್ರಿವಿಧದ ಅಂತರಂಗವನ್ನು ಶರಣರೇ ಬಲ್ಲರೆನ್ನುತ್ತಾರೆ, 'ಗುರುಕೊಟ್ಟ ಸಂಧಾನ' (೫೦) ಎಂಬ ವಚನದಲ್ಲಿ ನಿಜಮುಕ್ತಿಗೆ ಸದಾ ಸಂಧಾನದಲ್ಲಿರಬೇಕೆಂಬ ಹಿನ್ನೆಲೆಯಲ್ಲಿ ಗುರುಕೊಟ್ಟ ಇಷ್ಟಲಿಂಗ ಸಂಧಾನವು ಕೇವಲ ಅಂಗೈಯ ಇಷ್ಟಲಿಂಗಕ್ಕೆ ಮಾತ್ರಾ ಸೀಮಿತವಾಗದೆ ಅದು ಹೃದಯಸ್ಥಾನವಾದ ಅನಾಹತಚಕ್ರದಲ್ಲಿ ಭ್ರೂಮಧ್ಯದ ಆಜ್ಞಾಚಕ್ರದಲ್ಲಿ, ಉತ್ತಮಾಂಗದ ಸಹಸ್ರಾರಚಕ್ರದಲ್ಲಿ ವ್ಯಾಪಿಸಿಕೊಂಡು ಕಣ್ತುಂಬಿ ಮನದಣಿವಂತೆ ಅಪ್ಪಿ ಅಗಲದಿರುವುದೇ ನಿಜಮುಕ್ತಿ. ಅದನ್ನೆಲ್ಲವನ್ನೂ ಬಿಟ್ಟು ಮರೆತು ಭಿನ್ನರೀತಿಯಲ್ಲಿ ವರ್ತಿಸುವವರಿಗೆ ಭವಸಂಧಾನ ದೊರಕುವುದು ಎನ್ನುತ್ತಾರೆ.'ಲಿಂಗಾಂಗ ಸಂಬಂಧ'(೫೧) ಎಂಬ ವಚನದಲ್ಲಿ ಲಿಂಗಾಂಗ ಸಂಬಂಧದ ಪರಿಯನ್ನು ವಿವರಿಸಿದ್ದಾರೆ. 'ಗಮನ ನಿರ್ಗಮನ ಮತ್ತು ಶರಣ' (೫೨) ಎಂಬ ವಚನದಲ್ಲಿ ನಿರ್ಗಮನಿಯಾದ ಜ್ಞಾನಕ್ರಿಯಾಶೀಲ ಶರಣನಿಗೆ ಸಂಧಾನವಲ್ಲದೆ ಗಮನಿಯಾದ ಬಹಿಃಕ್ರಿಯಾಕರ್ತ ಶರಣನಿಗೆ ಅನುಗೊಳ್ಳದು.ಸೂರ್ಯನಿರುವೆಡೆಯಲ್ಲಿ ಆತನ ಜೊತೆಯಲ್ಲಿಯೇ ಅವನ ಕಿರಣಗಳೂ ಇರುವಂತೆ, ಪುಷ್ಪವಿದ್ದಲ್ಲಿ ಪರಿಮಳವಿರುವಂತೆ ಅಂಗವಿದ್ದಲ್ಲಿ ಲಿಂಗವಿರುವುದು.ಆ ಲಿಂಗದ ಮೇಲೆ ಮನವಿರುವವನೇ ಶರಣ.ಆ ಶರಣ ನಡೆದಾಡುವಲ್ಲಿಯೇ ಉರಿಯ ಮೇಲೆ ತಂಗಾಳಿ ಬೀಸಿದಂತೆ ತ್ರಿಪುಟಿಯ ಮೇಲೆ ಚಿದ್ಬೆಳಗು ಬೆಳಗುತ್ತಿದೆ.ಆ ಶರಣನ ನುಡಿ, ನೋಟ, ಕುಂಭಿಸು, ರೇಚಿಸು, ಸೆಳೆವಲ್ಲಿಯೇ ಪ್ರಣವ, ಲಿಂಗಾರ್ಪಿತ, ಓಂಕಾರ, ಪಂಚಾಕ್ಷರಗಳು ಲಿಂಗಮನವನ್ನು ತುಂಬುತ್ತಿದೆ.ಆದುದರಿಂದ ಗುರು ಕರುಣಪ್ರಸಾದವನ್ನು ಪಡೆದು ತತ್ತ್ವಸ್ವರೂಪ ಧ್ಯಾನ ಧಾರಣ ಅರ್ಪಿತ ಅವಧಾನವನ್ನು ಅರಿತ ಶರಣನಿಗೆ ಗಮನಾಗಮನವೆಂಬ ಉಭಯವಿಲ್ಲ ಎನ್ನುತ್ತಾರೆ.

‘ಸರ್ವಾಂಗಲಿಂಗ’ (೫೩) ಎಂಬ ವಚನದಲ್ಲಿ ಇಷ್ಟಲಿಂಗವನ್ನು ಅಂಗೈಯಲ್ಲಿಟ್ಟು ಪೂಜಿಸುವಾಗ ಷಟ್ಸ್ಥಲಗಳ ಹಿನ್ನೆಲೆಯಲ್ಲಿ ಷಡ್ಲಿಂಗಗಳ ಉಪಾಸನೆಯೂ ಷಡಿಂದ್ರಿಯಗಳ ಮೂಲಕ ನಡೆದು ಷಡ್ವಿಧ ಅಂಗದಲ್ಲಿ ನೆಲೆಗೊಂಡಿತು.ಹೀಗೆ ಇಷ್ಟಲಿಂಗಪೂಜೆಯು ಧ್ಯಾನಯೋಗದಲ್ಲಿ ನಡೆದು ಷಡ್ವರ್ಣದಲ್ಲಿ ಅಂಗವೇಧಿಸಿ ಜ್ಞಾನಕ್ರೀಗಳಲ್ಲಿ ಷಡ್ವಿಧ ಪ್ರಾಣಲಿಂಗವಾಗಿ ನೆಲೆಗೊಂಡಿತು.ಆ ಪ್ರಾಣಲಿಂಗಗಳು ಮಂತ್ರಗಳ ಮೂಲಕ ಮನೋಹೃದಯದಲ್ಲಿ ಜಾಗೃತ್‌ಸ್ವಪ್ನದಲ್ಲಿ ಧಾರಣಯೋಗದಲ್ಲಿ ನಡೆದು ಕ್ರೀಯ ಮರೆಯಲು ಆ ಲಿಂಗವು ವೇಧಿಸಿ ಭಾವಗಳಡಗಿ ತ್ರಿವಿಧಭಾವಲಿಂಗವಾಗಿ ನೆಲೆಗೊಂಡಿತು.ಆ ಭಾವಲಿಂಗಗಳೊಡನೆ ಬೆರೆತ ಶರಣ ಕರ್ಪುರವನ್ನು ಉರಿಹಿಡಿದಂತಾಗಿ ಸಮಾಧಿಯೋಗದೊಳಿದ್ದು ಜ್ಞಾನವನ್ನು ಮರೆಯಲು ಆ ಭಾವಲಿಂಗವು ಸರ್ವಾಂಗಲಿಂಗವಾಗಿ ಆತನೇ ಪರಬ್ರಹ್ಮಸ್ವರೂಪನಾದನು.ಇದನ್ನು ತಿಳಿಯದೆ ಜ್ಞಾನಕ್ರೀಗಳಿಂದಾಚರಿಸಿ ಲಿಂಗಾಂಗಸಂಯೋಗವಾಗದೆ ತಮ್ಮರಿವಿಗೆ ತಾವೇ ತಲೆದೂಗಿ ಅಹಂಬ್ರಹ್ಮವೆನ್ನುವವರನ್ನು ನೋಡಬಾರದು.ಅದು ಬಹಿರುಪಚಾರವಾಗದೆ ಅಂತರಂಗದ ಅರಿವಾಗಿ ಸರ್ವಾಂಗಲಿಂಗಿಗಳಾಗಬೇಕು ಎನ್ನುತ್ತಾರೆ.

‘ಲಿಂಗದನೋಟ–ಬ್ರಹ್ಮದನೋಟ’ (೫೪) ಎಂಬ ವಚನದಲ್ಲಿ ಪರಮಲಿಂಗಾಂಗಿಯ ಇರವನ್ನು ಸವಿಸ್ತಾರವಾಗಿ ತಿಳಿಸಿದ್ದಾರೆ. ವಾಕ್, ವಾಣಿ, ಪಾದ, ಗುಹ್ಯ, ಪಾಯು ಈ ೫ ಕರ್ಮೇಂದ್ರಿಯಗಳನ್ನು ಇಲ್ಲವಾಗಿಸಿ ಶಬ್ಬ, ಸ್ಪರ್ಶ, ರೂಪ, ರಸ, ಗಂಧ ಎಂಬ ೫ ಭೋಗ ವಿಷಯಗಳನ್ನು ತನುಮನ ಸೋಕುವುದಕ್ಕೆ ಮುನ್ನವೇ ಅರ್ಪಣಮಾಡಿ ಅವುಗಳಿಗೊಳಗಾಗದೆ ತನ್ಮಾತ್ರೆಗಳನ್ನು ನಾಶಮಾಡಿ ಪಂಚಬ್ರಹ್ಮಗಳನ್ನು ಪಂಚೇಂದ್ರಿಯಗಳಲ್ಲಿ ಪ್ರತಿಷ್ಠಿಸಿ ಕಾಮುಕತನವನ್ನು ಕಡಗೊತ್ತಿ ಜ್ಞಾನೇಂದ್ರಿಯಗಳ ನೆನಹನ್ನು ಕೆಡಿಸಿ ಪಂಚವಾಯುಗಳ ಸೆರೆಹಿಡಿದು ನಾಶಪಡಿಸಿ ಅಂತಃಕರಣಗಳನ್ನು ಕಳೆದು, ೧೨ ಪತ್ರದ ಲಿಂಗಕ್ಕೆ ಪೂಜಿಸಿ ಅಂತಃಕರಣವನ್ನು ನಾಶಮಾಡಿ ಜೀವಜ್ಞಾನ ಅಡಗಿಸಿ, ಭೋಗವನ್ನು ನೀಗಿ ಪಂಚಭೂತಗಳ ಸೇವಕರಾದ ಜೀವದ ೨೫ ತತ್ವಗಳನ್ನು ನಿಷ್ಕ್ರಿಯಗೊಳಿಸಿ ಫಲಪದಗಳನ್ನು ಒದೆದು ನಿರ್ವಯಲ ಕೂಟಕ್ಕೆ ಒಲಿದು ಇಷ್ಟ ಲಿಂಗಪೂಜೆಯಲ್ಲಿ ನಿರತನಾದರೆ ಬ್ರಹ್ಮದಕೂಟ ದೊರೆಯುವುದು. ಅದು ಬಿಟ್ಟು ಲೌಕಿಕದ ಮಾಯಾಬಲೆಯಲ್ಲಿ ಸಿಲುಕಿದರೆ ಮಾನವಶಕ್ತಿಯ ವಿನಾಶವಾಗುತ್ತದೆ ಎನ್ನುತ್ತಾರೆ. ‘ತ್ರಿವಿಧನಷ್ಟ’(೫೬) ಎಂಬ ವಚನದಲ್ಲಿ ತನುಮನಭಾವ ನಷ್ಟದಿಂದ ಜೀವಕ್ಕೆ ಪುನರ್ಜನ್ಮ ಇಲ್ಲವಾಗಿ ಮುಕ್ತಿ ದೊರೆಯುವುದು ಎಂದು ಹೇಳಿದ್ದಾರೆ. ‘ಪ್ರಸಾದ’(೫೭) ಎಂಬ ವಚನದಲ್ಲಿ ಶರಣನು ಸರ್ವಾಂಗದಲ್ಲಿಯೂ ಧರಿಸಿದ ಪ್ರಸಾದಗಳ ವಿವರ ವಿವರವಾಗಿ ಬರುತ್ತದೆ. ಪ್ರಸಿದ್ಧ, ಸಿದ್ಧ, ಶುದ್ಧ, ಆದಿ, ಮಹಾಪ್ರಸಾದಗಳೆಂಬ ಪಂಚಪ್ರಸಾದಗಳನ್ನು ಆಕಾಶ. ಬ್ರಹ್ಮರಂಧ್ರ, ಶಿಖೆ, ತತ್ವ ಎರಡರ ಮೇಲೆ, ಪಶ್ಚಿಮದಲ್ಲಿ ಹೀಗೆ ೫ ಸ್ಥಾನಗಳಲ್ಲಿ ಧರಿಸಿ ದಿವರಾತ್ರಿಯೆನ್ನದೆ ಪೂಜಿಸಿ ಪರಮಾರ್ಥದ ಅರಿವನ್ನು ಶರಣನು ಪಡೆಯುತ್ತಾನೆ. ಅದರಿಂದ ಆತನ ತನು ಮನಧನಗಳು ಪದಾರ್ಥಗಳಾಗಿ ಏಕಚಿತ್ತಭಾವದಲ್ಲಿ ಅವನ್ನು ನಿಷ್ಕಲಬ್ರಹ್ಮಕ್ಕೆ ಸಮರ್ಪಿಸಿ ಅನಿತ್ಯತೆ ನಾಶವಾಗಿ ನಿತ್ಯಸ್ಥಿತಿ ಪಡೆಯುತ್ತಾನೆ. ಮುಂದೆ ಪ್ರತಿಯೊಬ್ಬ ಶರಣನ ಆಚರಣೆಯನ್ನೂ (೫೮), ಸಾಧನಾಪಥದಲ್ಲಿನ ಶರಣನ ಮೊರೆಯನ್ನೂ (೫೯), ಶರಣನ ಬದುಕಿನ ರೀತಿಯನ್ನೂ (೬೦), ಮನುಷ್ಯನ ಕೊನೆಯಿಲ್ಲದ ಆಸೆಗಳು ಅವನನ್ನೇ ನಾಶಪಡಿಸುತ್ತಿರುವುದನ್ನೂ, ಅದರಿಂದ ಅವನನ್ನು ಪಾರುಮಾಡಿ ಲಿಂಗದಲ್ಲಿ ಅವನ ಮನವನ್ನು ನೆಲೆಗೊಳಿಸೆಂದು ಪ್ರಾರ್ಥಿಸುತ್ತಾರೆ(೬೩).

ಭಗವಂತನು ತನ್ನ ಕರಸ್ಥಲದಲ್ಲಿ ಪ್ರಸಾದರೂಪವಾದ್ದರಿಂದ ತನ್ನ ಕಾಯ, ಜೀವ, ಪ್ರಾಣ, ಕರಣೇಂದ್ರಿಯಗಳೆಲ್ಲವೂ ಪ್ರಸಾದವಾದವು(೬೪). ಅಗ್ನಿ ಅಗ್ನಿಯ ಕೂಡಿದರೆ ಬೆಳಗು, ಪರಮಾರ್ಥ ತಿಳಿದ ಪರಮಜ್ಞಾನಿಯ ಜೊತೆ ಸಮ್ಯಗ್‌ಜ್ಞಾನಿ ಸಂಭಾಷಿಸಿದರೆ ತನುಕರಣಮನಗಳು ಸ್ಫಟಿಕದ ಪುತ್ಥಳಿಯಂತೆ ನಿರ್ಮಲ. ಅದೇ ಅಗ್ನಿ ತೃಣದ ಜೊತೆ ಸೇರಿದರೆ ಹೊಗೆ ತೋರುವಂತೆ, ಜ್ಞಾನಿ ಅಜ್ಞಾನಿಯೊಡನೆ ಮಾತನಾಡಿದರೆ ಚೆಲುವಾದ ಹಾಲಿನಲ್ಲಿ ಹುಳಿ ಬೆರಸಿದಂತಾಗುತ್ತದೆ(೬೫). ಸಪ್ತಮಲ, ವ್ಯಸನ, ಮದಗಳು ಮನುಷ್ಯನನ್ನು ಕಾಡುವಾಗ ಭಗವಂತನನ್ನು ಅರಿಯಲಾಗುವುದಿಲ್ಲ. ಆದುದರಿಂದ ಅವುಗಳನ್ನು ಕಳೆದು ಭಗವಂತನನ್ನು ಅರಿಯುವ ಪರಮಭಕ್ತಿಯನ್ನು ನೀಡು(೬೬) ಎನ್ನುತ್ತಾರೆ. ಹೀಗೆ ಈ ವಿಭಾಗದ ಒಂದೊಂದು ವಚನದಲ್ಲಿಯೂ ಆಧ್ಯಾತ್ಮಸಾಧಕನ ಬದುಕಿನ ಸಿದ್ಧಿಯ ತಾತ್ವಿಕ ಸ್ಥಿತಿಗತಿಗಳ ವಿವರಗಳು ಹೆಚ್ಚಾಗಿ ಬರುತ್ತವೆ.

ಹೀಗೆ ಶ್ರೀಘನಲಿಂಗಶಿವಯೋಗಿಗಳವರು ತಮ್ಮ ಸಾಧನೆಯ ಸಿದ್ಧಿಯ ಹಿನ್ನೆಲೆಯಲ್ಲಿ ತಮ್ಮ ಅನುಭಾವದ ತಾತ್ವಿಕ ಚಿಂತನೆಗಳಿಗೆ ತಮ್ಮದೇ ಆದ ವಿಶ್ಲೇಷಣೆಯನ್ನು ನೀಡಿ ಆಧ್ಯಾತ್ಮದ ವಿವಿಧ ನೆಲೆಗಳನ್ನು ವಿವರಿಸಿದ್ದಾರೆ.ಅವರ ಚಿಂತನೆಯು ವೀರಶೈವಧರ್ಮದ ಸಿದ್ಧಾಂತದ ಹಿನ್ನೆಲೆಯಲ್ಲಿ ವೀರಶೈವಧರ್ಮದ ಪರಿಭಾಷೆಯಲ್ಲಿ ನಡೆದಿದೆ. ಹಾಗಾಗಿ ಅವರ ವಚನಗಳ ವಿಶ್ಲೇಷಣೆಯಲ್ಲಿ ವೀರಶೈವಧರ್ಮದ ಶಕ್ತಿವಿಶಿಷಾದ್ವೈತಸಿದ್ಧಾಂತದ ಹಿನ್ನೆಲೆಯಿದೆ.

## ೩.೩. ಆತ್ಮಾವಲೋಕನದ ನೆಲೆಯಲ್ಲಿ ಅನುಭಾವ :

ವಿಶೇಷವಾಗಿ ಅವರ ವಚನಗಳೆಲ್ಲವು ಆತ್ಮಾವಲೋಕನದ ನೆಲೆಯಲ್ಲಿ ಅಭಿವ್ಯಕ್ತವಾಗಿವೆ. ಸುಮಾರು ೧೬ವಚನಗಳು (೧,೨,೩,೪,೫,೬,೮,೧೦,೧೧,೧೨,೧೩,೧೬,೧೭,೧೮,೨೮,೩೪) ನೇರವಾಗಿ ಆತ್ಮಾವಲೋಕನದ ನೆಲೆಯಲ್ಲಿವೆ. ಅದು ಅವರ ಪ್ರಾಮಾಣಿಕತೆಯನ್ನು ಹೇಳುತ್ತಿವೆ. ಅವು ಒಬ್ಬ ಆದರ್ಶನಾದ ಸಾಧಕನಲ್ಲಿ, ಸಿದ್ಧಪುರುಷನಲ್ಲಿ, ಗುರುವಿನಲ್ಲಿ ಇರಬೇಕಾದ ವಿಶೇಷಗುಣ ಎಂದರೆ ಆತ್ಮಾವಲೋಕನವಾಗಿದೆ. ಅದು ಯಥೇಚ್ಛವಾಗಿ ಶ್ರೀಘನಲಿಂಗಶಿವಯೋಗಿಗಳವರಲ್ಲಿ ಕಾಣುತ್ತೇವೆ.

ಶರಣುವೆಣ್ಣಾದ ತನಗೆ ಭಗವಂತನ ಕೃಪಾಪಟಾಕ್ಷ ಒದಗಿಬರಲೆಂದಾಶಿಸುತ್ತಾರೆ(೧). ಮಾನವಲೋಕಕ್ಕೆ ಬಂದ ತಾನು ಕಾಲ, ಕಾಮ, ಭವರಿಗೆ ಸೆರೆಯಾಳಾಗಿರುವೆನು ಶರಣಾದಿ ಪ್ರಮಥರು ಹಾಗ ತೂಕ ಭಕ್ತಿಜ್ಞಾನವೈರಾಗ್ಯ ಲಿಂಗಗಳನ್ನು ತನಗೆ ನೀಡಿ ತನ್ನ ಸೆರೆಯನ್ನು ಬಿಡಿಸಿಕೊಂಡರೆ ತನಗೆ ಚಂದ್ರಾಯುಧ ದೊರೆಕೊಳ್ಳುವುದು. ಅದರ ಸಹಾಯದಿಂದ ಸೆರೆಯನ್ನು ಬಿಡಿಸಿಕೊಂಡು ರತ್ನಾಚಲವನ್ನೇರಿ ಲಿಂಗವನ್ನು ದರ್ಶಿಸಿ ನಿಮ್ಮ ಸೇವಕನಾಗಿರುವೆ(೨) ಸುತ್ತೂರು ಸಿಂಹಾಸನದ ನಂಜಯ್ಯದೇವರ ಕರಕಮಲಸಂಜಾತನಾದ ತನ್ನನ್ನು ತೋಂಟದಾರ್ಯನು ಘನಲಿಂಗಿಯೆಂದು ನಾಮಕರಣ ಮಾಡಿ ಪೋಷಿಸಿ, ಭಗವಂತನೇ ತನಗೆ ನಾನಾಗಬೇಕೆಂದು ಬೇಡಿ ಕಳುಹಲು ಎಮ್ಮವರು ಅವನಿಗೆ ಮಾತುಕೊಟ್ಟರು(೩). ಅಜ್ಞಾನದಿಂದ ಮಾಯೆಯಿಂದ ತನ್ನ ಬದುಕು ಭಗವಂತನ ಕಾಲ್ದುಳಿಯಾಗಿರಲು ತನಗೆ ಸುಜ್ಞಾನವನ್ನು ಕೊಟ್ಟು ರಕ್ಷಿಸು(೪). ತನಗೊಲಿದು ವಿರಕ್ತಿಯೆಂಬ ಶಿವಲಾಂಛನವನ್ನು ಕೊಟ್ಟುದು ನಿಜದ ಒಲವಲ್ಲ; ತಾನು ಭಗವಂತನ ಸುತ್ತಮುತ್ತಲೇ ತಿರುಗುತ್ತಿದ್ದರೂ ಅಂಧಕನಾಗಿದ್ದೇನೆ; ತನ್ನ ತಪ್ಪನ್ನು ಮನ್ನಿಸಿ ಕಾಪಾಡು(೫). ಜ್ಞಾನೋದಯವಾದ ತಾನು ಭವಬಂಧನದಲ್ಲಿ ಬೆಂದು ನಿಲ್ಲಲಾರೆನು. ತನ್ನ ಮೊರೆಯನ್ನು ಲಾಲಿಸು(೬). ತಾನು ಅಜ್ಞಾನದಿಂದ ಅಂತಃಕರಣ ಚತುಷ್ಟಯಗಳಿಗೆ ಬಲಿಯಾಗದೆ ಜ್ಞಾನದಿಂದ ಸ್ವಸ್ವರೂಪವನ್ನು ಅರಿತು ನಡೆಯುವೆನು. ಆದ್ದರಿಂದ ತನಗೆ ಅಭಯನೀಡಿ ತನ್ನ ಭವರಾಟಾಳದ ಋಣವನ್ನು ತಿದ್ದು(೮). ತಾನು ಐಶ್ವರ್ಯದಾಹವನ್ನು ನಿಯಂತ್ರಿಸಿಕೊಂಡಿರುವೆನು. ಆ ಬಗೆಗೆ ಆತ್ಮಪರೀಕ್ಷೆಗೂ ತಾನು ಸಿದ್ಧನಿದ್ದೇನೆ (೧೦).

ಭಗವಂತನ ಕರುಣೆಯಿಂದ ತಾನು ಶರಣಸತಿ ಲಿಂಗಪತಿಯಾಗಿ ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಭಗವಂತನ ಪರಮಪತಿವ್ರತೆಯಾಗಿಯೇ ಇರುವೆನೆಂಬ ಭಾಷೆ ತನ್ನದು,(೧೧) ಅದರಲ್ಲಿ ತನ್ನ ನಡೆನುಡಿ ಎರಡಾಗದಂತೆ ನಡೆಸೆಂಬ ಪ್ರಾರ್ಥನೆ,(೧೨) ಕಾಲ ಕಾಮರನ್ನು ಗೆಲ್ಲುವ ಸಂಕಲ್ಪ ತನ್ನದು,(೧೩) ಪಂಚೇಂದ್ರಿಯಗಳಲ್ಲಿ, ತನುಮನಧನಗಳಲ್ಲಿ ಅನವರತ ಪರಬ್ರಹ್ಮನನ್ನು ಅಗಲದಿರುವ ತನ್ನ ಸಮ್ಯಕ್‌ಜ್ಞಾನದಿಂದ ಶಿವಪ್ರಸಾದವನ್ನು ತಾನು ಕರಪಾತ್ರೆಯಲ್ಲಿ ಸ್ವೀಕರಿಸುವೆನೆಂಬ ಬಿರುದಿಗೆ ತಪ್ಪದೆ ನಡೆದುಕೊಳ್ಳುವೆನೆಂಬ ಸಂಕಲ್ಪ,(೧೬) ತನ್ನಂತೆ ಭಕ್ತಿಜ್ಞಾನ ವೈರಾಗ್ಯವನ್ನು ಅತ್ಯಂತ ಕಟ್ಟುನಿಟ್ಟಾಗಿ ಆಚರಿಸುವವರಿಗೆ ಮಾತ್ರಾ ಅದು ಅಳವಡುವುದು, ಉಳಿದವರಿಗೆ ಅದು ಅಳವಡುವುದಿಲ್ಲ,(೧೭) ಅಂಗಭೋಗ ಅನರ್ಪಿತ ಲಿಂಗಭೋಗ ಪ್ರಸಾದವೆಂಬ ತತ್ವಕ್ಕೆ ತಾನು ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಬದ್ಧನಾಗಿರುವೆನು. ಅದನ್ನು ಮೀರಿಹೋಗಿ ನರಕ ಪಡೆಯುವುದಿಲ್ಲ,(೧೮) ತಮ್ಮ ಅಂತರಂಗದಲ್ಲಿ ಹುಟ್ಟಿದ ಕುಮಂತ್ರ, ಜಾಗ್ರದವಸ್ಥೆಯಲ್ಲಿ ಅಡಗದ ಜಿಹ್ವಾಲಂಪತನ, ಸ್ವಪ್ನಾವಸ್ಥೆಯಲ್ಲಿ ದುರ್ವಿಕಾರ, ಸುಷುಪ್ತಿಯಲ್ಲಿ ಕನಸಿನ ಸ್ತ್ರೀಯೊಡನಾಟ ಇವುಗಳಿಂದ ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗಪೂಜೆ ಇಲ್ಲವಾಗಿದೆ. ಹೀಗೆ ದುರ್ಗುಣಗಳನ್ನು ಮರೆಮಾಡಿಕೊಂಡು ನುಡಿದಂತೆ ನಡೆಯದೆ, ನಡೆದಂತೆ ನುಡಿಯದೆ ಡಾಂಭಿಕನಾಗಿ ನಿನ್ನನ್ನು ಸ್ತುತಿಸಿದರೆ ಪ್ರಯೋಜನವಿಲ್ಲ ಆದುದರಿಂದ ಅವಸ್ಥಾತ್ರಯಗಳಲ್ಲಿ ತನ್ನ ಮನದ ಕಾಳಿಕೆಯನ್ನು ಕಳೆದು ಪರಿಶುದ್ಧನನ್ನಾಗಿ.(೨೮) ತಾನು ಕರಪಾತ್ರನಾದ ಕಾರಣ ಭಕ್ತನು ತನಗೆ ಅಂಬಲಿಯನ್ನೇ ಕೊಟ್ಟರೂ ಕೊಟ್ಟವ ನೀನೆಂದು ಸ್ವಲ್ಪವೂ ಬೇಸರಿಸದೆ ಸ್ವೀಕರಿಸುವೆನು. ತನಗೆ ಮಾನವರ ಹಂಗಿಲ್ಲ(೩೪). ಎಂದು ಪರಿಪರಿಯಾಗಿ ತಮ್ಮನ್ನು ತಾವೇ ಆತ್ಮಾವಲೋಕನ ಮಾಡಿಕೊಳ್ಳುತ್ತಾ ತಾವು ಸನ್ಮಾರ್ಗದಲ್ಲಿ ನಡೆಯಬೇಕೆಂಬ ಸಂಕಲ್ಪವನ್ನು ತೊಟ್ಟಿರುವ ಈ ಪ್ರಕ್ರಿಯೆ ಶ್ರೇಷ್ಠ ಸಂತರ ಲಕ್ಷಣವಾಗಿದೆ.

ಹೀಗೆ ಆತ್ಮಾವಲೋಕನದಿಂದ ಪರಿಶುದ್ಧಗೊಂಡ ಸಾಧಕನ ಮನಸ್ಸು ಹಲವು ತತ್ವಗಳ ಬಗೆಗೆ ಸರಿದಾರಿಯನ್ನು ಕಂಡುಕೊಂಡು ಆ ದಾರಿಯಲ್ಲಿ ನಡೆಯಬೇಕೆಂಬ ಸಂಕಲ್ಪ ರೀತಿಯ ಅರಿವು ಮೂಡುವ ಭಾವ ಮುಂದಿನ ಹಂತ.ಅದು ತಾಯಿಯ ಸಾಂತ್ವನದ ರೀತಿಯ ವಚನಗಳಾಗಿವೆ. ಅಂತಹ ಸುಮಾರು ವಚನಗಳು ಅವರಲ್ಲಿ ಇವೆ. ನಿತ್ಯ ಅನಿತ್ಯವು ಎರಡಿಲ್ಲದಂತೆ ಭೋಗವೆಂಬ ಸೂಜಿಯಲ್ಲಿ ಒಂದಾಗಿ ಬೆರೆತುಹೋಗಿದೆ.ಅದನ್ನು ಬೇರ್ಪಡಿಸಲು ಭೋಗವೆಂಬ ಸೂಜಿ ಮುರಿಯಬೇಕು. ಹುಟ್ಟಿನ ಕಾರಣ, ಮೋಕ್ಷಕ್ಕೆ ದಾರಿ

ಎರಡೂ ತನ್ನಿಂದಲೇ. ಆತ್ಮೋದ್ಧಾರವೆಂಬುದು ತನ್ನಿಂದಲೇ ಹೊರತು ಅನ್ಯರಿಂದ ಸಾಧ್ಯವಿಲ್ಲ ಎಂಬ ಅರಿವನ್ನು ಪಡೆಯಬೇಕು.(೧೪) ದ್ವೈತಿಗಳು ಹೇಳುವಂತೆ ಜೀವಶಿವರ ಏಕತೆ ಸಾಧ್ಯವಿಲ್ಲವೆಂಬ ಮಾತು ಸರಿಯಲ್ಲ. ಆತ್ಮನಿಗೆ ಮಲ ಮಾಯಾಕರ್ಮಗಳಿಲ್ಲವಾದ ಕಾರಣ ಆತನೂ ಪರಶಿವನೇ ಆಗುತ್ತಾನೆ.(೧೫) ವಿರತಿಯ ಹೊಲಬನರಿಯದೆ ಹಲವು ಹತ್ತು ನಿಯಮಗಳಲ್ಲಿ ಅದನ್ನು ಹುದುಗಿಸಿರುವುದು ಸರಿಯಲ್ಲ; ಈ ಬಾಹ್ಯ ವ್ಯರ್ಥ ನಿಯಮಗಳಿಂದ ದೂರಾಗಿ ಮುಕ್ತಿಪಥ ತೋರುವ ವಿರತಿಯು ಷಟ್ಸ್ಥಲಮಾರ್ಗಿಯಾಗಿ ವ್ರತ ನಿಷ್ಠೆಯಿಂದ ನಡೆದು ಹಾಗೂ ಮದ, ದಶ ವಾಯುಗಳನ್ನು ನಾಶಮಾಡಿ ಸರ್ವಾಂಗಲಿಂಗಿಯಾಗಿ ಪೂಜಿಸಿ ಜೀವನ್ಮು ನಿರವಿರಕ್ತಿಯನ್ನು ಪಡೆಯುವುದೇ(೨೦).

ಸಾಧಕರಾಗಿ ತಾವು ವೇಷಧಾರಿ, ಡಂಭಾಚಾರಿ, ಸಾಧಕರನ್ನು ಕುರಿತು ಆಡುವ ಮಾತುಗಳು ಅಲಗಿನಮೊನೆಯಂತೆ ಇರಿಯುತ್ತವೆ(೨೩). ಎಂದು ಹೇಳುವ ಮೂಲಕ ತಮ್ಮ ಅಭಿಪ್ರಾಯಗಳು ಇದ್ದುದನ್ನು ಇದ್ದಂತೆ ಹೇಳುವ ಕಠೋರ ನುಡಿಗಳಾಗಿವೆ ಎಂದು ತಿಳಿಸಿದ್ದಾರೆ. ಇದು ಅವರ ವ್ಯಕ್ತಿತ್ವದ ವೈಶಿಷ್ಟ್ಯವಾಗಿದೆ ಆತ್ಮನಿಗೆ ಅಜ್ಞಾನದಲ್ಲಿ ಲೌಕಿಕಭವದಲ್ಲಿನ ಹುಟ್ಟು, ಬಾಳು, ಸಾವೇ ಆದಿಮಧ್ಯಅವಸಾನವಾಗಿದೆ; ಜ್ಞಾನಿಗೆ ಭಗವಂತನ ಸ್ವರೂಪ ತಾನೆಂಬ ಭಾವ, ಇಷ್ಟ ಲಿಂಗಾನಿಷ್ಠನಾಗುವ ಬಾಳು, ಪರಬ್ರಹ್ಮಕ್ಕೆ ಸರ್ವಾರ್ಪಣ ಮಾಡುವುದೇ ಆದಿಮಧ್ಯಅವಸಾನವಾಗುವುದು(೭); ಜೀವದ ಸಹಜಸ್ವರೂಪದಿಂದ ಅದು ನಾಶವಾಗುವುದು. ಆಗ ಉಂಟಾದ ಜ್ಞಾನೋದಯದಿಂದ ಭಕ್ತಿಮಾರ್ಗದಲ್ಲಿ ನಡೆದಾಗ ಅದು ಉದ್ಧಾರವಾಗುವುದ(೯).

ಹೊನ್ನು ಹೆಣ್ಣು ಮಣ್ಣುಗಳನ್ನು ಬಿಟ್ಟಾತ ವಿರಕ್ತನೆನ್ನುವರು. ಆದರೆ ಅವು ಮನುಷ್ಯರನ್ನು ತಿಂದು ತೇಗುತ್ತಿವೆ. ಅವುಗಳನ್ನು ಗೆಲ್ಲುವೆನೆಂದು ಅವುಗಳಿಂದ ದೂರ ಇದ್ದಾಕ್ಷಣ ವಿರಕ್ತನಾಗುವುದಿಲ್ಲ; ತಾಯಿಯ ಗರ್ಭದಲ್ಲಿನ ಮಗು ವಿರಕ್ತನಂತಿದ್ದರೂ ಅದಕ್ಕೆ ಮೋಕ್ಷವಿಲ್ಲ, ಯಾರು ಮಾತು, ಮನಸ್ಸು, ಅರಿವಿನಲ್ಲಿ ಲಿಂಗಮುಖಿಯಾಗಿ ವರ್ತಿಸುವರೋ ಅವರೇ ನಿಜವಾದ ವಿರಕ್ತರು. ವಿರಕ್ತಿಯೆಂಬುದು ಬಹಿರಂಗದ ಆಚರಣೆಗಳಲ್ಲಿಲ್ಲ; ಅಂತರಂಗದ ಅರಿವಿನ ನಡವಳಿಕೆಯಲ್ಲಿದೆ. ಅಂತಹ ವಿರಕ್ತಿಯನ್ನು ತನಗೆ ದಯಪಾಲಿಸಲಿ(೧೯).

ಏಕಲಿಂಗ ನಿಷ್ಠಾಪರನಾದ ವಿರಕ್ತನು ಹಲವಾರು ಬಗೆಯ ಆಚರಣೆಗಳಿಂದ ನಿರ್ವಾಣಪದವಿ ಪಡೆಯುವನು(೨೧). ಶಿವಶರಣನಿಗೆ ನಿಜೈಕ್ಯಪದವಿ ದೊರೆಯಬೇಕಾದರೆ ಸ್ವಾನುಭಾವಿಯಾಗಿ ಅರಿವಿನಿಂದ ಮಲತ್ರಯಗಳನ್ನು ಭೋಗ–ಭುಕ್ತಿಗಳನ್ನು ತ್ಯಜಿಸಿ, ಬಂಧುವರ್ಗ, ಉಪಾಧಿಕೆ, ಒಡಲಾಶೆಗಳನ್ನು ಇಲ್ಲವಾಗಿಸಿ, ಅಹಂಕಾರ ಮಮಕಾರಗಳನ್ನು ಕೆಡಿಸಿ ಜ್ಞಾನಕ್ರೀಯಗಳಲ್ಲಿ ದೃಢವಾಗಿ ತನು ಮನಗಳು ಲಿಂಗಮುಖಿಯಾಗಿ ಆತ್ಮವಿದ್ಯೆಯಲ್ಲಿ ತೊಡಗಿ ಘನಲಿಂಗದ ಬೆಳಗಿನಲ್ಲಿ ಮಿಂದು ನಾದದಲ್ಲಿ ಒಡಗೂಡಿ ಶಿವತತ್ವ ಜ್ಞಾನಿಯದರಷ್ಟೇ ಸಾಲದು; ಕೊನೆಉಸಿರಿನತನಕ ಶರಣ ಕ್ರಿಯಾನಿಷ್ಠನಾಗಿರಬೇಕು. ಆಗ ಮಾತ್ರ ಹರನಲ್ಲಿ ಸಮರಸನಾಗುವನು(೨೨). ಜ್ಞಾನಕ್ಕೆ ತಕ್ಕ ಆಚರಣೆ ಬೇಕು, ಇಲ್ಲದಿದ್ದರೆ ಅದರಿಂದ ಪ್ರಯೋಜನವಾಗುವುದಿಲ್ಲ. ಭಕ್ತರಾಗಲೀ ವಿರಕ್ತರಾಗಲೀ ಅವರಲ್ಲಿ ಆಚರಣೆಯೇ ಮುಖ್ಯ. ಅದಿಲ್ಲದಿದ್ದರೆ ಬರಿಯ ಜ್ಞಾನದಿಂದ ಪ್ರಯೋಜನವಾಗುವುದಿಲ್ಲ(೨೩). ಪರಬ್ರಹ್ಮವಾಗಲು ಮುಕ್ತಿಯ ಪುರದ ಗುಪ್ತಮಾರ್ಗವೆಂದರೆ ಜೀವಾತ್ಮನು ಯೋಗಮಾರ್ಗದಲ್ಲಿ ಭಕ್ತಿಯಿಂದ ಅನಾಹತಚಕ್ರದಿಂದ ಸಹಸ್ರಾರದವರೆಗೆ ನಡೆಸುವ ಯೌಗಿಕಸಾಹಸಮಯ ಯಾತ್ರೆಯಾಗಿದೆ(೪೫).

ಗುರುಕೊಟ್ಟ ಇಷ್ಟಲಿಂಗದಲ್ಲಿ ಅನುಸಂಧಾನವನ್ನು ಮಾಡುವುದೇ ಮುಕ್ತಿ, ಅದು ಬಿಟ್ಟು ಬರಿದೆ ಪರಿತಪಿಸಿದರೆ ಪ್ರಯೋಜನವಿಲ್ಲಾ(೫೨). ಸ್ಥೂಲತನುವಿನ ಮೇಲಿನ ಇಷ್ಟಲಿಂಗವನ್ನು ಪೂಜಿಸಿ ಹೊನ್ನುಹೆಣ್ಣುಮಣ್ಣುಗಳ ವ್ಯಾಮೋಹವನ್ನು ಬಿಡುವುದೇ ಇಷ್ಟಲಿಂಗಪೂಜೆ. ಸೂಕ್ಷ್ಮತನುವಿನ ಪ್ರಾಣಲಿಂಗಕ್ಕೆ ಮನವನ್ನು ಸಮರ್ಪಿಸಿ ಭಾವಪುಷ್ಪದಿಂದ ಪೂಜಿಸಿ ಅಂತಃಕರಣಗಳನ್ನು ಸುಡುವುದೇ ಪ್ರಾಣಲಿಂಗಪೂಜೆ; ಕಾರಣತನುವಿನ ಭಾವಲಿಂಗಕ್ಕೆ ಸಂತೋಷವನ್ನರ್ಪಿಸಿ ಪೂಜಿಸಿ ಜ್ಞಾನಕ್ರೀಗಳು ಅಳಿದುದೇ ಭಾವಲಿಂಗಪೂಜೆ. ಇದರಿಂದ ಶಿವನೊಲಿಯಲಿ(೫೧). ಜ್ಞಾನಕ್ರಿಯಾಶೀಲನಾದವನಿಗೆ ಲಿಂಗೋಪಾಸನೆಯನ್ನು ತಿಳಿಯದೆ ಕೇವಲ ಜ್ಞಾನಕ್ರೀಗಳಿಂದ ಪೂಜಿಸಿ ಲಿಂಗಾಂಗಸಾಮರಸ್ಯದ ಐಕ್ಯಸ್ಥಿತಿಯನ್ನು ಪಡೆಯದೆ ಸರ್ವಾಂಗಲಿಂಗಿಯಾಗದೆ ತಾವೇ ಜ್ಞಾನಿಗಳೆಂದು ಮೆರೆಯುವ ಅಜ್ಞಾನಿಗಳನ್ನು ನೋಡಲಾರೆ(೫೩). ಪಂಚವಿಂಶತಿ ತತ್ವಗಳಿಂದಾದ ಈ ದೇಹವನ್ನು ಲಿಂಗದ ನೋಟದ ಕಡೆಗೆ ತಿರುಗಿಸಿ ಬ್ರಹ್ಮದ ನೋಟವಾಗಿಸಿಕೊಳ್ಳಬೇಕು. ಅದಕ್ಕೆ ವಿರುದ್ಧವಾಗಿ ಪಂಚಭೂತಗಳ ಕುಟಿಲತೆಗೆ ಸಿಲುಕಿದರೆ ನಾಶವಾಗುವನು(೫೪). ಭೂತಳದ ವರ್ತಮಾನಕ್ಕೆ ಹೇಸಿ ಬಾಹ್ಯದಾಸೋಹವನ್ನು ಬಿಟ್ಟು ದೇಹ ಮನಭಾವಗಳನ್ನೇ ಅರ್ಪಿಸುವ ನಿರ್ವಾಣದಾಸೋಹವನ್ನು ಸ್ವೀಕರಿಸಿ ಬದುಕಿರುವುದಾಗಿ ಹೇಳಿದ್ದಾರೆ(೫೫). ನಿರಾಕಾರನಾದ ಪರಶಿವನನ್ನು ಒಲಿಸಿಕೊಳ್ಳಬೇಕಾದರೆ

ಮೊದಲು ಅವನ ಸಾಕಾರರೂಪವಾದ ಇಷ್ಟಲಿಂಗವನ್ನು ಉಪಾಸಿಸಬೇಕು.ಪರಶಿವನೇ ಬೇರೇ ಇಷ್ಟಲಿಂಗವೇ ಬೇರೆಂದು ಅಲ್ಲಗಳೆಯಬಾರದು.ಕಾಣುವುದನ್ನು ಉಪಾಸಿಸುವ ಮೂಲಕ ಕಾಣುದುದನ್ನು ಕಾಣಬೇಕು.ಇಷ್ಟಲಿಂಗವೇ ಸ್ಥೂಲ ಸೂಕ್ಷ್ಮ ಕಾರಣತನುಗಳಲ್ಲಿ ಪ್ರಾಣಲಿಂಗ ಭಾವಲಿಂಗವಾಗಿ ಉಪಾಸಿಸಲ್ಪಡುತ್ತದೆ. ಇದನ್ನರಿಯದವರು ಕಾಲಕಾಮರಿಗೆ ತುತ್ತಾಗಿ ನಾಶವಾಗವರು(೨೪).

ಶಿವಶರಣರ ಮಹಿಮೆಯ ಬಗ್ಗೆ ಪೂಜ್ಯಭಾವದಿಂದಿರಿ; ದೂಷಣೆಬೇಡವೆಂದು ಸ್ವಧರ್ಮೀಯರನ್ನೂ ಪರಧರ್ಮೀಯರನ್ನೂ ಎಚ್ಚರಿಸಿದ್ದಾರೆ. ಅಂತಹ ಖೂಳಮಾನವರನ್ನು ತನಗೆ ತೋರಬೇಡವೆಂದಿದ್ದಾರೆ(೨೫). ಮಾಯೆಗೇ ಅಧೀನರಾಗಿರುವ ಜನ ಮಾಯೆಯನ್ನು ಗೆದ್ದ ಮಹಾತ್ಮರಂತೆ ವೇಷಹಾಕಿಕೊಂಡು ಸಮಾಜವನ್ನು ಶೋಷಿಸುತ್ತಿರುವ ವಿಚಾರವನ್ನು ಎತ್ತಿದ ಧ್ವನಿಯಲ್ಲಿ ಕೋಪ, ತಿರಸ್ಕಾರ, ವ್ಯಂಗ್ಯ, ಆಗ್ರಹ, ವಿಡಂಬನೆಗಳಿಂದ ಹೇಳಿದ್ದಾರೆ(೨೬). ದ್ವೈತ ಅದ್ವೈತವನ್ನು ಮೀರಿ ಅಂಗ ಲಿಂಗದ ಹೊಲಬನ್ನು ಅರಿತು ಸ್ವಯಲಿಂಗಿಯಾದ ಶರಣನನ್ನು ಜರಿದರೆ ಅದರಿಂದ ಶರಣನಿಗೇನೂ ಬಾಧೆ ತಟ್ಟದು(೪೨). ಜ್ಞಾನಕ್ರಿಯಾ ಮಾರ್ಗಿಗಳಾದ ಅಂಗಲಿಂಗರು ಮುಕ್ತಿಯಪುರಕ್ಕೆ ಹೋಗುವ ಗುಪ್ತಮಾರ್ಗವನ್ನು ಅತ್ಯಂತ ಸುದೀರ್ಘವಾಗಿ ಹೇಳಿದ್ದಾರೆ.

ದಾರಿಯಿಲ್ಲದ ಇದಕ್ಕೆ ನೀನೇ ದಾರಿಮಾಡಿಕೊಂಡು ಪಂಚಭೌತಿಕ ದೇಹದೊಳಗೆ ನಡೆದು ಅಹಂಕಾರ ಮಮಕಾರಗಳನ್ನು ಪ್ರಜ್ಞಾಪೂರ್ವಕವಾಗಿ ದಾಟಿ ನಡೆದಾಗ ಭಕ್ತಿಪುರ ತಲುಪುತ್ತಾನೆ. ಈ ದೇಹದಲ್ಲಿನ ಮಡಿಸಿದ ಪ್ರಾಣಿಗಳನ್ನೆಲ್ಲಾ ದಾಟಿ ಹೃದಯಸ್ಥಾನಕ್ಕೆ ಬಂದರೆ ಸುಂದರ ಮಾನಸಸರೋವರವಿದೆ. ಮುಕ್ತಿಗಾಗಿ ಆಧಾರ, ಸ್ವಾದಿಷ್ಠಾನ, ಮಣಿಪೂರಕ, ವಿಶುದ್ಧಿ, ಆಜ್ಞಾ, ಅಹಸ್ರಾರ ಚಕ್ರದವರೆಗೆ ಶಿಖಾ ಮತ್ತು ಪಶ್ಚಿಮ ಚಕ್ರವೂ ಸೇರಿದಂತೆ ನಡೆಯುವ ಯೌಗಿಕ ಪ್ರಕ್ರಿಯೆಯಲ್ಲಿ ಸಾಗಿ ಬರಲು ದೇಹಪ್ರಾಣಗಳೇ ನಿವೃತ್ತಿ ಮಾರ್ಗದಿಂದ ತನು–ಮನ–ಭಾವ–ನಿರಾಕಾರ–ಪರಮನು ತಾನೇ ಆಗುವುದು, ಹೀಗೆ ಈ ತ್ರಿವಿಧನಷ್ಟದಿಂದ ಪರಶಿವನೇ ತಾನಾಗುವನು(೫೬). ಪದಾರ್ಥಗಳು ಪ್ರಸಾದವಾಗಬೇಕು. ಆಗ ಜೀವಕ್ಕೆ ನಿತ್ಯತ್ವ ಲಭಿಸುತ್ತದೆ(೫೭) ಬೆಡಗಿನ ಭಾಷೆಯಲ್ಲಿ ಮುನ್ನ ಹುಟ್ಟಿದ ಅರಿಷಡ್ವರ್ಗ, ತಾಪತ್ರಯಗಳೆಂಬ ಒಂಬತ್ತು ಮಕ್ಕಳಾಗುವುವೆಂಬ ಗಂಡನಿಂದ ಬಿಡುಗಡೆ ಪಡೆಯಲು ಕೈಕಾಲಿಲ್ಲದ ಮೋಟಂಗೆ ಮೆಚ್ಚಿ ಅವನಿಂದ ಪಡೆದ ಮಗುವಿನಿಂದ ಅಂದರೆ ಮುಕ್ತಿಗೆ ಕಾತರನಾಗಿರುವ ನಿಶ್ಕಲ ಸದ್ಗುರುವೊಬ್ಬನಿಂದ ಇಷ್ಟಲಿಂಗವನ್ನು ಪಡೆದರೆ ಅವರೆಲ್ಲರಿಂದ ಮೋಕ್ಷವನ್ನು ಪಡೆಯಬಹುದೆಂಬ ಅರ್ಥವಿದೆ(೫೯). ಬೆಡಗಿನ ಪರಿಭಾಷೆಯಲ್ಲಿ ಮತ್ತೊಂದು ವಚನ ಹೀಗಿದೆ: ಶಿವನ ಹೊಟ್ಟೆಯಲ್ಲಿ ಹುಟ್ಟಿದ ಚಿತ್‌ಶಕ್ತಿಯ ಮಗನಾದ ತಾನು ತಮ್ಮ ತಂಗಿಯರಾದ ಜ್ಞಾನಶಕ್ತಿ ಕ್ರಿಯಾಶಕ್ತಿಯರು ತನ್ನ ಹೆಂಡಿರಾಗಲು ನನ್ನನ್ನೇ ಹೆಣ್ಣುಮಾಡಿ ನಮ್ಮತಂದೆಗೇ ಕೊಟ್ಟು ಮದುವೆ ಮಾಡಿದರು. ನನ್ನ ಗಂಡ ಒಲಿಯಲಿ ಬಿಡಲಿ ತಾಯಿಯಿಂದಲೇ ಸೈಎನ್ನಿಸಕೊಳ್ಳುವಂತೆ ಒಗೆತನವ ಮಾಡುವೆ ಎನ್ನುತ್ತಾರೆ(೬೦). ತತ್ವಗ್ರಂಥಗಳನ್ನು ಓದುವುದರಿಂದಾಗಲೀ, ವೇಷ ಹಾಕಿದ ಮಾತ್ರದಿಂದಾಗಲೀ ವಿಷಯಲಂಪಟರು ನಿಜವಿರಕ್ತರಿಗಿಂತಲೂ ಮಿಗಿಲಾಗಿ ಮೆರೆಯುತ್ತಾರೆ ಇಂತಹ ಕಾಳುಮೂಳರಿಗೆಲ್ಲಾ ವಿರಕ್ತಿ ಇರುವುದಿಲ್ಲ.(೬೧). ಜನಜೀವನ ಹಸನಾಗಲೆಂದು ಶರಣನ ೧೪ ಆಚರಣೆಯನ್ನು ಪಟ್ಟಿಮಾಡಿದ್ದಾರೆ(೫೮). ಇವೆಲ್ಲವೂ ತಾಯಿಯ ಸಾಂತ್ವನದ ಧಾಟಿಯ ವಚನಗಳಾಗಿವೆ.

ªÀÄÄAzÉzÀzÀPÀdÝPÀdÝPÀd ªÀdÝPÀÓzÀPÀ ಮುಂದೆ §UÀºÀUವೈದ್ಯರ ನಿರ್ದಾಕ್ಷಿಣ್ಯ ಧೋರಣೆಯಂತೆ ಶ್ರೀಘನಲಿಂಗದೇವರ ನುಡಿಗಳು ಕೆಲವು ವಚನಗಳಲ್ಲಿವೆ. ನಶ್ವರಭವದಲ್ಲಿಯೇ ಹಲವು ತೊಂದರೆಗಳ ನಡುವೆಯೂ ಸುಖಿಸುವವರನ್ನು ಅಜ್ಞಾನಿ ನರಕುರಿಗಳೆನ್ನುತ್ತಾರೆ(೨೭) ಮೂರ್ಖೈದು ತನುವಿಡಿದ ಅಜ್ಞಾನಿ ನರಕುರಿಗಳೆಲ್ಲಾ ಭಕ್ತರಲ್ಲ(೩೩) ಲಿಂಗಾಂಗ ಸಂಧಾನಿಗಳೇ ಲಿಂಗದ ಬೆಳಕ ನೀಡಬಲ್ಲರಲ್ಲದೆ ವೇಷಧಾರಿಗಳು ನೀಡಲಾರರು(೩೬). ಮನಬಂದ ಪರಿಯಲ್ಲಿ ಎಚ್ಚಾಡುವಾತ ಅರ್ತಿಕಾರನಲ್ಲದೆ ಬಿಲ್ಲುಗಾರನಲ್ಲ. ವೇಷಧಾರೀ ವಿರಕ್ತ ಹೆಸರಿಗಷ್ಟೇ ವಿರಕ್ತನಲ್ಲದೆ ಲಿಂಗಸಂಧಾನಿಯಲ್ಲ(೩೭). ಕನ್ನವನ್ನಿಕ್ಕಿ ಹಾದರವನ್ನು ಮಾಡಿ ಗಾಣವನ್ನು ಹಾಕಿ ತಂದು ಜಂಗಮಾರ್ಚನೆ ಮಾಡುವುದು ಸದಾಚಾರವೇ ಎಂದು ಪ್ರಶ್ನಿಸಿ ಅವರ ನಿಷ್ಠೆಯನ್ನು ಒಪ್ಪಿಕೊಳ್ಳುತ್ತಾರೆ. ಹಿಡಿದುದನ್ನು ಬಿಡದೆ ಕಡೆತನಕ ಮಾಡುವುದೇ ಸದಾಚಾರ ಶರಣಸ್ಥಲ(೪೦), ಷಟ್ಸ್ಥಲದ ಐಕ್ಯಸ್ಥಿತಿಯ ಜೀವನ್ಮುಕ್ತನು ಪ್ರತ್ಯಕ್ಷ ಜ್ಞಾನವನ್ನು ಪ್ರಮಾಣಿಸಿ ಅನುಭವಮಂಟಪದಲ್ಲಿ ಒರೆಗೆ ಹಚ್ಚಿ ನಿರ್ಣಯಿಸಬೇಕು. ಹಾಗಿಲ್ಲದಿದ್ದರೆ ಕುರುಡರು ಆನೆ ಮುಟ್ಟಿದಂತಾಗುತ್ತದೆ.(೪೧), ಶರಣರ ಮನೋಮಧ್ಯದಲ್ಲಿನ ಶಿವನು ವಚನಾಮೃತವನ್ನು ಹರಿಸಲು ಆತ ಪರಿಪೂರ್ಣ ದ್ವೈತಿ ಅದ್ವೈತಿಯಾಗಿರುವನೇ ಹೊರತು ವಿರಕ್ತರೆಂದು ಕರೆಸಿಕೊಂಡವರೆಲ್ಲಾ ವಿರಕ್ತರಲ್ಲ. ತತ್ತ್ವಂ ಅಸಿಪದನಾಗಿ ಜ್ಞಾತೃಜ್ಞಾನ, ಜ್ಞೇಯವನ್ನೊಂದು ಮಾಡಿ ಪರಬ್ರಹ್ಮಸ್ವರೂಪನಾಗಿ ಜಾಗೃತಸ್ವಪ್ನ ಸುಷುಪ್ತಯಲ್ಲೂ ಹಸಿವು ತೃಷೆಗಳ ಸುಟ್ಟರುಹಿದಾತರೇ ವಿರಕ್ತರು(೪೪) ಎಂದು ಖಡಕ್ ಆಗಿ ತಮ್ಮ ಧೋರಣೆಗಳನ್ನು ಅಭಿವ್ಯಕ್ತಪಡಿಸಿದ್ದಾರೆ .

ಮುಂದೆ ಭಕ್ತನಾಗಿ ತನ್ನ ತಳವಳಗಳನ್ನು, ಸಾಧನೆ ಸಿದ್ಧಿಗಳನ್ನು ವಿವರಿಸುತ್ತಾರೆ. ಭಗವಂತನಿಗೆ ತಾನು ವಧುವಾದನೆಂದು ಹೇಳುತ್ತಾರೆ(೬೨) ಮುಕ್ತಿಗಾಗಿ ಹಂಬಲಿಸುವ ತಾನು ಪಂಚೇಂದ್ರಿಯಗಳ ದಾಸನಾಗಿ ನಾಶವಾಗುತ್ತಿರುವೆನು ತನ್ನ ಮನಸ್ಸನ್ನು ಲಿಂಗದಲ್ಲಿ ನೆಲೆಸುವಂತೆ ಮಾಡು(೬೩) ಎಂದು ಪ್ರಾರ್ಥಿಸುತ್ತಾರೆ. ಭಗವಂತನ ಅನುಗ್ರಹದಿಂದ ತನ್ನ ಸರ್ವಾಂಗವೂ ಪ್ರಸಾದವಾಯಿತ್ತೆನ್ನುತ್ತಾರೆ(೬೪), ಜ್ಞಾನಿ ಅಜ್ಞಾನಿಯ ಜೊತೆ ಸಂಭಾಷಿದರೆ ಹಾಲಿನೊಳಗೆ ಹುಳಿ ಬೆರೆಸಿದಂತಾಗುವುದು(೬೫), ತನ್ನನ್ನು ಕಡುತ್ತಿರುವ ಸಪ್ತಮಲವ್ಯಸನ ಮದಗಳನ್ನು ಪರಮಭಕ್ತಿಯನ್ನು ದಯಪಾಲಿಸಯ್ಯ(೬೬) ಎಂದು ಹೇಳುತ್ತಾ, ಶರಣರ ವಚನ ಪರಮಾಮೃತವನ್ನು ದಣಿಯಲುಂಡು ತನುತ್ರಯಗಳಲ್ಲಿ ತ್ರಿಲಿಂಗಗಳನ್ನು ಪೂಜಿಸಿ ಸುಖಿಸಿದ ಶರಣನಿಗೆ ಮತ್ತೆ ವಚನಗಳ ಹಂಗಿಲ್ಲ(೨೯). ತಾವು ಹೆಣ್ಣು, ಹೊನ್ನು, ಮಣ್ಣು ಬಿಟ್ಟು ಷಟ್ಸ್ಥಲ ಷಡ್ಲಿಂಗಗಳನ್ನು ಪಡೆದು ತ್ರಿಮೂರ್ತಿಗಳನ್ನು ಗೆದ್ದು ಅರಿಷಡ್ವರ್ಗಗಳನ್ನು ಬಿಟ್ಟು ಗುರುಲಿಂಗಜಂಗಮರನ್ನು ಕಂಡು ಸಾಧನೆಮಾಡಿ ಸಿದ್ಧಿಯನ್ನು ಪಡೆದೆನು(೩೦). ಮೂರು ಪ್ರಪಂಚಿನ ಬಲೆಗೆ ಸಿಲುಕದೆ ಧ್ಯಾನ ಮೌನ ಉಸ್ತಿಯಿಂದ ಯೋಗದ ಪಶ್ಚಿಮಚಕ್ರ ಶಾಂಭವದ್ವೀಪವನ್ನು ಪಡೆದೆನು(೩೧).

ಇಷ್ಟಲಿಂಗದ ದೀಕ್ಷೆಯಿಂದ ಹೊನ್ನು, ಹೆಣ್ಣು, ಮಣ್ಣನ್ನು ತ್ಯಜಿಸಿ ತ್ಯಾಗಾಂಗಿಯಾದೆನು.ಅದರ ಪೂಜಾಬಲದಿಂದ ಪ್ರಾಣಲಿಂಗವನ್ನು ಅರ್ಚಿಸಿ ಭೋಗಾಂಗಿಯಾದೆನು. ಭಾವಲಿಂಗಾರ್ಚನೆಯಿಂದ ಯೋಗಾಂಗಿಯಾಗಿ ಕೊನೆಗೆ ಸರ್ವಾಂಗಲಿಂಗಿಯಾಗಿ ಷಡ್ಲಿಂಗಗಳನ್ನು ಅರ್ಚಿಸಿದೆನು(೩೨), ಶರಣೆ ಅಕ್ಕಮಹಾದೇವಿ, ನೀಲಾಂಬಿಕೆಯರ ಅನುಗ್ರಹದಿಂದ ತನ್ನ ಪ್ರಾಣ ಕಿರುಬಟ್ಟೆಯಲ್ಲಿ ನಡೆಯದೆ ಷಟ್ಸ್ಥಲ ಮಾರ್ಗದಲ್ಲಿ ನಡೆಯುವುದು(೩೫), ತನಗೆ ತೊಟ್ಟು ಬಿಟ್ಟ ಹಣ್ಣಿನಂತೆ ನಿಜೈಕ್ಯದ ಬಟ್ಟೆ ನಿರುತವಾಗಿದೆ. ಕಾರಣ ತಾನು ಪಂಚಭೂತಗಳನ್ನು, ಕರಣಗಳನ್ನು, ಭವವನ್ನು, ಭೋಗವನ್ನು, ಸಂಸಾರವನ್ನು ಗೆದ್ದು ಬಯಲಬ್ರಹ್ಮನನ್ನು ಮೊರೆಹೊಕ್ಕಿದ್ದೇನೆ(೩೮), ತಾಪತ್ರಯಗಳಿಗೆ ಒಳಗುಮಾಡುವ ಕರ್ಮತ್ರಯಗಳನ್ನು ತಾನು ಹೊನ್ನು, ಹೆಣ್ಣು, ಮಣ್ಣು ಬಿಡುವ ಮೂಲಕ ಗೆದ್ದಿದ್ದೇನೆ(೩೯). ನಿರಂಜನ ಪ್ರಣವ ಬೀಜವಾಗಿ ಪಂಚಭೂತಗಳು ಹುಟ್ಟಿ, ಪಂಚ ತನ್ಮಾತ್ರಗಳು ಪ್ರತ್ಯಕ್ಷವಾಗಿ ಮೊಳಕೆಯೊಡೆದು ತಳಿರಾಗಿ ಬೆಳೆದು ಹೂವಾಗಿ, ಹಣ್ಣಾಗಿ ಜ್ಞಾನಕ್ರಿಯೆಗಳಿಂದ ಅದನ್ನು ಆಧರಿಸಿದ ಶಿವಶರಣನು ಸುಚಿತ್ತ, ಸುಬುದ್ಧಿ, ನಿರಹಂಕಾರ ಸುಮನಹಸ್ತದಿಂದ ಹಿಡಿದು ರೇಚಕಪೂರಕ ಕುಂಭಕದಿಂದ ಸವಿದು ಪಂಚಭೂತಗಳನ್ನು ದಾಟಿ ಅಷ್ಟಮದಗಳನ್ನು ಗೆದ್ದು, ಅಂತಃಕರಣ, ಮೂಲಾಹಂಕಾರ, ಸಪ್ತವ್ಯಸನಗಳನ್ನು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ತನ್ಮಾತ್ರೆಗಳು, ಅರಿಷಡ್ವರ್ಗಗಳನ್ನೆಲ್ಲಾ ತುಳಿದು ಯೌಗಿಕ ನೆಲೆಯಲ್ಲಿ ದಾಟಬಂದು ನಿರಂಜನಬ್ರಹ್ಮನೇ ತಾನಾಗಿ ಶರಣಸತಿಯಾಗಿ ಲಿಂಗಪತಿಯನ್ನು ಪಡೆಯುವೆನು(೪೬).

ನಿಷ್ಕಳ ಪರಂಜ್ಯೋತಿಯು ಚಿತ್‌ಶಕ್ತಿಯ ಸಂಯೋಗದಿಂದ ಮಹಾಲಿಂಗವೆನಿಸುವುದು.ಅದು ಷಟ್‌ಶಕ್ತಿಗಳ ಸಂಯೋಗದಿಂದ ಷಡ್ಲಿಂಗಗಳಾಗುವುವು.ಅವುಗಳಿಗೆ ಪಂಚವಿಷಯಗಳನ್ನು ನಿವೇದಿಸಿ ಅನುಭವಿಸತಕ್ಕದ್ದು. ಇವೇ ಪಂಚಲಿಂಗಗಳ ಪ್ರಾಣ–ಅಂಗ–ಮುಖ ಪದಾರ್ಥಗಳಾಗಿವೆ(೪೭), ಶರಣನು ಶಿವಸ್ಮರಣೆಯಿಲ್ಲದೆ ಪ್ರಸಾದವನ್ನು ಭಿನ್ನಭೋಜನವಾಗಿ ಸ್ವೀಕರಿಸಬಾರದು ಮೊದಲ ತುತ್ತನ್ನು ಶಿವನಿಗರ್ಪಿಸಿ 'ಪ್ರಸಾದ ಭೋಜನ' ಮಾಡಬೇಕು ಪ್ರತೀತುತ್ತನ್ನು ಶಿವನಿಗರ್ಪಿಸಿಯೇ ತಿನ್ನುವ ಸಹಭೋಜನ ಶ್ರೇಷ್ಠವಾದುದು(೪೮), ಪ್ರಸಾದ ಸ್ವೀಕಾರದಲ್ಲಿ ತಮಗುಂಟಾದ ಅನುಮಾನವನ್ನು ಕಠಿಣ ಪದಾರ್ಥವನ್ನು ಲಿಂಗಕ್ಕೆ ಕೊಟ್ಟುಕೊಳ್ಳಲಮ್ಮೆನೆನುತ್ತಾರೆ(೪೯). ಹೀಗೆ ಅವರ ಉಳಿದ ೪೦ ವಚನಗಳಲ್ಲಿ ತಾಯಿಯ ಸಾಂತ್ವನದ ರೀತಿಯ ಮಾತುಗಳು, ವೈದ್ಯರ ಕಟುನುಡಿಯಂತೆ ನಿರ್ದಾಕ್ಷಿಣ್ಯವಾದ ಮಾತುಗಳು, ಸಾಧಕನ ತಳಮಳಗಳ ಚಿತ್ರಣಗಳು ಅವರ ಆತ್ಮಾವಲೋಕನದ ಅಭಿವ್ಯಕ್ತಿಯಲ್ಲಿ ಕಾಣಬಹುದಾಗಿದೆ.

ಹೀಗೆ ಶ್ರೀಘನಲಿಂಗಶಿವಯೋಗಿಗಳವರು ತಮ್ಮ ಎಲ್ಲ ವಚನಗಳಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಸಾಧಕನ ಆಧ್ಯಾತ್ಮಯಾತ್ರೆಯ ವಿವಿಧ ನೆಲೆಗಳನ್ನು ವಿಶ್ಲೇಷಿಸಿದ್ದಾರೆ. ಅವುಗಳನ್ನು ಹೇಳುವ ಪರಿ ತಮಗೇ ಅನ್ವಯಿಸಿಕೊಂಡಂತಿವೆ. ಅವು ನೇರವಾಗಿ ಅವರಿಗೇ ಅನ್ವಯಿಸಿ ಹೇಳಿದಂತಿದ್ದರೂ ಸಾಧಕನೊಬ್ಬನ ಮನದಾಳದ ನುಡಿಗಳಾಗಿಯೂ ಅವು ಸಾರ್ವತ್ರಿಕತೆಯನ್ನು ಪಡೆದಿವೆ. ಆ ಹಿನ್ನೆಲೆಯಲ್ಲಿ ಅವರ ವಚನಗಳಲ್ಲಿನ ಅನುಭಾವದ ನೆಲೆಗೆ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ, ಆಧ್ಯಾತ್ಮಿಕ ಆಯಾಮಗಳಿವೆ. ಅವರ ವಚನಗಳು ೧೬–೧೭ನೆಯ ಶತಮಾನದ ಆಧ್ಯಾತ್ಮದ ನೆಲೆಯ ಸಾಮಾಜಿಕ ಸಾಂಸ್ಕೃತಿಕ ಬದುಕನ್ನು ದಟ್ಟವಾಗಿ ಅಭಿವ್ಯಕ್ತಿಸಿವೆ. ಆ ಕಾಲದ ಜನರ ನಡವಳಿಕೆ, ರೀತಿನೀತಿಗಳು, ಅವರ ಆಚಾರವಿಚಾರಗಳು, ನಂಬಿಕೆಗಳು, ವರ್ತನೆಗಳು, ಅವುಗಳ ವಿಶ್ಲೇಷಣೆಗಳನ್ನೂ ಇಲ್ಲಿ ಪ್ರಾಸಂಗಿಕವಾಗಿ ಕಾಣಬಹುದು. ಅವುಗಳ ವಿಶೇಷವಾದ ವ್ಯಾಪಕ ಅಧ್ಯಯನವನ್ನು ಕೈಗೊಳ್ಳುವ ಮೂಲಕ ಆ ಕಾಲದ ಸಾಂಸ್ಕೃತಿಕ, ಸಾಮಾಜಿಕ ಚಿತ್ರಣವನ್ನು ಕಟ್ಟಿಕೊಡಬಹುದಾಗಿದೆ.ಪ್ರಸ್ತುತ ಅವರ ವಚನಗಳ ಅಧ್ಯಯನವನ್ನು ಇಲ್ಲಿ ಅನುಭಾವದ ನೆಲೆಯ ವಿಶ್ಲೇಷಣೆಗೆ ಮಾತ್ರಾ ಸೀಮಿತಗೊಳಿಸಿಕೊಂಡಿದ್ದೇನೆ.

### ೩.೪ ಸಾಹಿತ್ಯದ ನೆಲೆಯಲ್ಲಿ ಅನುಭಾವ :

ಶ್ರೀಘನಲಿಂಗಶಿವಯೋಗಿಗಳವರು ತಮ್ಮ ಅನುಭವದ ನೆಲೆಗಳನ್ನು ಸಾಹಿತ್ಯಕ ನೆಲೆಯಲ್ಲಿ ಅಭಿವ್ಯಕ್ತಿಸುವಾಗ ಭಾಷೆಯ ವಿವಿಧ ಸಾಧ್ಯತೆಗಳನ್ನು ಸಮರ್ಥವಾಗಿ ಬಳಸಿಕೊಂಡು ಕನ್ನಡದ ಅನುಭಾವಿಸಾಹಿತಿಗಳಲ್ಲಿ ಅಗ್ರಗಣ್ಯರಾಗಿದ್ದಾರೆ. 'ಅನುಭಾವ'ವೆಂಬುದು ಅಂತರಂಗದ ರತ್ನ.ಅದನ್ನು ಹೊರತೆಗೆದು ತೋರಿಸುವುದು ಕಷ್ಟಸಾಧ್ಯ. ಅಂತಹುದನ್ನು ಮಾತಿನಲ್ಲಿ ಹಿಡಿದಿಡುವ ಪ್ರಯತ್ನ ಶರಣರ ವಚನಗಳಲ್ಲಿ ಹಿಂದೆಯೇ ನಡೆದಿತ್ತು. ಅದೇ ದಾರಿಯಲ್ಲಿ ಸಾಗಿದ ಶ್ರೀಘನಲಿಂಗಶಿವಯೋಗಿಗಳವರು ತಮ್ಮ ಅನುಭಾವವನ್ನು ಅತ್ಯದ್ಭುತವಾಗಿ ತಮ್ಮ ವಚನಗಳಲ್ಲಿ ಅಭಿವ್ಯಕ್ತಿಸಿದ್ದಾರೆ.ಅದಕ್ಕಾಗಿ ಅವರು ಭಾಷೆಯನ್ನು ನಾನಾ ಬಗೆಗಳಲ್ಲಿ ದುಡಿಸಿಕೊಂಡಿದ್ದಾರೆ. ಅವುಗಳಲ್ಲಿ ಹೆಚ್ಚಿನವು ಭಾವಗೀತೆಗಳಂತಿದ್ದು ಮನಮಿಡಿಯುವಂತಿವೆ. ಅವುಗಳಲ್ಲಿ ಅವರು ಬಳಸಿರುವ ವಿಶಿಷ್ಟ ಪದಬಳಕೆಗಳು, ಸಾದೃಶ್ಯಗಳು, ನುಡಿಗಟ್ಟುಗಳು, ಸೂಕ್ತಿರೂಪದ ಮಾತುಗಳು, ಪ್ರತಿಮೆ, ದೃಷ್ಟಾಂತ, ರೂಪಕಗಳು ವಿಶೇಷವಾಗಿವೆ. ಉದಾಹರಣೆಗೆ:

**ತಮ್ಮ ಮಧುರಭಕ್ತಿಯನ್ನು ತೋರ್ಪಡಿಸುವ ಭಾವಕ್ಕೆ :**

**ಭಕ್ತಿಯೆಂಬ ವಿರಹಾಗ್ನಿ**
**ಎನ್ನ ಹೃದಯಕಮಲದಲ್ಲಿ ಬೆಳೆದು ಬೀದಿವರಿದು–**
**ನಿಂತಲ್ಲಿ ನಿಲಲೀಸದಯ್ಯ**
**ಕುಳಿತಲ್ಲಿ ಕುಳ್ಳಿರಲೀಸದಯ್ಯ–**
**ಮನನಿಂದಲ್ಲಿ ಮನೋಹರವಪ್ಪುದಯ್ಯ!**
**ಅಂಗ–ಮನ–ಪ್ರಾಣ–ನೇತ್ರ–ಚಿತ್ತಂಗಳೊಳು**
**ಪಂಚಮುಖವೆಂಬ ಪಂಚಬಾಣಂಗಳು ನೆಟ್ಟವಯ್ಯ**

**ನಾನು ಧರೆಯೊಳು ಉಳಿವುದರಿದು!**
**ಪ್ರೇಮದಿಂ ಬಂದು–**
**ಕಣ್ದುಂಬಿ ನೋಡಿ**
**ಮನವೊಲಿದು ಮಾತಾಡಿ**
**ಕರುಣದಿಂ ಕೈವಿಡಿದು**
**ಅಕ್ಕರಿಂದಾಲಂಗಿಸಿ**
**ದಿಟ್ಟಿಸಿ**
**ಬೊಟ್ಟಾಡಿ**
**ಲಲ್ಲೆವಾತಿಂ ಗಲ್ಲವ ಪಿಡಿದು**
**ಪುಷ್ಪ–ಪರಿಮಳದಂತೆ**
**ನಾ–ನೀನುಭಯವಿಲ್ಲದಂತೆ ಕೂಡೆನ್ನ ಪ್ರಾಣೇಶನೇ ! (೧)**

ಆತ್ಮಾವಲೋಕನದ ಅಭಿವ್ಯಕ್ತಿಯ ಸೊಗಸಿಗೆ:

**ಕಪಿ ಕಳ್ಳ ಕುಡಿದು**
**ಕಡಲ ದಾಂಟುವೆನೆಂದು ಲಂಘಿಸಿ**
**ನಡುನೀರಲ್ಲಿ ಬಿದ್ದು**
**ಮೀನು–ಮೊಸಳೆಗೆ ಆಹಾರವಾದಂತಾಯಿತಯ್ಯ**
**ಎನ್ನ ಬಾಳು ! (೪)**

ಮನುಷ್ಯ ಜನ್ಮದ ಹಿರಿಮೆಯ ಬಗೆಗೆ :

**ದೇವ**
**ಕಂಬಳಕ್ಕೆ ಹೋಗಿ**
**ಕನಕದ ಕೊಡನ ಕಂಡಂತೆ–**
**ಮಾನವಜನ್ಮವ ಕಂಡೆ !**

**ಈ ಮಾನವಜನ್ಮಕ್ಕೆ ಘುಣಾಕ್ಷರನ್ಯಾಯದಂತೆ**
**ಲಿಂಗ ಬಂದುದ ಕಂಡೆ**
**ಎನಗಿದು ಚೋದ್ಯ**
**ಎನಗಿದು ವಿಪರೀತವಯ್ಯ ! (೧೨)**

ಆಧ್ಯಾತ್ಮದ ಅನುಭಾವದ ಅಭಿವ್ಯಕ್ತಿಗೆ :

**ನಿತ್ಯ ಅನಿತ್ಯವ**
**ಸಂದನಿಕ್ಕಿದ ಸಮರ್ಥರಾರಯ್ಯ !**
**ಇದಕ್ಕೆ ಅನುಕೂಲವಾಗಿ ಮಾಡಿದವರು**
**ಮತ್ತೊಬ್ಬರುಂಟೆಂದು**
**ನಿನ್ನ ಮನದಲ್ಲಿ ತಿಳಿಯಬೇಡ–**
**ಅದು ತನಗೆ ತಾನೇ ಮಾಡಿಕೊಂಡಿತು ! (೧೪)**

**ಇನ್ನೇವೆನಿನ್ನೇವೆನಯ್ಯ–**
**ಎನ್ನ ಕೇಡಿಂಗೆ ಕಡೆಯಿಲ್ಲ–**
**ಕಾಯವಿಕಾರವೆಂಬ ಕತ್ತಲೆ ಕವಿಯಿತು,**
**ಮನೋವಿಕಾರವೆಂಬ ಮಾಯೆ ಸೆರೆವಿಡಿದಳು,**
**ಇಂದ್ರಿಯವಿಕಾರವೆಂಬ**
**ಹುಚ್ಚುನಾಯಿಗಳು ಕಚ್ಚಿಕಚ್ಚಿ ಒದರುತ್ತಿವೆ,**
**ಕಾಮವಿಕಾರವೆಂಬ ಕಾಳರಕ್ಕಸಿ**
**ಅಗಿದಗಿದು ನುಂಗುತಿಹಳು**
**ಕಾಯಲಾಗದೇ ದೇವ ? ಸಾವನ್ನಬರಸರಸವುಂಟೇ ? ಲಿಂಗಯ್ಯ (೬೩)**

ಹೀಗೆ ಬಹುತೇಕ ಹೆಚ್ಚಿನ ವಚನಗಳೆಲ್ಲವೂ ಸಾಹಿತ್ಯಾತ್ಮಕವಾಗಿ ಸೊಗಸಾದ ಅಭಿವ್ಯಕ್ತಿಯನ್ನು ಪಡೆದಿದ್ದು ಅವು ಓದುಗರ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರುತ್ತಿವೆ. ಅದಕ್ಕಾಗಿ ಅವರು ಬಳಸಿರುವ ನಾನಾ ಪ್ರಯೋಗಗಳನ್ನು ಹೀಗೆ ಗುರುತಿಸಬಹುದು.ಶ್ರೀಘನಲಿಂಗಶಿವಯೋಗಿಗಳವರು ಆಧ್ಯಾತ್ಮದ ನೆಲೆಯ ಅನುಭಾವಗಳನ್ನು ಹೇಳುವಾಗ ಬಳಸಿರುವ ಕೆಲವು ಗಾದೆಯ ರೀತಿಯ **ಸೂಕ್ತಿರೂಪದ ಮಾತುಗಳು** ಹೀಗಿವೆ:

**೧. ಸಪ್ತಸಮುದ್ರಕ್ಕೆ ಸರಿಮಿಗಿಲಯ್ಯ(೧)**
**೨. ನಾನೀನುಭಯವಿಲ್ಲದಂತೆ ಕೂಡು(೧)**
**೩. ಕಪಿ ಕಳ್ಳ ಕುಡಿದು, ಕಡಲ ದಾಟುವೆನೆಂದು ಲಂಘಿಸಿ, ನಡುನೀರಲ್ಲಿ ಬಿದ್ದು ಮೀನು ಮೊಸಳೆಗೆ ಆಹಾರವಾದಂತಾಯಿತಯ್ಯ (೪)**
**೪. ಒರ್ವರಿಗೆ ಹುಟ್ಟಿ ಮತ್ತೊರ್ವರಿಗೆ ಅಪ್ಪಾ ಎಂಬಂತೆ(೪)**
**೫. ಕುನ್ನಿಗೆ ರನ್ನದ ಹಲ್ಲಣವ ಹಾಕಿದಂತೆ(೫)**
**ಹಂದಿಯ ತಂದು ಅಂದಣವನೇರಿಸಿದಂತೆ(೫)**
**೬. ಆನೆಯ ರೂಪತಾಳಿ, ಕೇರಿಯ ನುಸುಳುವ ಹಂದಿಯಂತೆ(೬)**
**೭. ಕಪಿಯ ಕೈಯ ಕನ್ನಡಿಯಂತೆ(೭)**
**೮. ಹಾವ ಕಂಡ ಮರ್ಕಟನಂತೆ(೧೦)**
**೯. ಆಳಿನಪಮಾನ ಆಳ್ದಂಗೆ ತಪ್ಪದಯ್ಯ(೧೦)**
**೧೦. ಹುಲಿಹಿಡಿದ ಕಪಿಲೆಯಂತೆ(೧೧)**
**೧೧. ಕಂಬಳಕ್ಕೆ ಹೋಗಿ ಕನಕದ ಕೊಡನ ಕಂಡಂತೆ(೧೨)**
**೧೨. ಮೊಲ–ಜಂಬುಕಗಳ ಹೊಯ್ಲಿಗೆ ಆನೆಯ ಪೌಜನು ಅಡ್ಡಮಾಡಬೇಕೇ?(೧೩)**
**೧೩. ಆನೆಯ ತನುಜನ ಆಡು ಮುರಿದರೆ ಹೀನವಾರಿಗಪ್ಪುದಯ್ಯ?(೧೩)**
**೧೪. ಕಾಮಧೇನುವಿನ ಗರ್ಭದಲ್ಲಿ ಕತ್ತೆಯ ಮರಿ ಹುಟ್ಟುವುದೆ?(೧೫)**
**೧೫. ಇಕ್ಕುವಾಕೆ ಮೂಗು ಮುಚ್ಚಿಕೊಂಡು ಇಕ್ಕಿದ ಬಳಿಕ ಉಂಬಾತ ಹೇಗುಂಬನಯ್ಯ(೧೫)**

**೧೬. ಕಲ್ಪವೃಕ್ಷದಲ್ಲಿ ಕಾಗೆಮೋರೆಯ ಹಣ್ಣು ಬೆಳೆವುದೆ?(೧೫)**

**೧೭. ಪರುಷದ ಗಿರಿಯಲ್ಲಿ ಕಬ್ಬುನ ಮೊಳೆದೋರುವುದೆ?(೧೫)**

**೧೮. ಪುಣ್ಯಕ್ಷೇತ್ರದಲ್ಲಿ ಲಿಂಗವಿಪ್ಪುದಲ್ಲದೆ ಹಾಳುಕೇರಿಯಲ್ಲಿ ಲಿಂಗವುಂಟೇ?೧೫)**

**೧೯. ಬಂಜೆ ಮಕ್ಕಳ ಬಯಸಿ ಬಟ್ಟೆಯ ಬೊಮ್ಮಂಗೆ ಹರಸಿಕೊಂಡಂತಾಯಿತ್ತಯ್ಯ(೧೭)**

**೨೦. ಸತಿಯ ಭಾಷೆ ಪತಿಗೆ ತಪ್ಪದಯ್ಯ(೧೮)**

**೨೧. ಬರಿಯ ವೈರಾಗ್ಯ ಭವಕ್ಕೆ ಬೀಜವಯ್ಯ(೧೯)**

**೨೨. ಶರಣನೇನು ಮುಗಿಲಬಣ್ಣದ ಬೊಂಬೆಯೇ?(೨೧)**

**೨೩. ಶರಣ ಮೊಲನಾಗರೇ?(೨೧)**

**೨೪. ಶರಣನಿಂದ್ರಚಾಪವೇ?(೨೧)**

**೨೫. ಶರಣ ಗೋಸುಂಬೆಯೇ?(೨೧)**

**೨೬. ತಿಂಗಳ ಬೆಳಕಿನ ಸಿರಿಯಂ ಕಂಡು ನಾಯಿ ಹರುಷಂಗೊಂಡು ಬಳ್ಳಿಟ್ಟು ಬೊಗುಳಿದಂತಾಯಿತು(೨೮)**

**೨೭. ಎಚ್ಚವನಿದ್ದಂತೆ ಅಂಬಿಗೆ ಮುನಿವರೇ ಅಯ್ಯ(೩೪)**

**೨೮. ರಾಜಹಂಸನಿಗೆ ಅಮೃತಾಹಾರವನಿಕ್ಕಬೇಕಲ್ಲದೆ ಗರುತ್ಮನ ಆಹಾರವನಿಕ್ಕುವರೇ ಅಯ್ಯಾ?(೬೨)**

**೨೯. ಸಾವನ್ನಬರ ಸರಸವುಂಟೇ?(೬೩)**

**೩೦. ಪಟದೊಳಗಣ ಚಿತ್ರದಂತೆ ಮಾಡಯ್ಯ(೬೩)**

**೩೧. ಪಾಲಿನೊಳಗೆ ಹುಳಿಯ ಬೆರೆದಂತಾಯಿತಯ್ಯಾ(೬೫)**

ಶ್ರೀಘನಲಿಂಗಶಿವಯೋಗಿಗಳವರು ತಾವು ಹೇಳುವ ಭಾವಗಳನ್ನು ಪ್ರಜ್ವಲಿಸಲು ಅಲ್ಲಲ್ಲಿ ಬಳಸಿರುವ **ನುಡಿಗಟ್ಟುಗಳು** ಹೀಗಿವೆ: ತಿಂದುತೇಗಿ, ಹಿಂಡಿಹಿಪ್ಪೆ, ನುಂಗಿಉಗುಳ್ದು, ಸೆರೆಸಂಕಲೆ, ದಿವರಾತ್ರಿ, ಮುಂದುಗೆಡು, ಬೀಗಿಬೆಳೆದು, ಬಣ್ಣಗೆಡು, ನಿನ್ನಂತೆಮಾಡು, ಹಾಗತೂಕ, ಹರಿಹಂಚುಮಾಡು, ಬಾಗಿಲಕಾಯು, ಭಾಷೆ, ಪಡುಗಪಾದರಕ್ಷೆ, ಹೊಗರುದೋರು, ಪತಿವ್ರತಾಭಾವ, ಶರಣುಮಾಡು, ಪುರಾತರ ಮಕ್ಕಳು, ಕಿರಾತರ ಮಕ್ಕಳು, ತಲೆಗೊಡಹಿ, ನೀಗು, ತುಳಿದು, ಮುಂದುಗೆಡಿಸು, ಕಿಚ್ಚುಗುತ್ತಿ, ಕರಿಗೊಂಡು, ಮಗ್ಗಿಸಿ, ಹರವರಿಗೊಂಡು, ಸಂತೆಯಮಾತು, ಪುಂಡರಪುರಾಣ, ಬೀದಿಯಮಾತೆ, ಮೈಗಂದೆಯಂ ತುರಿಸಿದಂತೆ, ಹಾಲುಸಕ್ಕರೆಯನುಂಡಂತೆ, ಅಲಗಿನಮೊನೆ, ಬಾಯಿಬಡುಕತನ, ಕಾಲಬಾಯಿಗೆ ಸಿಕ್ಕು, ತೊತ್ತಳದುಳಿ, ಗಿಕ್ಕುಗಿರ್ರೆಂದುತಿರುಗು, ಡೊಂಬರಂತೆ, ಕೋಡಿಗರಂತೆ, ನರಕುರಿ, ಉಬ್ಬಿಕೊಬ್ಬಿ, ಹುಟ್ಟುಗೆಡು, ಕಾಡುಹೊಗು, ಕಿರುಬಟ್ಟೆ, ಕಂಗೆಡು, ಬಕಧ್ಯಾನ, ಮೂಗನರಿಯಿತು, ಕೊಂದುಕೂಗು, ಹಲುಗಿರಿ, ಬಾವಿಯಲ್ಲಿಬೀಳು, ಮಾತನಿಕ್ಕು, ನೀರ್ದಳಿ, ಗೋಮವನಿಕ್ಕು, ಕಾಲ್ದುಳಿ, ಬಸಿರಲ್ಲಿಬರು, ಕೈವಿಡಿದ ಸ್ತ್ರೀ, ಬಾಯಹುಳುಕನು, ಬರಿಯುಪಚಾರ, ಏಕ್ಕಲನರಕ, ತಪ್ಪುಕಾಯಯ್ಯ, ನಂಬಿನೆಚ್ಚು, ಘುಣಾಕ್ಷರನ್ಯಾಯ, ನೆಲನಬರೆ, ಬಿಚ್ಚಿಬೇರೆಮಾಡು, ಭಯಭಕ್ತಿ, ಹಿಟ್ಟುಗುಟ್ಟಿ, ತೂರಿಬಿಡು, ಬಣ್ಣವಿಟ್ಟು, ನುಣ್ಣಿಸಿ, ಹೀರಿಹಿಪ್ಪೆಯಮಾಡು, ಜೀವಗಳ್ಳ, ಮಾತಿನಮಾಲೆ, ಕುಂಡೆಯ ಬೆಳೆಸು, ನೂಂಕು, ತಲೆಬಾಲಗೆಡು, ಗಂಟಲಮುರಿ, ನಗೆಗೊಳಗುಮಾಡು, ನೆಗ್ಗಲೊತ್ತಿ, ಮನಬಂದಪರಿ, ಮುಗಿಲಬಣ್ಣದ ಬೊಂಬೆ, ಇಂದ್ರಚಾಪ, ಗೋಸುಂಬೆ, ಬೀಗಿಬೆಳೆ, ಮೊಲನಾಗರೇ.

ಶ್ರೀಘನಲಿಂಗಶಿವಯೋಗಿಗಳವರು ತಮ್ಮ ವಚನಗಳಲ್ಲಿ ಭಾವದ ಅಭಿವ್ಯಕ್ತಿಯಲ್ಲಿ ಬಳಸಿರುವ **ಪಾರಿಭಾಷಿಕ ಪದಗಳು** ಹೀಗಿವೆ: ಆದಿ–ಅನಾದಿ, ನಿಷ್ಕಲ, ಪಿಂಡೋತ್ಪತ್ತಿ, ಶರಣವೆಣ್ಣು, ಕರ್ಮ, ಭವ, ಅಂಗಭೋಗ, ನಿಷ್ಕಲ ಪರಬ್ರಹ್ಮ, ಪುಣ್ಯ, ಶರಣಸತಿಲಿಂಗಪತಿ, ಕಾಮ, ಭಕ್ತಿ, ಅವಧಾನಿ, ನಿಜೈಕ್ಯ, ಪ್ರಾಣಲಿಂಗ, ಸತ್ಯ, ಸದಾಚಾರ, ಕಾಲ, ಭಾವಲಿಂಗ, ಅರ್ಪಿತಾವಧಾನ, ನಿಷ್ಕಲಬ್ರಹ್ಮ, ಪಂಚಪ್ರಸಾದ ಶಿವತತ್ತ್ವ, ಕ್ರೀ, ನಿರಂಜನಪ್ರಸಾದ, ಪಿಂಡಾಂಡ, ಶರಣಲಿಂಗ, ಕರಪಾತ್ರೆ, ತೀರ್ಥಪ್ರಸಾದ, ಪರಬ್ರಹ್ಮ ಕರಣ, ದಾಸೋಹ, ಸಮ್ಯಜ್ಞಾನ, ಇಷ್ಟಲಿಂಗ, ಪಂಚಮುಖವೆಂಬ ಪಂಚಬಾಣ, ಒಳಕಾವಲವರು, ಹೊರಕಾವಲವರು, ರತ್ನಾಚಲ ಉನ್ಮನಿಪುರ, ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ, ಪಂಚಬ್ರಹ್ಮ, ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಪ್ರಾಣ, ತನು, ಪಂಚೈವರು, ಹೊನ್ನುಹೆಣ್ಣುಮಣ್ಣು, ಷಟ್ಕರ್ಮ, ಮನಬುದ್ಧಿಚಿತ್ತಅಹಂಕಾರ, ಭೋಗರಾಜ್ಯ, ಕರ್ಮದ ಅಂಡಲೆ, ಸ್ವರ್ಗ–ಮರ್ತ್ಯ–ಪಾತಾಳ, ಚತುರಂಗಬಲ, ಸಮ್ಯಜ್ಞಾನ, ಜೀವತ್ವ–ಶರಣತ್ವ, ಮುಕ್ತಿರಾಜ್ಯ, ಪಂಚಬ್ರಹ್ಮ ಪಂಚಬಾಣ, ಆತ್ಮ, ಭೋಗ, ಕರಣ, ಇಂದ್ರಿಯ, ಪ್ರಕೃತಿ, ಪರಬ್ರಹ್ಮ, ಮೋಕ್ಷ, ವೈರಾಗ್ಯ, ವಿರಕ್ತಿ, ಲಿಂಗ, ಲಾಂಛನ, ಲಿಂಗಭೋಗ, ಸಮಾಧಿಯೋಗ, ಸಿದ್ಧಪ್ರಸಾದ, ನಿರಂಗಶರಣ, ಕಠಿಣಪದಾರ್ಥ, ಅಚ್ಚಲಿಂಗೈಕ್ಯ, ಪದಾರ್ಥ, ಚಿತ್ಪಿಂಡ, ಜ್ಞಾನ, ಚರಲಿಂಗ, ಘನಲಿಂಗ, ನಾದ.

ಶ್ರೀಘನಲಿಂಗಶಿವಯೋಗಿಗಳವರು ತಮ್ಮ ವಚನಗಳಲ್ಲಿ ಬಳಸಿರುವ ಕೆಲವು **ಬೆಡಗಿನ ಪರಿಭಾಷೆ** ಹೀಗಿದೆ: ಆರುಮೂರಾಗಿ, ಮೂರುಒಂದಾಗಿ, ಎರಡು ವೀಥಿಯ, ಆರುಬಣ್ಣದ, ೧೫ದೇಹದ, ಒಂದುರತ್ನವ, ಮೇರುಪರ್ವತ, ಪಂಚವರ್ಣದಪಟ್ಟಣ, ಸಂಗಾತಿಗಳೈವರ, ಒಡಹುಟ್ಟಿದಿಬ್ಬರ, ನವಸೂತ್ರ. ಶ್ರೀಘನಲಿಂಗಶಿವಯೋಗಿಗಳವರು ತಮ್ಮ ವಚನಗಳಲ್ಲಿ ಬಳಸಿರುವ **ಜೋಡಿಪದಗಳು** ಹೀಗಿವೆ: ಜನನ– ಮರಣ, ಜನನಿ–ಜನಕ, ನುಡಿ–ನಡೆ, ತಂದೆ–ತಾಯಿ, ಬಂಧು–ಬಳಗ, ನಿತ್ಯ–ಅನಿತ್ಯ, ಭವಿಭಕ್ತ, ಜಪತಪ, ಚೆನ್ನವರದ, ನೆನೆನೆನೆದು, ಹಾಡಿಹಾಡಿ, ನೋಡಿನೋಡಿ.

ಹೀಗೆ ಸಾಹಿತ್ಯದ ಸಕಲ ಸಾಧ್ಯತೆಗಳನ್ನು ಬಳಸಿಕೊಂಡಿರುವ ಶ್ರೀಘನಲಿಂಗಶಿವಯೋಗಿಗಳವರ ವಚನಗಳು ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಅನುಭವವನ್ನು ಅನುಭಾವದ ನೆಲೆಯಲ್ಲಿ ಅಭಿವ್ಯಕ್ತಪಡಿಸುವಲ್ಲಿ ಯಶಸ್ವಿಯಾಗಿವೆ.

ಕೊನೆ ಟಿಪ್ಪಣಿ

೧.ಶ್ರೀಘನಲಿಂಗದೇವರ ವಚನಗಳು, ಸಹಸ್ಪಂದನ ವ್ಯಾಖ್ಯಾನಸಹಿತ, (ಸಂ) ಡಾ.ಶ್ರೀಶಿವರಾತ್ರಿರಾಜೇಂದ್ರಸ್ವಾಮಿಗಳು, ಜಗದ್ಗುರು ಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೦೫, ಪು.೬೯

## ೪. ಉಪಸಂಹಾರ

೧೨ನೆಯ ಶತಮಾನದ ವಚನಯುಗದ ನಂತರ ಮತ್ತೊಮ್ಮೆ ಕನ್ನಡಸಾಹಿತ್ಯದಲ್ಲಿ ವಚನಪ್ರಕಾರ ವಿಜೃಂಭಿಸುವುದು ೧೬ನೆಯ ಶತಮಾನದ ತೋಂಟದಸಿದ್ದಲಿಂಗಯತಿಗಳ ಕಾಲದಲ್ಲೇ. ವೀರಶೈವಧರ್ಮದ ಪುನರುಜ್ಜೀವನದ ಆ ಯುಗದಲ್ಲಿ ತೋಂಟದಾರ್ಯರಿಗೆ ಹೆಗಲೆಣೆಯಾಗಿ ನಿಂತು ಅದಕ್ಕೆ ಶಕ್ತಿತುಂಬಿದ ಮಹಾಮಹಿಮ ಅನುಭಾವಿಸಂತರಲ್ಲಿ ಶ್ರೀಘನಲಿಂಗಶಿವಯೋಗಿಗಳೂ ಒಬ್ಬರಾಗಿದ್ದಾರೆ. ಅವರು ರಚಿಸಿದ ಸದ್ಯಕ್ಕೆ ನಮಗೆ ಸಿಕ್ಕಿರುವ ಅವರ ೬೬ ವಚನಗಳನ್ನು ವಿಶ್ಲೇಷಣೆಗೊಳಪಡಿಸಿದಾಗ ಅವರ ಗುರು ತೋಂಟದಾರ್ಯರ ವಚನಗಳಂತೆಯೇ ಇವರ ವಚನಗಳೂ ದೀರ್ಘವಾಗಿರುವುದು, ಶೀರ್ಷಿಕೆಗಳನ್ನು ಹೊಂದಿರುವುದು ಕಂಡುಬರುತ್ತದೆ.೧೨ನೆಯ ಶತಮಾನದ ವಚನಕಾರರಿಗೂ ೧೬ನೆಯ ಶತಮಾನದ ವಚನಕಾರರಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು.ಅವರಲ್ಲಿದ್ದ ಮುಕ್ತತೆ, ಉದಾರತೆ, ಮಾನವೀಯಅನುಕಂಪ, ಸಾಮಾಜಿಕಕಳಕಳಿ ಕ್ರಾಂತಿಕಾರಿಗುಣಗಳು ಇವರಲ್ಲಿ ಇದ್ದರೂ ಅದನ್ನು ಸಾಧ್ಯವಾಗಿಸುವ ಸಾಮಾಜಿಕ, ರಾಜಕೀಯ ವಾತಾವರಣ; ಕಳಕಳಿ ಕಚ್ಚೆದೆಯ ಕಾವು ಕಡಿಮೆಯಾಗಿತ್ತು. ಒಡೆದು ಹೋಗಿದ್ದ, ಛಿದ್ರಛಿದ್ರವಾಗಿ ಹೋಗುತ್ತಿದ್ದ ಮನುಷ್ಯರನ್ನು ಮೆಲ್ಲಮೆಲ್ಲನೆ ಹಿಂದಿನ ಜಾತಿಪದ್ಧತಿಯೇ ತನ್ನ ಕಬಂಧಬಾಹುವನ್ನು ಬಾಚಿ ಅಪ್ಪಿಕೊಳ್ಳುತ್ತಿದ್ದ ಕಾಲಘಟ್ಟದಲ್ಲಿ ಶಿಥಿಲವಾಗುತ್ತಿದ್ದ ವೀರಶೈವದ ತತ್ವಾದರ್ಶಗಳನ್ನು ಉಳಿಸುವ, ಅದನ್ನು ಸಂರಕ್ಷಿಸಿ ಪೋಷಿಸುವ, ಮುಂದಿನ ತಲೆಮಾರಿಗೂ ಅದನ್ನು ಕೊಂಡೊಯ್ಯುವ ಗುರುತರ ಹೊಣೆಗಾರಿಕೆ ೧೬ನೆಯ ಶತಮಾನದ ವಚನಕಾರರಮೇಲೆ ಬಿದ್ದಿತ್ತು. ಹಾಗಾಗಿ ಅದನ್ನು ಸಾಧ್ಯಮಾಡುವುದಕ್ಕಾಗಿ ಶ್ರೀಘನಲಿಂಗಶಿವಯೋಗಿಗಳವರ ವಚನಗಳು ಸೃಜನಶೀಲತೆಯ ಅಭಿವ್ಯಕ್ತಿಯಾಗುವುದರ ಜೊತೆಗೆ ಹಿಂದಿನ ತತ್ವವಿಚಾರಗಳ ಭಾರದಿಂದ ಸುದೀರ್ಘವಾಯಿತು.ಜೊತೆಗೆ ಅವರ ದೃಷ್ಟಿಕೋನ ಪರಿಮಿತವೂ ಆಗಲೇಬೇಕಾದ ಅನಿವಾರ್ಯತೆ ಉಂಟಾಯಿತು. ಬಸವಣ್ಣನವರಂತಹ ಅಖಂಡಶಕ್ತಿಯ ಕೊರತೆಯ ಕಾರಣವಾಗಿ,

ಪರಿಮಿತಶಕ್ತಿಯ ವಲಯದಲ್ಲೇ ವೀರಶೈವಧರ್ಮದ ತತ್ವಾಚರಣೆಗಳು ತನ್ನ ನೆಲೆಯನ್ನು ಅಸ್ತಿತ್ವವನ್ನು ಆ ಕಾಲದಲ್ಲಿ ಉಳಿಸಿಕೊಳ್ಳಲು ಪ್ರಯತ್ನಿಸಬೇಕಾಯಿತು.ಈ ಸಾಮಾಜಿಕ ಜವಾಬ್ದಾರಿಯನ್ನು ೧೬ನೆಯ ಶತಮಾನದಲ್ಲಿ ವಿಶೇಷವಾಗಿ ಹೊತ್ತ ನೂರಾರು ವಿರಕ್ತರು ಸಾಧಕರಾಗಿದ್ದುದರ ಜೊತೆಗೆ ತತ್ವೋಪದೇಶಕರೂ ಆಗಿದ್ದರು. ವಿಶೇಷವಾಗಿ ಶ್ರೀಘನಲಿಂಗದೇವರು ಸಾಧಕರ ಡಾಂಭಿಕತೆ, ಆಡಂಬರಗಳನ್ನು ಟೀಕಿಸುವ ಮೂಲಕ ಅವುಗಳನ್ನು ಇಲ್ಲವಾಗಿಸುವ, ಆ ಮೂಲಕ ಮೂಲಸತ್ವದ ನೆಲೆಯಲ್ಲಿ ತತ್ವಾದರ್ಶಗಳನ್ನು ಜಾರಿಗೊಳಿಸುವ ಕೈಂಕರ್ಯವನ್ನು ಮಾಡಿರುವುದು ಅವರ ವಚನಾಭ್ಯಾಸದಿಂದ ವ್ಯಕ್ತವಾಗುತ್ತದೆ.

೧೨ನೆಯ ಶತಮಾನದಲ್ಲಿ ವೀರಶೈವಧರ್ಮ ಎಂಬುದು ಬದುಕಿನ ವಿಧಾನವಾಗಿದ್ದುದು, ೧೬ನೆಯ ಶತಮಾನದ ವೇಳೆಗೆ ಅದು ಸಾಂಸ್ಥಿಕವಾಗಿ ನೆಲೆಗೊಳ್ಳಲೇಬೇಕಾದ ಅನಿವಾರ್ಯತೆಯ ಹಿನ್ನೆಲೆಯಲ್ಲಿ ತಾತ್ವಿಕವಾಗಿ ಹಿಂದಿನ ಉದಾರತೆಯನ್ನು ಆ ಪ್ರಮಾಣದಲ್ಲಿ ಇವರು ಸಾಕಾರಗೊಳಿಸಲು ಆ ಕಾಲಘಟ್ಟದಲ್ಲಿ ಸಾಧ್ಯವಾಗದೇ ಹೋಯಿತು. ಈ ಎಲ್ಲ ಗುಣಲಕ್ಷಣಗಳನ್ನು ತೋಂಟದ ಸಿದ್ಧಲಿಂಗರಾದಿಯಾಗಿ ಶ್ರೀಘನಲಿಂಗಶಿವಯೋಗಿಗಳೂ ಸೇರಿದಂತೆ ೧೬ನೆ ಶತಮಾನದ ಬಹುತೇಕ ವಚನಕಾರರಲ್ಲಿ ಕಾಣುತ್ತೇವೆ. ಆದರೂ ಅವರು ವಚನ ಪ್ರಕಾರವನ್ನು ಬಳಸಿದರೆಂಬುದೇ ಇಂದಿಗೂ ರೋಮಾಂಚನವನ್ನು ಉಂಟು ಮಾಡುವಂತಹ ವಿಚಾರವಾಗಿದೆ. ಏಕೆಂದರೆ ಬಸವಣ್ಣನವರ ನಂತರ ಆ ಕಾಲದವರೆಗೆ ಬೇರೆ ಯಾರೊಬ್ಬರಿಗೂ ಆ ಪ್ರಕಾರವನ್ನು ಮುಟ್ಟುವ ಧೈರ್ಯವೇ ಬಂದಿರಲಿಲ್ಲ. ಅಂತಹ ಧೈರ್ಯವನ್ನು ಕೆಚ್ಚೆದೆಯನ್ನು ತೋರಿಸಿದ ಮಹಾನ್ ಕ್ರಾಂತಿಕಾರೀಪುರುಷ ತೋಂಟದಾರ್ಯ ಸಿದ್ದಲಿಂಗಯತಿಗಳಾಗಿದ್ದಾರೆ. ಅವರ ಸಶಕ್ತ ನೇತೃತ್ವದಲ್ಲಿ ಅವರಂತೆಯೇ ಅಷ್ಟೇ ಕೆಚ್ಚು, ಧೈರ್ಯ, ಕ್ರಾಂತಿಕಾರಿ ಗುಣಗಳನ್ನು ವ್ಯಕ್ತಪಡಿಸಿದ ಅನೇಕ ವಚನಕಾರರನ್ನು ಕಾಣುತ್ತೇವೆ. ಅವರಲ್ಲಿ ಶ್ರೀಘನಲಿಂಗಶಿವಯೋಗಿಗಳವರು ಒಬ್ಬ ಪ್ರಮುಖ ವಚನಕಾರರಾಗಿದ್ದಾರೆ.

ಶ್ರೀಘನಲಿಂಗಶಿವಯೋಗಿಗಳವರ ವಚನಗಳು ಆ ಕಾಲದವರಂತೆ ಸುದೀರ್ಘವಾದರೂ 'ಬಸವಯುಗದ ವಚನಗಳ ಭಾವತೀವ್ರತೆಯೂ, ಅದು ತಟಕ್ಕನೆ ಸ್ಫೋಟಗೊಳ್ಳಬಲ್ಲ ಉಚಿತ ಪದಬಂಧವೂ ಇರುವುದು ಗಮನಾರ್ಹ.[೨] ಇವರ ವಚನಗಳು ಅಂದಿನ ಯುಗಧರ್ಮದಂತೆ ವೀರಶೈವ ಸಿದ್ಧಾಂತದ ವಿಚಾರಗಳನ್ನು ಒಳಗೊಂಡಿರುವುದು ಸಹಜವೇ ಆಗಿದೆ.ತಮ್ಮ ದಾರ್ಶನಿಕ ವ್ಯಕ್ತಿತ್ವದಿಂದ ತಮ್ಮ ಗುರು ತೋಂಟದಾರ್ಯರಂತೆ ವೀರಶೈವ ಷಟ್ಸ್ಥಲಜ್ಞಾನಸಾರಾಮೃತದಲ್ಲಿ ಮಿಂದೆದ್ದ ಅನುಭಾವಿಗಳಾಗಿ, ಶಿವಯೋಗಿಗಳಾಗಿ ಗುರುವಿನೊಡನೆ ನಾಡಿನ ಉದ್ದಗಲಕ್ಕೂ ಸಂಚರಿಸಿ ಆ ಕಾಲದ ಮಹಾಮಹಿಮಗಣ್ಯರಲ್ಲಿ ಶ್ರೀಘನಲಿಂಗಶಿವಯೋಗಿಗಳು ಒಬ್ಬರಾದರು. ಅವರು ಆ ಎಲ್ಲ ಅನುಭವದ ಹಿನ್ನಲೆಯಲ್ಲಿ ಅವರಿಂದ ರಚಿತವಾಗಿರುವ ವಚನಗಳು ಅಮೂಲ್ಯವಾದ ಆಧ್ಯಾತ್ಮದ ಸಂಪಾತ್ತಾಗಿದೆ. ಅದನ್ನು ಬಹುಮುಖ ಅಧ್ಯಯನಗಳಿಗೆ ಒಳಪಡಿಸಿದಾಗ ಅವರ ಬಹುಮುಖ ವಿಶಿಷ್ಟವ್ಯಕ್ತಿತ್ವದ ಚಿತ್ರಣ ಸಿಗುತ್ತದೆ.ಆದರೆ ಇಲ್ಲಿ ಕೇವಲ ಅನುಭಾವದ ನೆಲೆಯಲ್ಲಿ ಮಾತ್ರ ಅವರ ವಚನಗಳನ್ನು ಅಧ್ಯಯನಕ್ಕೊಳಪಡಿಸಿರುವುದರ ಹಿನ್ನೆಲೆಯಲ್ಲಿ ಅವರ ಅನುಭಾವಿಕ ಎತ್ತರ ಬಿತ್ತರಗಳನ್ನು ಮಾತ್ರಾ ಇಲ್ಲಿ ದರ್ಶಿಸಲಾಗಿದೆ.

ಶ್ರೀ ಘನಲಿಂಗಶಿವಯೋಗಿಗಳವರು ಒಬ್ಬ ಶ್ರೇಷ್ಠ ಅನುಭಾವಿ ಸಂತರಾಗಿದ್ದಾರೆ.ಆ ದಾರಿಯಲ್ಲಿ ತಾವು ಹುಟ್ಟಿದಂದಿನಿಂದಲೇ ಅಡಿಯಿಟ್ಟ ವಿಚಾರವನ್ನು ಅತ್ಯಂತ ಸಂತಸ ಅಭಿಮಾನದಿಂದ ಹೇಳಿಕೊಂಡಿದ್ದಾರೆ.ಶ್ರೀತೋಂಟದಾರ್ಯರ ಕೃಪಾಕಟಾಕ್ಷ, ಶ್ರೀ ಸುತ್ತೂರುಪೀಠ ಪರಂಪರೆಯ ಅಖಂಡ ಬೆಂಬಲ, ಜೊತೆಗೆ ಅವರಲ್ಲಿಯೇ ಇದ್ದ ಅಖಂಡ ಆಧ್ಯಾತ್ಮಿಕ ತುಡಿತ– ಈ ಮೂರೂ ಮುಪ್ಪುರಿಗೊಂಡು ಅವರನ್ನು ಅನುಭಾವಿಕ ಗುರುವನ್ನಾಗಿಸಿದೆ.ಅವರಲ್ಲಿ ಸಹಜವಾಗಿಯೇ ಇದ್ದ ಸಾಮಾಜಿಕ ಕಳಕಳಿ, ಚಿಕಿತ್ಸಕ ಮನೋಧರ್ಮ ಹಾಗೂ ಆತ್ಮಾವಲೋಕನಗಳ ವಿಶಿಷ್ಟಗುಣಗಳಿಂದಾಗಿ ಉಳಿದೆಲ್ಲರಿಗಿಂತ ಅವರು ಭಿನ್ನರಾಗಿ ಎದ್ದಕಾಣುವ ವ್ಯಕ್ತಿತ್ವವನ್ನು ಹೊಂದಿದ್ದಾರೆ.ಅವರ ಈ ವಿಶಿಷ್ಟಗುಣಗಳಿಂದಾಗಿಯೇ ಅವರು ಶ್ರೀತೋಂಟದಸಿದ್ಧಲಿಂಗೇಶ್ವರರ ಆಪ್ತ ಶಿಷ್ಯವರ್ಗದಲ್ಲಿ ಒಬ್ಬರಾಗಿ, ಅವರೊಡನೆಯೇ ಹೆಚ್ಚುಕಾಲ ಕಳೆಯುವಂತಾಗಿ, ಅವರ ವ್ಯಕ್ತಿತ್ವ ಮತ್ತಷ್ಟೂ ಪ್ರಜ್ವಲಿಸಲು ಸಹಾಯಕವಾಯಿತು.

ಶ್ರೀ ಘನಲಿಂಗಶಿವಯೋಗಿಗಳವರ ವಚನಗಳನ್ನು ಓದಿದಂತೆಲ್ಲ ಪ್ರತೀ ಓದಿನಲ್ಲಿಯೂ ಅವು ಹೊಸಹೊಸ ಅನುಭವಗಳನ್ನು ಸ್ಫುರಿಸುತ್ತಲೇ ಹೋಗುವುದು ಅವುಗಳ ವಿಶೇಷವಾಗಿದೆ.ಓದುಗರು ಅವುಗಳನ್ನು ಪರಿಭಾವಿಸಿದಂತೆಲ್ಲಾ ಅವುಗಳು ಅರ್ಥಪರಂಪರೆಗಳನ್ನು ಬಿಟ್ಟುಕೊಡುತ್ತಲೇ ಹೋಗುತ್ತಿರುವುದು ಅವುಗಳ ಧ್ವನಿಪೂರ್ಣತೆಗೆ ಸಾಕ್ಷಿಯಾಗಿವೆ. ಹಲವು ಓದಿನ ಕ್ರಮಗಳಲ್ಲಿ ಅವುಗಳಿಂದ ಹಲವಾರು ಅರ್ಥಗಳನ್ನು ಗ್ರಹಿಸಬಹುದಾಗಿದೆ. ಆಧ್ಯಾತ್ಮಿಕ ಅನುಭಾವದ ನೆಲೆಯ ಹಿನ್ನೆಲೆಯಲ್ಲಿ

ಮತ್ತೊಮ್ಮೆ ಮಗುದೊಮ್ಮೆ ಅವುಗಳನ್ನು ಓದಿದಾಗ ಅವುಗಳ ರಚನೆಯ ಕ್ರಮದ ಹಿನ್ನೆಲೆಯಲ್ಲಿ ಅನೇಕಾನೇಕ ಅರ್ಥಪರಂಪರೆಗಳನ್ನು ಕಾಣುತ್ತಾ ಹೋಗಬಹುದು.

ಅದರಲ್ಲಿ ಅವರ ಪೂರ್ಣ ೬೬ ವಚನಗಳಲ್ಲಿನ ಅನುಭಾವವವನ್ನು ಸಾಧಕನ ನೆಲೆಯಲ್ಲಿ ನೋಡಿದಾಗ ಉಂಟಾಗುವ ಅನುಭಾವ ವಿಶಿಷ್ಟವಾದುದು!ಆತನ ತಳಮಳ, ಸಂಕಲ್ಪ, ಅರಿವಿನ ಜಾಗೃತಿ, ದಾರಿತಪ್ಪದಂತೆ ಪುನಃ ಆತ್ಮನನ್ನು ಎಚ್ಚರದ ಸ್ಥಿತಿಯಲ್ಲಿರಿಸುವುದು, ದಾರಿತಪ್ಪಿದವರನ್ನು ಸರಿದಾರಿಯಲ್ಲಿ ನಡೆಯುವಂತೆ ಆಗ್ರಹಿಸುವುದು ಇತ್ಯಾದಿ ನೆಲೆಗಳನ್ನು ಇಲ್ಲಿ ಗುರುತಿಸಬಹುದು.

ಆಧ್ಯಾತ್ಮದ ನೆಲೆಯಲ್ಲಿ ಶ್ರೀಘನಲಿಂಗಶಿವಯೋಗಿಗಳವರು ೬೬ ವಚನಗಳನ್ನು ವಿಶ್ಲೇಷಿಸುವಾಗ ವೈಯಕ್ತಿಕ, ಸಾರ್ವತ್ರಿಕ, ಸಾರ್ವತ್ರಿಕವೈಯಕ್ತಿಕ– ವೈಯಕ್ತಿಕಸಾರ್ವತ್ರಿಕ ಹಾಗೂ ಆಧ್ಯಾತ್ಮದ ನೆಲೆಗಳನ್ನು ಕಾಣಬಹುದುದಾಗಿದೆ.ಸ್ಥೂಲವಾಗಿ ವೈಯಕ್ತಿಕ ನೆಲೆಯಲ್ಲಿ ತಮ್ಮ ಅನುಭವವನ್ನು ಹೇಳಿಕೊಳ್ಳುವಂತೆ ಇರುವ ವಚನಗಳನ್ನು ಕಾಣಬಹುದು.ಅಂತೆಯೇ ಸಾರ್ವತ್ರಿಕ ನೆಲೆಯಲ್ಲಿ ಜೀವದ ಬಂಧ ಮೋಕ್ಷದ ವಿವಿಧ ನೆಲೆಗಳನ್ನು ವಿವರಿಸಲಾಗಿದೆ.ಮುಂದೆ ಜೀವದ ಬಂಧದ ವಿವಿಧ ನೆಲೆಗಳನ್ನು ಅದರ ಬಿಡುಗಡೆಯ ಅನಂತ ದಾರಿಗಳನ್ನು ಸಾರ್ವತ್ರಿಕವಾಗಿದ್ದರೂ ವೈಯಕ್ತಿಕ ನೆಲೆಯಲ್ಲಿರುವಂತಹ, ಅದೇ ರೀತಿ ವೈಯಕ್ತಿಕನೆಲೆಯಲ್ಲಿದ್ದರೂ ಸಾರ್ವತ್ರಿಕವಾಗಿರುವಂತಹ ಜೀವದ ಅನೇಕ ಸ್ಥಿತಿಗತಿಗಳನ್ನು ಇಲ್ಲಿ ವಿವರಿಸಲಾಗಿದೆ.ಕೊನೆಯ ಆಧ್ಯಾತಿಕ ನೆಲೆಯ ಗುಂಪಿನ ವಚನಗಳಲ್ಲಿ ಮುಕ್ತಿಯ ದಾರಿಯನ್ನು ಪಡೆಯುವ ವಿವಿದ ಮಾರ್ಗಗಳನ್ನು ವಿವರಿಸಲಾಗಿದೆ.

ಆತ್ಮಾವಲೋಕನ ನೆಲೆಯಲ್ಲಿ ಅವರ ಎಲ್ಲ ವಚನಗಳನ್ನು ಅಭ್ಯಾಸ ಮಾಡುವುದೇ ಒಂದು ರೋಚಕವಾದ ಅನುಭವವನ್ನು ಓದುಗರಿಗೆ ತಂದುಕೊಡುತ್ತದೆ.ಸಾಧಕರಾದ ಶ್ರೀಘನಲಿಂಗಶಿವಯೋಗಿಗಳವರಲ್ಲಿ ಕಾಣುವ ಈ ವಿಶಿಷ್ಟವಾದ ಆತ್ಮಾವಲೋಕನ ಗುಣದಿಂದಾಗಿ ಅವರ ಎಲ್ಲ ವಚನಗಳಿಗೆ ಒಂದು ಹೊಸ ಕಾಂತಿ ಬಂದಿದೆ.ಆ ಹಿನ್ನೆಲೆಯಲ್ಲಿ ಅವರ ವಚನಗಳಲ್ಲಿ ತಾಯಿಯ ಸಾಂತ್ವನದ ಭಾವದ ನೆಲೆಗಳನ್ನು, ವೈದ್ಯರ ನಿರ್ದಾಕ್ಷಿಣ್ಯ ಭಾವದ ಧೋರಣೆಯನ್ನು, ಸಾಧಕರ ತಳಮಳದ ಭಾವಭಿವ್ಯಕ್ತಿಗಳನ್ನು ಕಾಣಬಹುದಾಗಿದೆ.

ಇನ್ನು ಸಾಹಿತ್ಯದ ನೆಲೆಯಲ್ಲಿ ಅವರ ಆರಂಭದ ವಚನಗಳು ಭಾವಗೀತೆಗಳಂತಿದ್ದು ಆರ್ದ್ರವಾಗಿ ರಸವೊಸರುವಂತಿವೆ. ಸುಂದರವಾದ ಸಾದೃಶ್ಯಗಳ ಮೂಲಕ ತುಂಬಾ ಧ್ವನಿಪೂರ್ಣವಾಗಿದ್ದು ಉಚಿತವಾದ ಭಾಷೆಗಳ ಬಳಕೆಯಿಂದ ಓದುಗರ ಮೇಲೆ ಗಾಢವಾದ ಪರಿಣಾಮವನ್ನು ಬೀರುತ್ತವೆ.

ಶ್ರೀ ಘನಲಿಂಗಶಿವಯೋಗಿಗಳವರು ಪರಿಪರಿಯಾಗಿ ಸ್ವವಿಮರ್ಶೆಯನ್ನು ಮಾಡಿಕೊಳ್ಳುವ ಮೂಲಕ ತಮ್ಮ ವ್ಯಕ್ತಿತ್ವವನ್ನು ಪುಟಕ್ಕಿಟ್ಟ ಚಿನ್ನದಂತೆ ಅಪರಂಜಿಯನ್ನಾಗಿಸಿಕೊಂಡರು. ಸಾಧನೆಯ ಹಂತದಲ್ಲಿ ಸಾಧಕನಿಗೆ ಎದುರಾಗುವ ಅನೇಕ ಎಡರುತೊಡರುಗಳ ವಿವರಗಳನ್ನು ಅವುಗಳನ್ನು ದಾಟಬೇಕಾದ ಮಾರ್ಗಗಳನ್ನು ತಮಗೇ ಅನ್ವಯಿಸಿಕೊಂಡು ವಚನಗಳಲ್ಲಿ ಬಗೆಬಗೆಯಾಗಿ ವಿಶ್ಲೇಷಿಸಿರುವುದು ಅವರ ವಚನಗಳ ಹಿರಿಮೆಯಾಗಿದೆ.ಜೊತೆಗೆ ತಮ್ಮಂತೆಯೇ ಆಧ್ಯಾತ್ಮಿಕ ದಾರಿಯಲ್ಲಿ ಸಾಗುತ್ತಿದ್ದ ಸಾಧುಗಳ, ವಿರಕ್ತರ ನಡವಳಿಕೆಗಳನ್ನು ಒರೆಗೆ ಹಚ್ಚುವ, ಅವರನ್ನು ಎಚ್ಚರಿಸುವ ಅವರಿಗೆ ಮಾರ್ಗದರ್ಶನ ಮಾಡುವ ಗುರುಸ್ಥಾನದ ಜವಾಬ್ದಾರಿಯನ್ನೂ ಅವರು ಹೊತ್ತಿರುವುದು ಅವರ ವಚನಗಳಲ್ಲಿ ವಿಶೇಷವಾಗಿ ಕಾಣುತ್ತೇವೆ. ಅವರ ಆ ಎಲ್ಲ ಅನುಭವದ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ಅವರಿಂದ ರಚಿತವಾಗಿರುವ ವಚನಗಳು ಅತ್ಯಮೋಘವಾದ ಆಧ್ಯಾತ್ಮದ ಅನುಭಾವದ ತವನಿಧಿಯಾಗಿದೆ ಎಂದು ಹೇಳಬಹುದು.

ಹೀಗೆ ಒಟ್ಟಾರೆ ಅನುಭಾವದ ನೆಲೆಯಲ್ಲಿ ಶ್ರೀಘನಲಿಂಗಶಿವಯೋಗಿಗಳವರ ವಚನಗಳ ಅಧ್ಯಯನ ಬಹುಮುಖ ದರ್ಶನವನ್ನು ನೀಡುತ್ತವೆ. ಪ್ರತಿಬಾರಿಯ ಓದಿಗೂ ಅವು ಹೊಸ ಹೊಸ ಹೊಳಹುಗಳನ್ನು ಓದುಗರಲ್ಲಿ ಹೊಮ್ಮಿಸುವ ಸಾಹಿತ್ಯಕ ಸೌಂದರ್ಯದಿಂದ ಕೂಡಿವೆ. ಮಾತಿಗೆ ಅತೀತವಾದ ಆಧ್ಯಾತ್ಮದ ಅನುಭಾವದ ವಿವಿದ ನೆಲೆಗಳನ್ನು ಮಾತಿನಲ್ಲಿ ಹಿಡಿದಿಟ್ಟಿರುವ ಸಾಹಸದಲ್ಲಿ ಶ್ರೀಘನಲಿಂಗಶಿವಯೋಗಿಗಳವರು ಯಶಸ್ವಿಯಾಗಿದ್ದಾರೆ. ಕೇವಲ ಅವರು ಪ್ರತಿಭಾವಂತ ಕವಿಗಳಷ್ಟೇ ಅಲ್ಲದೆ ಸಾಧಕರೂ, ಸಿದ್ಧರೂ, ಸಂತರೂ, ಅನುಭಾವಿಗಳೂ, ದಾರ್ಶನಿಕರೂ ಆಗಿರುವುದು ಆಧ್ಯಾತ್ಮದ ನೆಲೆಯ ಅವರ ಬಹುಮುಖ ಸಿದ್ಧಿಗಳಿಗೆ ದ್ಯೋತಕಗಳಾಗಿವೆ. ಇದರ ಜೊತೆಗೆ ಅವರು ಸಮಾಜ ಚಿಂತಕರೂ, ಸುಧಾರಕರೂ ಆಗಿ ಜನಜಾಗೃತಿಯಲ್ಲಿ ತಮ್ಮನ್ನು

ತೊಡಗಿಸಿಕೊಳ್ಳುವ ಮೂಲಕ ಕ್ರಿಯಾಶೀಲ ವ್ಯಕ್ತಿತ್ವದ ಆಯಾಮವನ್ನು ಹೊಂದಿದ್ದಾರೆ. ಹೀಗೆ ಬಹುಮುಖ ವ್ಯಕ್ತಿತ್ವದ ಬಹುದೊಡ್ಡ ಸಾಧಕರಾಗಿ, ಸಂತರಾಗಿ ಅವರ ಹೆಸರು ಕನ್ನಡ ನಾಡಿನ ಆಧ್ಯಾತ್ಮದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದೆ.

## ಪರಾಮರ್ಶನ ಗ್ರಂಥಗಳು


೧. ಶ್ರೀಘನಲಿಂಗದೇವರ ವಚನಗಳು – (ಸಂ) ಶ್ರೀಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳು ಜೆ ಎಸ್ ಎಸ್ ಗ್ರಂಥಮಾಲೆ, ಮೈಸೂರು, ೧೯೬೪

೨. ಸುತ್ತೂರು ಜಗದ್ಗುರು ಶ್ರೀ ಘನಲಿಂಗದೇವರ ವಚನಗಳು ಸಹಸ್ಪಂದನ ವ್ಯಾಖ್ಯಾನ ಸಹಿತ – (ಸಂ) ಡಾ.ಶ್ರೀಶಿವರಾತ್ರಿರಾಜೇಂದ್ರಸ್ವಾಮಿಗಳು ವ್ಯಾಖ್ಯಾನಕಾರರು–ಡಾ ಎಲ್.ಬಸವರಾಜು, ಜಗದ್ಗುರು ಶ್ರೀಶಿವರಾತ್ರಿಶ್ವರ ಗ್ರಂಥಮಾಲೆ, ಮೈಸೂರು, ೨೦೦೫

೩. ಶ್ರೀಘನಲಿಂಗಿದೇವ–ಡಾ ಎಚ್.ಎ ಪಾರ್ಶ್ವನಾಥ್ – ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು ಮೈಸೂರು, ೨೦೦೯

೪. ಶ್ರೀಘನಲಿಂಗಶಿವಯೋಗಿ – (ಸಂ) ಪ್ರೊ. ಚಂದ್ರಶೇಖರಯ್ಯ, ಜಗದ್ಗುರು ಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೧೪

೫. ಶ್ರೀಘನಲಿಂಗಿಶಿವಯೋಗಿ – ಡಾ.ಡಿ. ಶೀಲಾಕುಮಾರಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೦೩

೬. ಕನ್ನಡದಲ್ಲಿ ಕೈವಲ್ಯ ಸಾಹಿತ್ಯ – ಡಾ.ಎಚ್.ತಿಪ್ಪೇರುದ್ರಸ್ವಾಮಿ, ಚಿತ್ತರಗಿ ಶ್ರೀವಿಜಯ ಮಹಾಂತೇಶ್ವರ ಧರ್ಮಪ್ರಸಾರಕ ಮಂಡಲ, ಇಲಕಲ್ಲ, ೧೯೮೩

೭. ಶರಣರ ಅನುಭಾವ ಸಾಹಿತ್ಯ – ಡಾ.ಎಚ್.ತಿಪ್ಪೇರುದ್ರಸ್ವಾಮಿ, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು

೮. ಅನುಭಾವ : ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ – ಡಾ.ಬಸವರಾಜ ಕಲ್ಗುಡಿ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೯೭

೯. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಪರಿಷ್ಕೃತ ಆವೃತ್ತಿ) ಸಂಪುಟ–೪ ಭಾಗ–೧ – (ಸಂ) ಡಾ.ವಡ್ಡೆ ಹೇಮಲತಾ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು, ೨೦೧೪

೧೦. ಅರ್ಚನ – (ಸಂ) ವಿದ್ವಾನ್ ಡಾ.ಎಚ್.ಪಿ.ಮಲ್ಲೇದೇವರು, ಪಟ್ಟಾಧಿಕಾರ ಸುವರ್ಣಮಹೋತ್ಸವ ಸಮಿತಿ, ಮೈಸೂರು,೧೯೮೪

೧೧. ವೀರಶೈವ ಸಾಹಿತ್ಯ ಸಮೀಕ್ಷೆ – (ಸಂ) ಸದಾನಂದಕನವಳ್ಳಿ ಸಿ.ಚನ್ನಪ್ಪ ಕೆರಿಮನಿ ಪಂಪ ಪ್ರಕಾಶನ; ಲಕ್ಷ್ಮೇಶ್ವರ, ೧೯೭೬

೧೨. ಬಸವೋತ್ತರ ಯುಗದ ವಚನಕಾರರು – ವೀರಣ್ಣರಾಜಾರ, ಹಾರಕೂಡ, ೨೦೦೨

೧೩.ಶಿವಾನುಭಾವ ಶಬ್ದಕೋಶ – (ಸಂ) ಫ.ಗು.ಹಳಕಟ್ಟಿ, ಸಮಾಜ ಪ್ರುಸ್ತಕಾಲಯ, ಧಾರವಾಡ, ೧೯೭೨

೧೪. ವೀರಶೈವ ಪದಕೋಶ – ಶ್ರೀ ಮನ್ನಿರಂಜನ ಪ್ರಣವ ಸ್ವರೂಪ ಜಗದ್ಗುರು, ಶ್ರೀ ಅನ್ನದಾನೀಶ್ವರ ಮಹಾಶಿವಯೋಗಿಗಳವರು, ಸಂಸ್ಥಾಮಠ, ಮುಂಡರಗಿ, ೨೦೦೫

೧೫. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–೫ ಭಾಗ–೪ – (ಸಂ) ರಾಮೇಗೌಡ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರುವಿಶ್ವವಿದ್ಯಾನಿಲಯ, ಮೈಸೂರು, ೨೦೧೨

೧೬.ಎಫಿಗ್ರಾಫಿಯಾ ಕರ್ನಾಟಕಾ ಸಂಪುಟ–ಮೂರು – ಕನ್ನಡ ಅಧ್ಯಯನ ಸಂಸ್ಥೆ, ಮೈವಿವಿ, ಮೈಸೂರು, ೧೯೭೪

೧೭. ಸಂಕೀರ್ಣ ವಚನ ಸಂಪುಟ–೬ – (ಸಂ) ಎಸ್.ಶಿವಣ್ಣ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೧

೧೮. ಶಿವರಾತ್ರಿಶಿವಾಚಾರ್ಯ – ಪ್ರೊ.ಎಂ.ಜಿ ನಂಜುಂಡಾರಾಧ್ಯ, ಜಗದ್ಗುರು ಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೧

೧೯. ಶ್ರೀಸುತ್ತೂರು ವೀರಸಿಂಹಾಸನ ಗುರುಪರಂಪರೆ – ಕುಂತೂರು ಸಂಗಪ್ಪಶಾಸ್ತ್ರಿ, ಜಗದ್ಗುರು ಶ್ರೀಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೧



